ಮಾಸ್ತಿ ಅವರ ಕಥೆಗಳು:
ಒಂದು ಸಾಂಸ್ಕೃತಿಕ ಅಧ್ಯಯನ

(ಕನ್ನಡದ ಎಂ.ಫಿಲ್.ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರ ಪಡಿಸುತ್ತಿರುವ ನಿಬಂಧ)

ಸಂಶೋಧಕರು

ವೈ.ಕೆ.ಅರ್ಚನ

ಮಾರ್ಗದರ್ಶಕರು

ಪ್ರೊ.ಬಿ. ರಾಮಕೃಷ್ಣ

ಕರ್ನಾಟಕ ಸಂಘ(ರಿ),ಮಂಡ್ಯ.
ಎಚ್.ಎಲ್.ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ.

(ಕನ್ನಡ ವಿ.ವಿ.ಹಂಪಿ ಮಾನ್ಯತೆ ಪಡೆದಿದೆ)

೨೦೦೮-೨೦೦೯

ಮಾಸ್ತಿ ಅವರ ಕಥೆಗಳು : ಒಂದು ಸಾಂಸ್ಕೃತಿಕ ಅಧ್ಯಯನ

(ಕನ್ನಡ ಎಂ.ಫಿಲ್.ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ
ಸಾದರ ಪಡಿಸುತ್ತಿರುವ ನಿಬಂಧ)

ಸಂಶೋಧಕರು

ವೈ.ಕೆ.ಅರ್ಚನ

ರಿ.ನಂ: KRSMKS.00354

ಮಾರ್ಗದರ್ಶಕರು

ಪ್ರೊ.ಮ. ರಾಮಕೃಷ್ಣ

ಕರ್ನಾಟಕ ಸಂಘ(ರಿ),ಮಂಡ್ಯ.
ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ.

(ಕನ್ನಡ ವಿ.ವಿ.ಹಂಪಿ ಮಾನ್ಯತೆ ಪಡೆದಿದೆ)
೨೦೦೮-೨೦೦೯

ಮಾರ್ಗದರ್ಶಕರ ಪ್ರಮಾಣ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ ೨೦೦೮-೦೯ನೇ ಸಾಲಿಗೆ ಕನ್ನಡ ಎಂ.ಫಿಲ್.ಪದವಿಗಾಗಿ "ಮಾಸ್ತಿಯವರ ಕಥೆಗಳು : ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ಶೀರ್ಷಿಕೆಯ ನಿಬಂಧವನ್ನು ಸಿದ್ಧಪಡಿಸಿರುತ್ತಾರೆ. ಈ ನಿಬಂಧವಾಗಲಿ ಅಥವಾ ಇದರ ಅಧ್ಯಾಯವಾಗಲಿ ಬೇರೆ ಯಾವ ಗ್ರಂಥಗಳು ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿಲ್ಲ. ಈ ಸಂಶೋಧನಾ ನಿಬಂಧವನ್ನು ಕನ್ನಡ ಎಂ.ಫಿಲ್.ಪದವಿಗೆ ಸಂಬಂಧಿಸಿದಂತೆ ಮೌಲ್ಯ ಮಾಪನಕ್ಕೆ ಒಪ್ಪಿಸುತ್ತಿರುವುದಕ್ಕೆ ನನ್ನ ಒಪ್ಪಿಗೆ ಇದೆ.

ಸ್ಥಳ: ಮಂಡ್ಯ.
ದಿನಾಂಕ: ೨೦\೦೯\೨೦೦೯

ಮಾರ್ಗದರ್ಶಕರ ಸಹಿ
(ಪ್ರೊ.ಮ. ರಾಮಕೃಷ್ಣ)

ಅಭ್ಯರ್ಥಿಯ ಘೋಷಣಾ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ ೨೦೦೮-೦೯ ನೇ ಸಾಲಿಗೆ ಕನ್ನಡ ಎಂ.ಫಿಲ್.ಅಭ್ಯರ್ಥಿಯಾಗಿ ನಾನು ಪ್ರವೇಶ ಪಡೆದಿರುತ್ತೇನೆ. ನನ್ನ ಎಂ.ಫಿಲ್ ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು "ಮಾಸ್ತಿ ಅವರ ಕಥೆಗಳು : ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಪ್ರೊ.ಮ. ರಾಮಕೃಷ್ಣ ಕನ್ನಡ ಪ್ರಾಧ್ಯಾಪಕರು ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ. ಈ ನಿಬಂಧವನ್ನಾಗಲಿ, ನಿಬಂಧದ ಆಧ್ಯಾಯವನ್ನಾಗಲಿ ಬೇರೆ ಯಾವ ಗ್ರಂಥಗಳು ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ: ಮಂಡ್ಯ.
ದಿನಾಂಕ: ೨೦\೦೯\೨೦೦೯

Archana. Y.K.
ಸಂಶೋಧನಾ ವಿದ್ಯಾರ್ಥಿಯ ಸಹಿ

ಪರಿವಿಡಿ

ಅಧ್ಯಾಯ – ೧
ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಆಧುನಿಕ ಕನ್ನಡ ಸಾಹಿತ್ಯವು ಹಲವು ಪ್ರಕಾರಗಳಲ್ಲಿ ರಚನೆಗೊಂಡಿದೆ. ಅವುಗಳಲ್ಲಿ ಸಣ್ಣ ಕಥೆಯು ಇಂದು ಹುಲುಸಾಗಿ ಬೆಳೆದಿರುವ ಒಂದು ಸಾಹಿತ್ಯ ಪ್ರಕಾರವಾಗಿದ್ದು, ಇದರ ಸ್ಥಾನ ಸಾಹಿತ್ಯ ಕ್ಷೇತ್ರದಲ್ಲಿ ಅಪೂರ್ವವಾಗಿದೆ. ಸಮಕಾಲೀನ ಸಾಹಿತ್ಯ ಕ್ಷೇತ್ರದಲ್ಲಿ ಅತ್ಯಂತ ವಿಸ್ತಾರವೂ ಮಹತ್ವವೂ ಆದ ಸಾಹಿತ್ಯ ಪ್ರಕಾರ ಇದಾಗಿದೆ. ಇಂಥ ಸಾಹಿತ್ಯ ಪ್ರಕಾರಕ್ಕೆ ಒಲಿದು, ಅದರಲ್ಲಿ ಆರಂಭ ಕಾಲದಲ್ಲೇ ಸಾಹಿತ್ಯ ರಚನೆ ಮಾಡಿ ಪ್ರಸಿದ್ಧರಾದ ಲೇಖಕರಲ್ಲಿ ಮಾಸ್ತಿಯವರು ಪ್ರಮುಖರಾಗಿದ್ದಾರೆ. ಮಾಸ್ತಿಯವರು ನವೋದಯ ಕಾಲ ಘಟ್ಟದಲ್ಲಿ ಬರುವ ಲೇಖಕರಾಗಿದ್ದಾರೆ.

ಮಾಸ್ತಿ ಅವರು ಕನ್ನಡದ ಆರಂಭದ ಕಥೆಗಾರರಲ್ಲಿ ಪ್ರಮುಖರು. ಕಥಾ ಸಾಹಿತ್ಯಕ್ಕೇ ಒಂದು ಸ್ವರೂಪ, ಚೌಕಟ್ಟನ್ನು ನೀಡಿದ ಕಥೆಗಾರರು. ಹಾಗೂ ಮುಂದಿನ ಕಥೆಗಾರರ ಮೇಲೆ ಗಾಢಪ್ರಭಾವವನ್ನು ಬೀರಿದವರು. ಇವರು ಸುಮಾರು ಐದು ಸಂಪುಟಗಳನ್ನು ಒಳಗೊಂಡಂತೆ ನೂರು ಕಥೆಗಳನ್ನು ಬರೆಯುವುದರ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

ಮಾಸ್ತಿ ವೆಂಕಟೇಶ್ ಅಯ್ಯಂಗಾರ್‌ರವರ ಸಾಹಿತ್ಯವನ್ನು ಕುರಿತಂತೆ 'ಶ್ರೀನಿವಾಸ' ಎಂಬ ಅಭಿನಂದನ ಗ್ರಂಥವು ಹೊರಬಂದಿದೆ. ಮೈಸೂರು ವಿಶ್ವವಿದ್ಯಾನಿಲಯವು 'ಮಾಸ್ತಿ ವಿಶೇಷ ಸಂಚಿಕೆ'ಯನ್ನು ಬಿಡುಗಡೆಮಾಡಿದೆ. 'ಮಾಸ್ತಿ' ಎಂಬ ಪುಸ್ತಕವು ಬಂದಿದೆ. 'ಮಾಸ್ತಿಯವರ ಸಾಹಿತ್ಯ: ಒಂದು ಅಧ್ಯಯನ'ವನ್ನು ಬೆಂಗಳೂರು ವಿಶ್ವವಿದ್ಯಾನಿಲಯವು ಹೊರತಂದಿದೆ. ಮಾಸ್ತಿಯವರ ಸಾಹಿತ್ಯವನ್ನು ಕುರಿತಂತೆ ಬಂದಿರುವ ಗ್ರಂಥಗಳನ್ನು ನೋಡಿದರೆ ಸಾಹಿತ್ಯಾಸಕ್ತರ ಒಲವು ಎಷ್ಟರಮಟ್ಟಿಗಿದೆ ಎಂಬುದನ್ನು ಕಾಣಬಹುದು.

ಶ್ರೀನಿವಾಸರ ಸಾಹಿತ್ಯದಲ್ಲಿ ಮೇಲುನೋಟಕ್ಕೆ ಸಂಪ್ರದಾಯಬದ್ಧ ಹಾಗೂ ನವೋದಯದ ಛಾಯೆ ಕಂಡು ಬರುವುದರಿಂದ ಅವರನ್ನು ನವೋದಯ ಕಾಲಘಟ್ಟದಲ್ಲಿ ಗುರುತಿಸಲಾಗುತ್ತದೆ. ಸಾಂಸ್ಕೃತಿಕ ಪರಂಪರೆಯಲ್ಲಿ ಆಳವಾಗಿ ಬೇರು ಬಿಟ್ಟ ಒಬ್ಬ ಲೇಖಕ ಹೊಸ ಗಾಳಿ ಬೆಳಕಿನಲ್ಲಿ ಹೇಗೆ ಕಾಲಕ್ಕೆ

ತಕ್ಕಂತೆ, ಸಂವೇದಿಸಬಲ್ಲ ಎಂಬುದು ಮಾಸ್ತಿಯವರ ಸಾಹಿತ್ಯವನ್ನು ಪೂರ್ವಾಗ್ರಹರಹಿತವಾಗಿ ಅಧ್ಯಯನ ಮಾಡಿದಾಗ ತಿಳಿಯುತ್ತದೆ.

ಮಾಸ್ತಿ ಅವರು ಹೊಸಗನ್ನಡ ಸಾಹಿತ್ಯದ ಆರಂದಲ್ಲಿ ಕೃತಿರಚನೆ ಮಾಡತೊಡಗಿ ತಮ್ಮ ಜೀವನದುದ್ದಕ್ಕೂ, ಸುಮಾರು ಏಳು ದಶಕಗಳಷ್ಟು ಕಾಲ ಅದನ್ನು ಮಾಸ್ತಿ ವ್ರತವೆನ್ನುವಂತೆ ನಡೆಸಿಕೊಂಡು ಬಂದಿದ್ದಾರೆ. ಇವರು ಕೃತಿಗಳನ್ನು ರಚಿಸುವುದರ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಸಿದ್ದಾರೆ.

ಮಾಸ್ತಿ ಅವರನ್ನು 'ಸಣ್ಣ ಕತೆಗಳ ಜನಕ' ಎಂದು ಕರೆಯುತ್ತಾರೆ. ಇವರು ತಮ್ಮ ಅನುಭವಗಳನ್ನು, ವಾಸ್ತವ ಘಟನೆಗಳನ್ನ, ತೆಗೆದುಕೊಂಡು ಅವನ್ನು ತಮ್ಮ ಕತೆಗಳಲ್ಲಿ ಹೊಸದೇನೋ ಎನ್ನುವ ರೀತಿಯಲ್ಲಿ ಹೇಳುವುದರ, ಮೂಲಕ ಓದುಗರಲ್ಲಿ ಸಮಾಜದ ಬಗ್ಗೆ ಅರಿವನ್ನು ಉಂಟುಮಾಡುತ್ತಾರೆ. ಒಂದು ರೀತಿಯಲ್ಲಿ ತಮ್ಮ ಕತೆಗಳ ಮೂಲಕ ಸಮಾಜವನ್ನು ತಿದ್ದುವ ಪ್ರಯತ್ನ ಮಾಡಿದ್ದಾರೆ.

ಶ್ರೀನಿವಾಸ ಅವರು ಕನ್ನಡ ಕಥಾಸಾಹಿತ್ಯದಲ್ಲಿ ನೂರು ಕತೆಗಳನ್ನು ಬರೆದಿದ್ದಾರೆ. ಈ ನೂರು ಕತೆಗಳು ೫ ಸಂಪುಟಗಳಲ್ಲಿ ಬಂದಿವೆ. ಆ ನೂರು ಕತೆಗಳಲ್ಲಿ ನಾನು ಈ ನಿಬಂಧದಲ್ಲಿ ೧೯ ಕತೆಗಳನ್ನು ಅಧ್ಯಯನಕ್ಕೆ ತೆಗೆದುಕೊಂಡಿದ್ದೇನೆ. ಅವುಗಳೆಂದರೆ

೧. ರಂಗಸಾಮಿಯ ಅವಿವೇಕ

೨. ಕಾಮನ ಹಬ್ಬದ ಒಂದು ಕತೆ

೩. ಇನ್ನೊಂದು ಹಳೆಯ ಕತೆ

೪. ನಿಜಗಲ್ಲಿನ ರಾಣಿ

೫. ವೆಂಕಟಶಾಮಿಯ ಪ್ರಣಯ

೬. ಮಲೆನಾಡಿನ ಒಂದು ಪಿಶಾಚ

೭. ಜೋಗ್ಯೋರ ಅಂಜಪ್ಪನ ಕೋಳಿಕತೆ

೮. ಪಂಡಿತನ ಮರಣ ಶಾಸನ

೯. ಮೊಸರಿನ ಮಂಗಮ್ಮ

೧೦. ಸುಬೇದಾರರಿಗೆ ಪ್ಯಾದೇ ಮಾತು

೧೧. ಹೇಮಕೂಟದಿಂದ ಬಂದ ಮೇಲೆ

೧೨. ಕಲ್ಮಾಡಿಯ ಕೋಣ

೧೩. ಆಚಾರ್ಯರ ಪತ್ನಿ

೧೪. ಗೌತಮಿ ಹೇಳಿದ ಕತೆ

೧೫. ವೆಂಕಡಿಗನ ಹೆಂಡತಿ

೧೬. ಬಿಳಿಗಿರಿ ರಂಗ

೧೭. ಬೈಚೇಗೌಡ

೧೮. ನಳಿನಿಯ ತಂದೆ

೧೯. ದುರದೃಷ್ಟದ ಹೆಣ್ಣು ಎಂಬ ಮಾಸ್ತಿಯವರ ಈ ಕಥೆಗಳನ್ನು ಓದಿ ಮನನ ಮಾಡಿ ಅವರ ಕಥೆಗಳಲ್ಲಿರುವ ಸಾಂಸ್ಕೃತಿಕ ಅಂಶಗಳನ್ನು ಈ ನಿಬಂಧದಲ್ಲಿ ಹೇಳಿದ್ದೇನೆ.

ಯಾವುದೇ ಒಂದು ವಿಷಯದ, ಅಧ್ಯಯನಕ್ಕೆ ನಾವು ತೊಡಗುವ ಮೊದಲು ಆ ವಸ್ತುವಿನ ಬಗ್ಗೆ ನಮ್ಮಲ್ಲಿ ಒಲವು ಅಥವಾ ಅಭಿರುಚಿ ಇದ್ದಾಗ ಮಾತ್ರ ನಾವು ಆಯ್ಕೆ ಮಾಡಿಕೊಂಡಿರುವ ವಿಷಯದ ಅಧ್ಯಯನದಲ್ಲಿ ತಲ್ಲೀನರಾಗಿ ನಮ್ಮ ಸಂವೇದನಾ ಶೀಲತೆ ಮಟ್ಟಿಗೆ ಅದನ್ನು ವಿಶ್ಲೇಷಿಸಲು ಸಾಧ್ಯ.

ಪ್ರಸ್ತುತ ಈ ನಿಬಂಧದಲ್ಲಿ ಮೊದಲನೆಯ ಅಧ್ಯಾಯದಲ್ಲಿ 'ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ'ಯಲ್ಲಿ ಈ ನಿಬಂಧ ರಚನೆಗೆ ಎಷ್ಟು ಕತೆಗಳನ್ನು ತೆಗೆದುಕೊಳ್ಳಲಾಗಿದೆ, ಆ ಕತೆಗಳಲ್ಲಿ ಯಾವ ಅಂಶವನ್ನು ಗುರುತಿಸಲಾಗುತ್ತಿದೆ ಎಂಬುವುದನ್ನು ಹೇಳಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಸಣ್ಣಕಥೆಗಳ ಉಗಮ-ವಿಕಾಸದಲ್ಲಿ ಸಣ್ಣಕಥೆಯ ಉಗಮದ ಬಗ್ಗೆ ಮತ್ತು ಯಾವ ಕಾಲಘಟ್ಟಗಳಲ್ಲಿ ಯಾರು ಯಾರು ಕಥೆಗಳನ್ನು ರಚಿಸಿದ್ದಾರೆ. ಎಂಬುವುದನ್ನು ಹೇಳಲಾಗಿದೆ. ಮೂರನೆ ಅಧ್ಯಾಯ 'ಮಾಸ್ತಿಯವರ ಜೀವನ ಮತ್ತು ಸಾಧನೆ'ಯಲ್ಲಿ ಬಾಲ್ಯ ವಿದ್ಯಾಭ್ಯಾಸ, ವೃತ್ತಿಯ ಬಗ್ಗೆ, ಅವರು ಬರೆದಿರುವ ಕೃತಿಗಳ ಬಗ್ಗೆ ಪ್ರಸ್ತಾಪ ಮಾಡಲಾಗಿದೆ. ನಾಲ್ಕನೆಯ ಅಧ್ಯಾಯವನ್ನು 'ಸಾಮಾಜಿಕ

ಹಿನ್ನೆಲೆ'ಯಲ್ಲಿ ನೋಡಲಾಗಿದೆ. ಅಂದರೆ ಗ್ರಾಮೀಣ ವಿಧವೆಯರು, ಜಾತಿ, ನ್ಯಾಯ ತೀರ್ಮಾನ, ಗಂಡ-ಹೆಂಡತಿ ಸಂಬಂಧಗಳು, ಆಚರಣೆಗಳು, ಕುಟುಂಬ ವ್ಯವಸ್ಥೆ, ಜನಜೀವನ, ಭಕ್ತ-ಭಗವಂತನ ಸಂಬಂಧದ ಬಗ್ಗೆ ಹೇಳಲಾಗಿದೆ. ಐದನೆಯ ಅಧ್ಯಾಯವಾದ 'ಸಾಂಸ್ಕೃತಿಕ ಅಧ್ಯಯನ'ದಲ್ಲಿ ಸಾಂಸ್ಕೃತಿಕ ವಿಚಾರಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಅಂದರೆ ಹಬ್ಬ-ಸಂಪ್ರದಾಯಗಳು ದೈವ, ವೃತ್ತಿಗಳ ಬಗ್ಗೆ ಪ್ರಸ್ತಾಪಮಾಡಲಾಗಿದೆ. ಆರನೆಯ ಅಧ್ಯಾಯದಲ್ಲಿ 'ಮಾಸ್ತಿಯವರ ಶೈಲಿ ಮತ್ತು ಧೋರಣೆ' ಬಗ್ಗೆ ಹೇಳಲಾಗಿದೆ. ಏಳನೇಯ ಅಧ್ಯಾಯವಾದ ಉಪಸಂಹಾರದಲ್ಲಿ ಮಾಸ್ತಿಯವರ ಒಟ್ಟು ನೋಟವಿದೆ.

ಈ ನಿಬಂಧವು ಮಾಸ್ತಿ ಅವರ ಸಣ್ಣ ಕಥೆಗಳ ಸಾಂಸ್ಕೃತಿಕ ಅಧ್ಯಯನಕ್ಕೆ ಸೀಮಿತವಾಗಿದೆ. ಪ್ರಾಸಂಗಿಕವಾಗಿ ಸಾಹಿತ್ಯದ ಅಧ್ಯಯನವನ್ನು ಮಾಡಲಾಗಿದೆ. ಸಾಂಸ್ಕೃತಿಕ ಅಧ್ಯಯನದಲ್ಲಿ ಭಾಷಿಕ ಅಧ್ಯಯನವೂ ಮುಖ್ಯ ಪಾತ್ರವಹಿಸುವುದರಿಂದ ಮಾಸ್ತಿಯವರ ಭಾಷಾ ಪಜ್ಞೆಯ ಬಗ್ಗೆ ಪ್ರತ್ಯೇಕವಾಗಿಯೆ ವಿವೇಚನೆ ನಡೆಸಲಾಗಿದೆ. ಹಾಗೆಯೇ ಸಾಂಸ್ಕೃತಿಕ ಅಂಶಗಳನ್ನು ಗುರುತಿಸುವುದೇ ಈ ನಿಬಂಧ ರಚನೆಯಾಗಿದೆ.

ಅಧ್ಯಾಯ-೧
ಸಣ್ಣ ಕಥೆಗಳ ಉಗಮ-ವಿಕಾಸ

ಕನ್ನಡದಲ್ಲಿ ಸಣ್ಣಕಥೆ ಅತ್ಯಂತ ಸಮೃದ್ಧವಾಗಿ ಬೆಳೆದಿರುವ ಸಾಹಿತ್ಯ ಪ್ರಕಾರವಾಗಿದೆ. ಸಣ್ಣಕಥೆ ಎಂಬ ಶಬ್ದವೂ ಇಂಗ್ಲೀಷಿನ ' Short story ' ಎಂಬುದರ ಶಬ್ದಶಃ ಭಾಷಾಂತರವಾಗಿದೆ. ಆದರೆ ಗದ್ಯ ಕಥೆಯ ರೂಪ ಕನ್ನಡ ಸಾಹಿತ್ಯಕ್ಕೆ ಪೂರ್ತಿ ಹೊಸದೇನೂ ಅಲ್ಲ. 'ಶಿವಕೋಟ್ಯಾಚಾರ್ಯನ ವಡ್ಡಾರಾಧನೆಯೇ' ಕನ್ನಡದ ಅತ್ಯಂತ ಪ್ರಾಚೀನ ಗದ್ಯ ಕಥೆಗಳ ಸಂಕಲನವಾಗಿದೆ. ಜೈನ ಧರ್ಮದ ತತ್ವಗಳನ್ನು ಪ್ರತಿಪಾದಿಸಲು ರಚಿತವಾದ ಇದರಲ್ಲಿ ಒಟ್ಟು ಹತ್ತೊಂಬತ್ತು ಮಹಾಸತ್ವರ ಆಧ್ಯಾತ್ಮಿಕ ಸಧಾನೆಯನ್ನು ಚಿತ್ರಿಸುತ್ತವೆ. ಇದರ ಅನಂತರ ಬಂದ ದುರ್ಗಸಿಂಹನ 'ಪಂಚತಂತ್ರ', ನಯಸೇನನ 'ಧರ್ಮಾಮೃತ'ಗಳೂ ಗದ್ಯ ಕಥೆಗಳ ಸಂಕಲನಗಳೇ ಆಗಿವೆ.

ಕನ್ನಡ ಕಥಾ ಸಾಹಿತ್ಯದಲ್ಲಿ ಸುದೀರ್ಘವಾದ ಇತಿಹಾಸವನ್ನು ಹೊಂದಿರುವ ಈ ಪ್ರಕಾರ ಹಲವಾರು ಘಟ್ಟಗಳಲ್ಲಿ ಹಲವಾರು ಮಾದರಿಗಳನ್ನು ಕಂಡಿದೆ. ಈ ಮಾದರಿಗಳಲ್ಲಿ ಕನ್ನಡ ಕಥನ ಕಲೆಯ ನೆಲೆಗಳು ವಿವಿಧಲಯಗಳಲ್ಲಿ ಪ್ರಕಟಗೊಂಡಿವೆ. ಕನ್ನಡ ಸಾಹಿತ್ಯದ ಒಂದು ಸ್ವತಂತ್ರ ಸೃಷ್ಟಿ 'ಕಥೆ' ಎಂದು ಕೆಲವು ವಿದ್ವಾಂಸರುವಾದಿಸಿದರೆ, ಮತ್ತೆ ಕೆಲವು ವಿದ್ವಾಂಸರು ಕಥೆ ಪಾಶ್ಚತ್ಯರಿಂದ ಎರವಲಾಗಿ ಬಂದದ್ದು ಎಂದು ಅಭಿಪ್ರಾಯಪಡುತ್ತಾರೆ. ಆದರೆ ಕಥೆ ಕನ್ನಡ ಸಾಹಿತ್ಯದಲ್ಲ ಸ್ವತಂತ್ರ ಸೃಷ್ಟಿ ಎಂಬುದರ ಬಗ್ಗೆ ಹೆಚ್ಚು ಜನರಲ್ಲಿ ಸಹಮತವಿದೆ. ಕಥೆಯ ಎಳೆ ಹಾಗೂ ಅದರ ಕೌಶಲ ಉಪನಿಷತ್ತು, ಅದರ ಹಿತೋಪದೇಶ, ಪಂಚತಂತ್ರ, ರಾಮಾಯಣ, ಮಹಾಭಾರತ ಮುಂತಾದ ಕಾವ್ಯಗಳಲ್ಲಿ ಕಾಣಿಸಿಕೊಂಡಿವೆ.

ಕಥೆ ಜನತೆಗೆ ಹೊಸಕಲ್ಲ, ಮಾನವನು ಮಾತನಾಡುವುದಕ್ಕೇ ಆರಂಭಿಸಿದ ದಿನದಿಂದ ಕಥೆ ಹೇಳುವ ಪ್ರವೃತ್ತಿ ಅವನಲ್ಲಿ ಅಂಕುರಿಸಿದೆ. ಕಥೆಗಳು ಎಲ್ಲಾ ದೇಶಗಳಲ್ಲೂ ಎಲ್ಲಾ ಭಾಷೆಗಳಲ್ಲೂ ಕಿವಿಯಿಂದ ಕಿವಿಗೆ ಹರಿದು ಬಂದಿವೆ. "ಕಥಾ ಎಂಬ ಪದ 'ಕಥ್' ಎಂದರೆ ಹೇಳು ಎಂಬ ಪದದಿಂದ ಹುಟ್ಟಿದ್ದು. ಹಾಗೆ ಹರಿದು ಬಂದ ಕಥೆಗಳಲ್ಲಿ ಕಥಾವಸ್ತುವಿಗೇ ಹೆಚ್ಚು ಪ್ರಾಧಾನ್ಯವಿರುವುದು."[೧]

ಪ್ರಾಚೀನರಲ್ಲಿ ಕಥೆ ಹೇಳುವ ಮತ್ತು ಕೇಳುವ ಸ್ವಾರಸ್ಯಕರವಾದ ಪದ್ಧತಿಗಳು ಇದ್ದವೆಂದು ತಿಳಿದು ಬರುತ್ತದೆ. ಸ್ವಾರಸ್ಯವೇ ಕಥೆಯ ಜೀವ ಎಂಬ ನಂಬಿಕೆ ಆಗ ಬಲವಾಗಿತ್ತು. ಧರ್ಮ, ನೀತಿ ಮುಂತಾದ ಧಾರ್ಮಿಕ ವಿಚಾರಗಳ ಪ್ರತಿಪಾದನೆಗಾಗಿ ಕಥೆ ಒಂದು ಮಧ್ಯಮವಾಗಿತ್ತು. ಕ್ರಮೇಣವಾಗಿ ಅದು ಹಲವು ಸ್ಥಿತ್ಯಂತರಗಳಿಗೆ ಒಳಗಾಯಿತು. ಮನುಷ್ಯನ ವ್ಯಷ್ಟಿ ಪ್ರಜ್ಞೆಯ ಶೋಧನೆಯ ಅಭಿವ್ಯಕ್ತಿ ಮಾಧ್ಯಮವಾಗಿ ಪರಿಣಮಿಸಿತು; ಬದುಕಿನಲಯಗಳು, ಸಾಮಾಜಿಕ ಸಂಘರ್ಷಗಳು ಕಥೆಯಲ್ಲಿ ಪ್ರವೇಶಿಸಿದವು; ಬದುಕಿನ ದ್ವಂದ್ವಗಳನ್ನು ಕೃತಿಯಲ್ಲಿ ಕಟ್ಟುವ ಕಲಾಕೌಶಲ ಕಥೆಗಾರರಿಗೆ ಎದುರಾದವು. ಬದುಕಿನ ಕೆಡುಕನ್ನು ಮತ್ತು ವ್ಯಕ್ತಿಯ ಚಹರೆಗಳನ್ನು ಭಾಷೆಯಲ್ಲಿ ಸಾವಯವ ಶಿಲ್ಪವನ್ನಾಗಿ ಒಡಮೂಡಿಸಿದ ಕಲಾತ್ಮಕ ಕೌಶಲ ಕಥೆಗಾರರಿಗೆ ಒಂದು ಸವಾಲಾಗಿ ಪರಿಣಮಿಸಿತು.

"ಸಣ್ಣಕಥೆಯಲ್ಲಿ ಕತೆಗಾರ ಒಂದೇ ಒಂದು ವಿಷಯವನ್ನೆತ್ತಿ ರಸವತ್ತಾಗಿ ವರ್ಣಿಸಿ ಓದುಗನ ಮೇಲೆ ಒಂದು ನಿರ್ದಿಷ್ಟವಾದ ಪರಿಣಾಮವನ್ನುಂಟು ಮಾಡುತ್ತಾನೆ. ಅದರಲ್ಲಿ ನಿರ್ದೇಶಿಸಿರುವ ವಿಷಯ ಒಂದೇ ಒಂದು ಸನ್ನಿವೇಶಕ್ಕೇ ಸಂಬಂಧ ಪಟ್ಟಿರಬಹುದು, ಅಥವಾ ಅನೇಕ ಸನ್ನಿವೇಶಗಳನ್ನು ಒಳಗೊಂಡಿರಬಹುದು. ಜೀವನದ ಒಂದೇ ಒಂದು ಚಿತ್ರವನ್ನು ಚಿತ್ರಿಸಿರಬಹುದು; ಜೀವನದ ಅನೇಕ ಅಂಶಗಳು ಅದರಲ್ಲಿ ಬಂದಿರಬಹುದು. ಕಥೆ ನಡೆಯುವ ಕಾಲ ಒಂದೇ ದಿನದಲ್ಲಿ ಕೆಲವು ಗಂಟೆಗಳ ಅವಧಿಯಲ್ಲಿ ನಡೆದಿದ್ದಾಗಬಹುದು. ನಡುವೆ ವರ್ಷಗಳ ಅವಧಿಯೂ ಬರಬಹುದು. ಆದರೆ ಕಥೆಯ ವಸ್ತು, ಅಲ್ಲಿನ ಪಾತ್ರ ರಚನೆ, ಅದರಲ್ಲಿನ ಆವರಣ ಎಲ್ಲವೂ ಒಂದೇ ಒಂದು ಗುರಿಯನ್ನು ಮುಟ್ಟಿಸುವಂತೆ ಪರಿಪೋಷಕವಾಗಿದ್ದು ಓದುಗನಲ್ಲಿ ಒಂದೇ ಒಂದು ಪರಿಣಾಮವನ್ನು ಮೂಡಿಸುವಂತಿದ್ದರೇ ಅದು ಸಣ್ಣಕಥೆ ಎನ್ನಿಸಿಕೊಳ್ಳುತ್ತವೆ."೨

ಕನ್ನಡ ಸಣ್ಣಕಥೆಯ ಬೆಳವಣಿಗೆಯನ್ನು ಆಧುನಿಕ ಕನ್ನಡ ಸಾಹಿತ್ಯದ ನಾಲ್ಕು ಹಂತಗಳಾಗಿ ಗುರುತಿಸಬಹುದಾಗಿದೆ. ಅವುಗಳು ಯಾವುವುವೆಂದರೆ,

೧.ನವೋದಯ.

೨.ಪ್ರಗತಿಶೀಲ.

೩.ನವ್ಯ.

೪.ದಲಿತ ಬಂಡಾಯ. ಈ ಎಲ್ಲಾ ಯುಗಗಳಲ್ಲಿ ಅನೇಕ ಪ್ರಸಿದ್ಧ ಲೇಖಕರು ಕಥೆಗಳನ್ನು ರಚಿಸಿದ್ದಾರೆ.

ಮೊದಲನೆಯಾದಾಗಿ ನಾವು ನವೋದಯ ಕಾಲಘಟ್ಟವನ್ನು ಗಮನಿಸಿದರೆ, ಕನ್ನಡ ಸಣ್ಣ ಕಥೆಯು ಮೊದಲನೆಯ ನಾಲ್ಕು ದಶಕಗಳನ್ನು ವ್ಯಾಪಿಸಿದೆ. ಈ ಕಾಲಘಟ್ಟದಲ್ಲಿ ಸಣ್ಣ ಕಥೆಗೆ ಮಹತ್ವದ ಕೊಡುಗೆಯನ್ನು ಪ್ರಥಮವಾಗಿ ನೀಡಿದವರು ಪಂಜೆಮಂಗೇಶರಾಯರು. ೧೯೦೦ ಹೊತ್ತಿಗೆ ಮಂಗಳೂರಿನ 'ಸುವಾಸಿನಿ' ಮಾಸಿಕದಲ್ಲಿ ಅವರು 'ನನ್ನ ಚಿಕ್ಕತಾಯಿ', 'ಭಾರತ ಶ್ರವಣ' ಕಮಲ ಮರದ ಹೊಟ್ಟಿಯಲ್ಲಿ ಪ್ರಕಟವಾದವು. ಇವು ಕನ್ನಡ ಸಣ್ಣ ಕಥೆಗಳ ಮೊದಲ ಉದಾಹರಣೆಗಳಾಗಿವೆ.

ಪಂಜೆಮಂಗೇಶ ಅವರ ಅನಂತರ ಮಂಗಳೂರಿನ ಎಂ.ಎನ್.ಕಾಮತ್ ಅವರು ೧೮೮೩-೧೯೪೦ರಲ್ಲಿ ಕಥೆಗಳನ್ನು ಬರೆಯಲು ಪ್ರಾರಂಭಿಸಿದರು. ಇವರ ಜೊತೆಯಲ್ಲಿಯೇ ಕೆರೂರು ವಾಸುದೇವ ಚಾರ್ಯರು ಕಥೆಗಳನ್ನು ಬರೆಯಲು ಪ್ರಾರಂಭಿಸಿದರು. ಅದರೆ ಇವರ ಕಥೆಗಳು ಪತ್ರಿಕೆಗಳಲ್ಲಿ ಪ್ರಕಟವಾಗಿ ಅನಂತರ ಮರೆತುಹೊದವು. ಇವರುಗಳ ನಂತರ ಕನ್ನಡ ಸಣ್ಣಕಥಾ ಲೋಕದಲ್ಲಿ ಸುಪ್ರಸಿದ್ಧರಾದವರು ಮಾಸ್ತಿ ವೆಂಕಟೇಶ್ ಅಯ್ಯಂಗಾರ್. ಇವರು ಸಣ್ಣಕಥೆಗೆ ಪ್ರವೇಶ ಮಾಡುವವರೆಗೂ ಅದಕ್ಕೊಂದು ಸ್ಪಷ್ಟ ಸ್ವರೂಪ ಬಂದಿರಲಿಲ್ಲ. ಬದುಕಿನ ಅನೇಕ ಸಂಗತಿಗಳನ್ನು ಗಂಭೀರ ಚಿಂತನೆ ಒಳಪಡಿಸಿ ಹೇಳುವ ಪ್ರಭಾವ ಶಾಲೀ ಮಧ್ಯಮವನ್ನಾಗಿ ಕಥೆಯನ್ನು ಮಾಡಿಕೊಂಡರು.

ಮಾಸ್ತಿ ಅವರು ೧೯೧೧ ರಲ್ಲಿ 'ಮಧುರವಾಣಿ' ಮಾಸಿಕದಲ್ಲಿ ಅವರ ಮೊದಲ ಕಥಾ ಸಂಕಲನ, 'ಕೆಲವು ಸಣ್ಣ ಕಥೆಗಳು' ಪ್ರಕಟವಾದವು. ಇದು ಕನ್ನಡದ ಮೊದಲ ಕಥಾ ಸಂಕಲನ ಮತ್ತು ಇದರೊಂದಿಗೆ ಕನ್ನಡ ಸಣ್ಣ ಕಥೆ ಪ್ರಬುದ್ಧತೆಯನ್ನು ಪಡೆದು ಕೊಂಡಿತು. ಮಾಸ್ತಿಯವರು ತಮ್ಮ ಕಥೆಗಳಲ್ಲಿ ವೈವಿಧ್ಯ ಪೂರ್ಣವಾದ ಪಾತ್ರಗಳನ್ನು, ವಸ್ತುಗಳನ್ನು ತಂದಿದ್ದಾರೆ. ಜೋಗ್ಯರ ಅಂಜಪ್ಪ, ವೆಂಕಟಿಗ, ನೆಪೋಲಿಯನ್ ಚಕ್ರವರ್ತಿ, ಗಯಟೆಯವರೆಗೆ ಅವರ ಪಾತ್ರಗಳ ಹರವಿದೆ.

ಮಾಸ್ತಿಯವರ ನಂತರ ಅತ್ಯಂತ ಮುಖ್ಯರಾದವರೆಂದರೆ ಆನಂದ ಮತ್ತು ಕೆ.ಗೋಪಲ ಕೃಷ್ಣರಾವ್, ಮಾಸ್ತಿಯವರಂತೆ ಇವರೂ ಸಣ್ಣಕಥೆಯ ಮೇಲೆ ಗಮನವನ್ನು ಕೇಂದ್ರಿಕರಿಸಿದ್ದರು. ಆನಂದರು ತಮ್ಮ ಆಕರ್ಷಕ ಪ್ರಣಯ ಕಥಗಳಿಂದ ಜನಪ್ರಿಯರಾಗಿದ್ದಾರೆ. ಇವರ ಮೊದಲ ಕಥೆ 'ಭವತಿ ಭಿಕ್ಷಾಂದೇಹಿ', 'ಕೊನೆ ಎಂಟಾಣೆ' ಮತ್ತು 'ಬೇವು ಬೆಲ್ಲ', 'ರಾಧೆಯ ಕ್ಷಮೆ', 'ನಾವೂ ಹೀಗೆಯೇ', 'ಪದ್ಮಪಾಕ' ಇವುಗಳು ಆನಂದರ ಕಥೆಗಳು. ಮಾಸ್ತಿಯವರನ್ನು ಅನುಸರಿಸಿ

ಬರೆದವರಲ್ಲಿ ಭಾರತೀಪ್ರಿಯ ಅವರು ಒಬ್ಬರು. ಇವರ ಜೊತೆಗೆ ಶ್ರೀರಂಗ ಸ್ವಾಮಿ ಅಯ್ಯಂಗಾರ್, ಸಿ.ಕೆ.ವೆಂಕಟರಾಮಯ್ಯ ಮತ್ತು ಸೀತಾರಾಮಯ್ಯ ಇವರುಗಳು ಪ್ರಮುಖರಾಗಿದ್ದಾರೆ.

ಎ.ಆರ್.ಕೃಷ್ಣಶಾಸ್ತ್ರಿಗಳು ಮತ್ತು ಗೊರೂರು ರಾಮಸ್ವಾಮಿ ಅಯ್ಯಂಗಾರ್, ಇವರುಗಳು ಕೂಡ ಹೆಚ್ಚು ಕಥೆಗಳನ್ನು ಬರೆದವರು. ಗ್ರಾಮೀಣ ಬದುಕನ್ನು ತುಂಬ ಚೆನ್ನಾಗಿ ಚಿತ್ರಿಸಿದ್ದಾರೆ. ಹಾಗೆಯೇ ಇನ್ನೊಬ್ಬ ಪ್ರಮುಖ ಕಥೆಗಾರರು ಬೆಟಗೇರಿ ಕೃಷ್ಣ ಶರ್ಮ ಇವರೂ ಕೂಡ ಹಳ್ಳಿಯ ಬದುಕಿನ ನೈಜ ಚಿತ್ರಣಕ್ಕೆ ಹೆಸರಾಗಿದ್ದಾರೆ.

ಕುವೆಂಪು ಇವರ ಸಣ್ಣಕಥೆಗಳೆಂದರೆ 'ಕಿಂದರ ಜೋಗಿ', 'ಅಮಲನ ಕಥೆ', 'ನನ್ನ ದೇವರು' ಮತ್ತು ಇತರ ಕಥೆಗಳು, ಹಾಗೂ 'ಸನ್ಯಾಸಿ ಮತ್ತು ಇತರ ಕಥೆಗಳು' ಇವರ ಕಥಾ ಸಂಕಲನಗಳಾಗಿವೆ. ಬೇಂದ್ರೆಯವರೂ 'ನಿರಾಭರಣ ಸುಂದರಿ' ಎಂಬ ಕಥಾ ಸಂಕಲನವನ್ನು ರಚಿಸಿದ್ದಾರೆ. ಇನ್ನು ಮೊದಲಾದ ಹೆಸರುಗಳನ್ನು ನವೋದಯ ಯುಗದಲ್ಲಿ ಸ್ಮರಿಸಬಹುದು.

ನವೋದಯ ಕಾಲಘಟ್ಟದ ಅಂತ್ಯದ ವೇಳೆಗೆ ಪ್ರಗತಿಶೀಲ ಕಾಲಘಟ್ಟ ಪ್ರಾರಂಭವಾಯಿತು. ಈ ಕಾಲಘಟ್ಟದಲ್ಲಿ ಅನೇಕ ಸುಪ್ರಸಿದ್ಧ ಲೇಖಕರು ಬಂದರು. ಅವರಲ್ಲಿ ಅ.ನ.ಕೃ ನಂತರ ತ.ರಾ.ಸು, ನಿರಂಜನ, ಚದುರಂಗ, ಕಟ್ಟೀಮನಿ ಮುಂತಾದವರು ಪ್ರಮುಖರಾಗಿದ್ದಾರೆ. ನಿರಂಜನರ ಆರಂಭದ ಕಥಾ ಸಂಕಲನಗಳಾದ 'ರಕ್ತ ಸರೋವರ' ಮತ್ತು 'ಸಂಧಿಕಾಲ', 'ಕೊನೆಯ ಗಿರಾಕಿ' ಯಶಸ್ವಿಯಾದ ಕಥಾ ಸಂಕಲನಗಳಾಗಿವೆ. ನಿರಂಜನರಂತೆಯೇ ಬಸವರಾಜ ಕಟ್ಟೀಮನಿಯವರು ಕಥೆಗಳನ್ನು ಬರೆದರು. ಅದರಲ್ಲಿ ಅವರ ಮೊದಲ ಕಥಾ ಸಂಕಲನ 'ಕಾರವಾನ್' ೧೯೪೪ರಲ್ಲಿ ಪ್ರಕಟವಾಯಿತು. 'ಸುಂಟರಗಾಳಿ', 'ಸೈನಿಕನ ಹೆಂಡತಿ', 'ಸೆರೆಯಿಂದ ಹೊರಗೆ', 'ಹುಲಿಯಣ್ಣನ ಮಗಳು', 'ಆಗಸ್ಟ್ ಒಂಭತ್ತು', 'ಗುಲಾಬಿ ಹೂ' ಇತ್ಯಾದಿ ಇವರ ಇನ್ನಿತರ ಕಥಾ ಸಂಕಲನಗಳು. ಇವರ ನಂತರ ಮತ್ತೊಬ್ಬ ಪ್ರಗತಿಶೀಲ ಲೇಖಕರೆಂದರೆ "ತ.ರಾ.ಸು. ಅವರ ಮೊದಲ ಕಥಾ ಸಂಕಲನ 'ರೂಪಸಿ' ೧೯೪೭ರಲ್ಲಿ ಪ್ರಕಟವಾಯಿತು. ಇವರ ಇನ್ನಿತರ ಕಥೆಗಳೆಂದರೆ 'ತೊಟ್ಟಿಲು ತೂಗಿತು', 'ಗಿರಿಮಲ್ಲಿಗೆಯ ನಂದನದಲ್ಲಿ', 'ಇವೇ ನಿಜವಾದ ಸಂಪತ್ತು', 'ಮೂರು ಮತ್ತೊಂದು' ಹೆಸರಿನಲ್ಲಿ ಪ್ರಮುಖವಾದವುಗಳಾಗಿವೆ."[೩]

ಹೀಗೆ ಪ್ರಗತಿಶೀಲ ಸಾಹಿತ್ಯವು ಕನ್ನಡ ಸಣ್ಣ ಕಥೆಯ ಮೇಲೆ ಕೆಲವು ಗುರುತುಗಳನ್ನು, ಲೇಖಕರ ಮತ್ತು ಓದುಗರ ಸಾಮಾಜಿಕ ಪ್ರಜ್ಞೆಯನ್ನು ಚುರುಕುಗೊಳಸಿತು. ಇವರ ಕಥೆಗಳಗೆ ಸಾಮಾನ್ಯ ಮನುಷ್ಯನ ಕಷ್ಟ ಸುಖಗಳು ಮುಖ್ಯ ವಿಷಯಗಳಾದವು.

ಪ್ರಗತಿಶೀಲರ ನಂತರ ಸಾಹಿತ್ಯ ಯುಗಕ್ಕೆ ನವ್ಯ ಕಥೆಗಾರರು ಕಾಲನ್ನಿಡುತ್ತಾರೆ. ೧೯೫೦ ರಲ್ಲಿ ವಿ.ಕೃ.ಗೋಕಾಕರಿಂದ ನವ್ಯ ಚಳುವಳ ಅಭಿವ್ಯಕ್ತಿಯನ್ನು ಪಡೆಯುತ್ತದೆ. ಮೊದಲು ನವ್ಯದವರು ಕಾವ್ಯ ಮತ್ತು ಸಣ್ಣಕಥೆ ಎರಡೂ ಪ್ರಕಾರಗಳಲ್ಲಿ ಸಾಧನೆಯನ್ನು ಮಾಡಿದ್ದಾರೆ. ಇವರು ಕಥೆಗಳಲ್ಲಿ ಹೆಚ್ಚಾಗಿ ಧ್ವನಿ ಪೂರ್ಣವಾದ ಶೈಲಿಯನ್ನೇ ಬಳಸಿದರು. ಪ್ರಗತಿಶೀಲ ಕಥೆಯ ಮುಖ್ಯ ಲಕ್ಷಣ ಸಾಮಾಜಿಕ ಪ್ರಜ್ಞೆ ಎನ್ನಬಹುದಾದರೆ ನವ್ಯ ಕಥೆಯ ಮುಖ್ಯ ಲಕ್ಷಣ ತಾತ್ವಿಕ ಅಂತರ್ಮುಖತೆ ಎನ್ನಬಹುದು.

ಕನ್ನಡ ಸಣ್ಣಕಥೆಗೆ ಹೊಸ ರೂಪ ಕೊಡುವ ಈ ಪ್ರಯತ್ನದಲ್ಲಿ ನವ್ಯ ಕಥೆಗಾರರು ಲಾರೆನ್ಸ್, ಕಾಮು, ಕಾಫ್ಕಾ, ಸಾರ್ತ್ರೆ, ಮೊದಲಾದ ಅನೇಕ ಜನ ಪಶ್ಚಿಮದ ಲೇಖಕರ ಪ್ರಭಾವಗಳಗೆ ಒಳಗಾದರು. ಈ ಪ್ರಭಾವಗಳಂದ ನವ್ಯ ಚಳುವಳ ಅನೇಕ ಶ್ರೇಷ್ಠ ಲೇಖಕರನ್ನು ಸಣ್ಣ ಕಥೆಗಳನ್ನು ಕೊಡಲು ಶಕ್ತವಾಯಿತು. ಕನ್ನಡದ ಶ್ರೇಷ್ಠ ಸೃಜನಶೀಲ ಲೇಖಕರಲ್ಲಿ ಹಲವಾರು ಈ ಪ್ರಕಾರದಲ್ಲಿ ಕೆಲಸ ಮಾಡಿದರು. ಅವರುಗಳಲ್ಲಿ ಯು.ಆರ್. ಅನಂತಮೂರ್ತಿ ಇವರು ಕನ್ನಡ ಸಣ್ಣ ಕಥೆಗೆ ರೂಪ, ವಸ್ತುಗಳೆರಡರ ದೃಷ್ಟಿಯಿಂದ ಹೊಸ ತಿರುವು ಕೊಟ್ಟವರು. ಅವರ ಆರಂಭದ ಕಥೆಗಳಲ್ಲಿ ನವ್ಯತೆಯನ್ನು ಹಠದಿಂದ ಸಾಧಿಸುವ ಪ್ರಯತ್ನ ಕಾಣುತ್ತದೆ. ಆದರೆ ಆನಂತರದ ಕಥೆಗಳಲ್ಲಿ ಹೊಸ ಸಂವೇದನೆಗೆ ಸಣ್ಣಕಥೆಯನ್ನು ಪರಿಣಾಮಕಾರಿ ಮಾಧ್ಯಮವನ್ನಾಗಿ ಮಾಡಿಕೊಂಡು ಅದರ ಸಾಧ್ಯತೆಗಳನ್ನು ವಿಸ್ತರಿಸುವ ಗಂಭೀರ ಪ್ರಯತ್ನವಿದೆ. ಈ ದೃಷ್ಟಿಯಿಂದ 'ಪ್ರಶ್ನೆ' ಮತ್ತು 'ಮೌನಿ' ಸಂಕಲನಗಳು ಮಹತ್ವದ್ದಾಗಿದೆ. ಈ ಕಥೆಗಳನ್ನ ೨ ಗುಂಪುಗಳನ್ನಾಗಿ ಮಾಡಬಹುದು.

ಅನಂತ ಮೂರ್ತಿ ಅವರ ಸಮಕಾಲೀನರು ಚಿತ್ತಾಲರು. ಇವರು ಕಾಫ್ಕಾ ಮಾದರಿಯ ಕೆಲವು ಫ್ಯಾಂಟಸಿಗಳನ್ನು ಬರೆದಿದ್ದಾರೆ ಮತ್ತು ಅಪ್ರತಿಮ ಕಥೆಗಾರರಾಗಿದ್ದಾರೆ. ಅವರನ್ನು ಕಾಡಿರುವ ಒಂದು ಮುಖ್ಯ ವಸ್ತು ಸಾವು 'ಪಯಣ', 'ಅದೃಷ್ಟ', 'ಆಟ' ಕಥೆಗಳಲ್ಲಿ ಈ ವಸ್ತುವಿಗೆ ತಕ್ಕುದಾದ

ರಹಸ್ಯಮಯ ವಾತಾವರಣದ ಅಭಿವ್ಯಕ್ತಿಯನ್ನು ಕೊಟ್ಟಿದ್ದಾರೆ. ಅವರ 'ಸೆರೆ', 'ಛಲ' ಮತ್ತು 'ಪಯಣ', 'ಕಥೆಯಾದಳು ಹುಡುಗಿ' ಮಹತ್ವದ ಕಥೆಗಳಾಗಿವೆ.

ಇನ್ನೊಬ್ಬ ಮುಖ್ಯ ಕಥೆಗಾರರು ಪಿ.ಲಂಕೇಶರು. ಅವರು ಸಣ್ಣ ಕಥೆಗೆ ಭಾವಗೀತೆಯ ತೀವ್ರತೆ ಸೂಕ್ಷ್ಮತೆಗಳನ್ನು ತಂದರು. ಕಥೆ ಅವರ ಪಾಲಿಗೆ ಅನುಭವದ ಅರ್ಥವಂತಿಕೆಯನ್ನು ಶೋಧಿಸುವ ಸಾಧನವಾಗಿದೆ. 'ನಿವೃತ್ತರು'. 'ವಾಮನ' ಮೊದಲಾದ ಕಥೆಗಳು ಪ್ರಮುಖವಾದವು. "ಮತ್ತೊಬ್ಬ ಮುಖ್ಯ ಕಥೆಗಾರರು ತೇಜಸ್ವಿ. ಇವರ 'ಕುಬಿ ಮತ್ತು ಇಯಾಲ', 'ಅಬಚೂರಿನ ಪೋಸ್ಟಾಫೀಸು', 'ತಬರನ ಕಥೆಗಳು', ಪ್ರಸಿದ್ಧಿಯನ್ನು ಪಡೆದವು."೮ ಇವರಲ್ಲದೆ ಕೆ. ಸದಾಶಿವ ಅವರ 'ರಾಮನ ಸವಾರಿ', 'ಸಂತೆಗೆ ಹೋದಳು'. ಬಿ.ಸಿ.ರಾಮಚಂದ್ರ ಶರ್ಮರ 'ಸೆರಗಿನ ಕೆಂಡ', ಜಿ.ಎಸ್.ಸದಾಶಿವ, ಗಿರಡ್ಡಿಗೋವಿಂದ ರಾಜು, ಟಿ.ಜಿ.ರಾಘವ ಮೊದಲಾದ ಲೇಖಕರು ನವ್ಯದ ಸಂದರ್ಭದ ಸಣ್ಣ ಕಥೆಗಳ ಪ್ರಮುಖ ಲೇಖಕರುಗಳಾಗಿದ್ದಾರೆ.

ಕೊನೆಯದಾಗಿ ಬಂದಂತಹ ಯುಗ, ದಲಿತ ಬಂಡಾಯ ಸಾಹಿತ್ಯ ಯುಗ. ಈ ಯುಗದಲ್ಲಿ ದೇವನೂರು ಮಹಾದೇವ, ಬೆಸಗರಹಳ್ಳಿ ರಾಮಣ್ಣ, ಹೆಚ್.ಎಸ್.ಶಿವ ಪ್ರಕಾಶ, ಕುಂ.ವೀರಭದ್ರಪ್ಪ, ಮೊಗಳ್ಳಿಗಣೇಶ್, ಕಾಳೇಗೌಡ ನಾಗವಾರ, ಅರವಿಂದ ಮಾಲಗತ್ತಿ, ಮ.ನ.ಜವರಯ್ಯ, ವೀಣಾ ಶಾಂತೇಶ್ವರ, ವಿಜಯಾದಬ್ಬೆ ಮುಂತಾದವರು ಪ್ರಮುಖರು. ಇವರು ರಚಿಸಿದ ಕಥೆಗಳಲ್ಲಿ "ದೇವನೂರು ಅವರ 'ಅವರು ಮಾರಿಕೊಂಡರು', 'ನಾವಿನ್ನು ಬದುಕಿದ್ದೇವಾ?', 'ಗ್ರಸ್ತರು', 'ಮೂಡಲ ಸೀಮೇಲಿ ಕೊಲೆ ಗಿಲೆ ಮುಂತಾಗಿ', 'ಅಮಾಸ' ಮುಂತಾದವು."೯ ಬೆಸಗರ ಹಳ್ಳಿ ರಾಮಣ್ಣನವರ ಕಥಾ ಸಂಕಲನಗಳು 'ಸುಗ್ಗಿ', 'ದೇವರ ಹೂ' ಮುಂತಾದವು.

ಕನ್ನಡ ಸಾಹಿತ್ಯ ಲೋಕಕ್ಕೆ ಅದರಲ್ಲೂ ವಿಶೇಷವಾಗಿ ಸಣ್ಣಕಥಾ ವಿಭಾಗಕ್ಕೆ ಹಲವಾರು ಲೇಖಕರಂತೆ ಲೇಖಕಿಯರೂ ಕೂಡ ತಮ್ಮ ಸೇವೆಯನ್ನು ಮಾಡಿದ್ದಾರೆ. ಅವರುಗಳೆಂದರೆ ತ್ರಿವೇಣಿ, ವೈದೇಹಿ, ವೀಣಾ ಶಾಂತೇಶ್ವರ, ವಿಜಯಾದಬ್ಬೆ, ಸಾರಾ ಅಬೂಬಕರ್, ವಾಣಿ, ಕೊಡಗಿನ ಗೌರಮ್ಮ ಮುಂತಾದವರು ಪ್ರಸಿದ್ಧರಾಗಿದ್ದಾರೆ. ಹೀಗೆ ಸಣ್ಣ ಕಥೆಯು ಹಲವಾರು ಲೇಖಕ ಮತ್ತು ಲೇಖಕಿಯರಿಂದ ಬೆಳೆದು ಬಂದು ಇಂದಿಗೂ ಕೂಡ ತನ್ನ ಪ್ರಾಮುಖ್ಯತೆಯನ್ನು ಉಳಿಸಿಕೊಂಡಿದೆ.

ಸಣ್ಣಕಥೆ ಆದಿ ಕಾಲದಿಂದಲೂ ಕನ್ನಡ ಸಾಹಿತ್ಯದಲ್ಲಿ ಸುವರ್ಣ ಯುಗವನ್ನು ಸ್ಥಾಪಿಸಿದೆ. ಚಿನ್ನದ ಕಿರೀಟಕ್ಕೆ ಅಲಂಕಾರಕ್ಕೆ ಹಾಕಿರುವ ಮಣಿಗಳಂತೆ ಕಥೆಗಾರರು ಶೋಭಿಸೂತ್ತಿದ್ದಾರೆ.

ಕತೆಗಾರನು ತನ್ನ ಕಥೆಗೆ ಇಂತಹ ವಸ್ತುವನ್ನೇ ತೆಗೆದುಕೊಳ್ಳಬೇಕು ಎಂಬ ನಿಯಮವಿಲ್ಲ. ಅವನು ತಾನು ನೋಡಿದ ಘಟನೆ, ತನಗೆ ಯಾರಾದರೂ ಹೇಳಿದ ವಿಚಾರ. ತನ್ನ ಅನುಭವ, ತಾನು ಕಂಡ ಕನಸುಗಳನ್ನು ಕತೆಗಾರ ತನ್ನ ಕಥೆಯ ಮೂಲಕ ಓದುಗರಿಗೆ ಕಟ್ಟಿಕೊಡುತ್ತಾನೆ. ಆದರೆ ಕತೆಗಾರ ಯಾವ ಉದ್ದೇಶವನ್ನು ಪ್ರತಿಪಾದಿಸಲು ಹೊರಟಿರುವನೋ ಅದನ್ನು ಸರಿಯಾದ ರೀತಿಯಲ್ಲಿ ಹೇಳುವಂತಹ ವಸ್ತುವನ್ನು ಆಯ್ಕೆ ಮಾಡಿಕೊಂಡು ಹೇಳಬೇಕು. ಉದಾ:- ಉತ್ತಮ ಛಾಯಾ ಚಿತ್ರಗಾರ ಒಂದು ಚಿತ್ರದ ಬಿಂಬ ಹಿಡಿಯುವಾಗ ತಾನು ಯಾವ ಪಿಣಾಮವನ್ನು ಈಕ್ಷಿಸುವವರ ಮೇಲೆ ಉಂಟುಮಾಡ ಬೇಕೆಂದಿರುವನೋ ಅದನ್ನು ಮನದಲ್ಲಿಟ್ಟುಕೊಂಡು ವಸ್ತುವನ್ನು ಅನೇಕ ದೃಷ್ಟಿಕೋನಗಳಿಂದ ಪರೀಕ್ಷಿಸಿ ನೋಡಿ ಚಿತ್ರವನ್ನು ತೆಗೆಯುತ್ತಾನೆ. ಹಾಗೆ ಕತೆಗಾರ ತನಗೆ ಸಿಕ್ಕಿದ ವಸ್ತುವಿನಿಂದ ತಾನು ಯಾವ ಪರಿಣಾಮವನ್ನು ಓದುಗನಲ್ಲಿ ಉಂಟುಮಾಡಬೇಕೆಂದಿರುವನೋ ಅದನ್ನು ನಿಶ್ಚಯಿಸಿಕೊಂಡು ಕಥೆಗೆ ಯಾವ ರೂಪ ಕೊಟ್ಟರೆ ತನ್ನ ಉದ್ದೇಶ ಸಫಲವಾಗುವುದೆಂಬುದನ್ನು ವಿವೇಚಿಸಿ ಸರಿಯಾದ ರೂಪವನ್ನು ಕತೆಗಾರನಾದವನು ಕೊಡುತ್ತಾನೆ.

ಸಣ್ಣಕಥೆ ಇಂದು ಜನಪ್ರಿಯವಾಗುತ್ತಿದೆ. ಎಲ್ಲರೂ ಸಣ್ಣಕಥೆಗಳನ್ನು ಅತ್ಯಾದರದಿಂದ ಓದಿ ಆನಂದಿಸುತ್ತಿದ್ದಾರೆ. ಮನೆಗೆ ಯಾವ ಪತ್ರಿಕೆ ಬಂದರೂ ಮೊದಲು ಅದರಲ್ಲಿರುವ ಸಣ್ಣಕತೆಯನ್ನು ಓದಿ ಮುಗಿಸುತ್ತಾರೆ. ಸಣ್ಣಕತೆ ಎಲ್ಲರಿಗೂ ಸಂತೋಷವನ್ನೊದಗಿಸುವುದೇನೋ ನಿಜ, ಆದರೆ ಅದರಲ್ಲಿನ ಸುಖವನ್ನು ಅನುಭವಿಸುವವರು ಮಾತ್ರ ವಿದ್ಯಾವಂತರು. ಅವಿದ್ಯಾವಂತರಿಗೆ ಅಕ್ಷರ ಜ್ಞಾನ ಇಲ್ಲದ ಕಾರಣ ಅವರು ಕಥೆಗಳನ್ನು ಓದಲು ಆಗುತ್ತಿಲ್ಲ ಎನ್ನಬಹುದು.

ಒಟ್ಟಾರೆಯಾಗಿ ಮಾಸ್ತಿಯವರ ಕಥೆಗಳಲ್ಲಿ ಕಥಾವಸ್ತುವಿಗಿಂತ ಕಥಾನಿರೂಪಣದ ಕಲೆಗೆ ಹೆಚ್ಚು ಬೆಲೆ ಇರುವುದು. ಇವರ ಪ್ರಭಾವದಿಂದಾಗಿ ಕನ್ನಡದಲ್ಲಿ ಕಥೆಗಳು, ಕತೆಗಾರರು ಹೆಚ್ಚಿನ ಸಂಖ್ಯೆಯಲ್ಲಿ ಬೆಳೆದರು. ಆದರೆ ಈ ಪ್ರಕಾರವನ್ನು ವಿಶಿಷ್ಟವಾಗಿ ಮುಂದುವರಿಸಿ ಕೊಂಡು ಹೋದವರಲ್ಲಿ ಮಾಸ್ತಿಯವರು ಕೂಡ ಒಬ್ಬರು ಎನ್ನಬಹುದು.

ಮಾಸ್ತಿ ಅವರು ಸರಳವಾದ ಭಾಷೆಯಲ್ಲಿ ತನ್ನ ಕಾಲದ ಸದಭಿರುಚಿಯುಳ್ಳ ಓದುಗರಿಗೆ ಅರ್ಥವಾಗುವಂತೆ ಬರೆಯುತ್ತಾರೆ. ಇವರು ವಾಸ್ತವ ಘಟನೆಗಳನ್ನು ತೆಗೆದು ಕೊಂಡು ಕಥೆಗಳನ್ನು ಚಿತ್ರಿಸುತ್ತಾರೆ. ಇವರು ಕಥೆಯನ್ನು ಸಣ್ಣ ಸಣ್ಣ ವಾಕ್ಯಗಳ ಮೂಲಕ ಮೊದಲಿನಿಂದ ಕೊನೆಯವರೆಗೆ ನೇರವಾಗಿ, ಮಧುರವಾಗಿ, ಅರ್ಥವಾಗುವಂತೆ ತುಂಬ ನಯವಾಗಿ ಬರೆಯುತ್ತಾರೆ. ಅದ್ದರಿಂದ ಇವರು ಉಳಿದ ಎಲ್ಲಾ ಕಾಲಘಟ್ಟದ ಲೇಖಕರುಗಳಗಿಂತ ತುಂಬ ಪ್ರಮುಖರೆನಿಸಿ ಕೊಳ್ಳುತ್ತಾರೆ.

ಅಡಿ ಟಿಪ್ಪಣಿ

೧. ಬೆಳ್ಳೂರು ಮೈಲಾರ ಶ್ರೀಕಂಠಯ್ಯನವರಿಗೆ ಅವರ ಶಿಷ್ಯರೂ ಮಿತ್ರರೂ ಒಪ್ಪಿಸಿದ ಪ್ರಬಂಧಗಳ ಸಂಪುಟ-ಸಂಭಾವನೆ, ಪುಟ-೩೪೮

೨. ಅದೇ, ಪುಟ-೩೪೯

೩. ಜಿ.ಎಸ್.ಸಿದ್ದಲಿಂಗಯ್ಯ[ಸಂ], ಸಾಲು ದೀಪ, ಪುಟ-೩೮೦

೪. ಅದೇ, ಪುಟ -೫೦೩

೫.ದೇವನೂರು ಮಹಾದೇವ-ದ್ಯಾವನೂರು ಮತ್ತು ಒಡಲಾಳ, ಪುಟ-೧

ಅಧ್ಯಾಯ – ೩
ಮಾಸ್ತಿ ಅವರ ಜೀವನ ಮತ್ತು ಸಾಧನೆ.

ಹೊಸಗನ್ನಡ ಸಾಹಿತ್ಯವನ್ನು ಸರ್ವ ವಿಧದಲ್ಲೂ ಶ್ರೀಮಂತಗೊಳಸಿದ ಸಾಹಿತಿಗಳಲ್ಲಿ ಮಾಸ್ತಿಯವರು ಕೂಡ ಒಬ್ಬರು. ನವೋದಯದ ತಲೆಮಾರಿನ ಹಿರಿಯ ಸಾಹಿತಿಗಳಾದ ಇವರು ಸಾಹಿತ್ಯದ ಬಹುತೇಕ ಎಲ್ಲ ಪ್ರಮುಖ ಪ್ರಕಾರಗಳಲ್ಲಿ ಬರೆದಿದ್ದಾರೆ. ತಮ್ಮ ಬೃಹತ್ ಸಂಖ್ಯೆಯ ಅಮೂಲ್ಯ ಕೃತಿಗಳನ್ನು ರಚಿಸುವುದರ ಮೂಲಕ ಇವರು 'ಕನ್ನಡದ ಆಸ್ತಿ' ಎನಿಸಿ ಕೊಂಡಿದ್ದಾರೆ.

ಮಾಸ್ತಿ ಅವರು ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಮಾಸ್ತಿ ಎಂಬ ಪುಟ್ಟ ಗ್ರಾಮದಲ್ಲಿ ೧೮೯೧ರ ಜೂನ್ ಆರರಂದು ಜನಿಸಿದರು. ಇವರ ತಂದೆ ರಾಮಸ್ವಾಮಿ ಐಯ್ಯಂಗಾರ್, ತಾಯಿ ತಿರುಮಲಮ್ಮ. ಇವರಿಗೆ ತಂದೆ ತಾಯಿ ಇಟ್ಟ ಹೆಸರು ವೆಂಕಟೇಶ್ ಅಯ್ಯಂಗಾರ್ ಎಂದು. ಆದರೆ ಈ ಹೆಸರಿಗೆ ಬದಲಾಗಿ ಮಾಸ್ತಿಯೆಂದು ರೂಢಿಗೆ ಬಂದುದು ಕನ್ನಡ ಸಾಂಸ್ಕೃತಿಕ ಇತಿಹಾಸ.

ಮಾಸ್ತಿ ಅವರು 'ಪೆರಿಯತ್' ಮನೆತನಕ್ಕೆ ಸೇರಿದವರು. ಒಂದು ಕಾಲಕ್ಕೆ ಚೆನ್ನಾಗಿ ಬಾಳ ಬದುಕಿದ ಸಂಪ್ರದಾಯವಂತ ಮನೆತನ ಅವರದು. ಮಾಸ್ತಿಯವರು ಹುಟ್ಟುವ ಕಾಲಕ್ಕೆ ಅವರ ಕುಟುಂಬ ತೀವ್ರ ಬಡತನದಲ್ಲಿ ಬಳಲುತಿತ್ತು.

ಇವರು ಬಾಲಕನಾಗಿರುವಾಗಲೇ ತುಂಬ ಚುರುಕು. ಓದಿನಲ್ಲಿ ಮುಂದು. ಇದನ್ನು ಮನಗಂಡಿದ್ದ ಅವರ ತಾತ "ಈ ಹುಡುಗ ಓದಿ ಜಾಣನಾಗುತ್ತಾನೆ. ಮನೆಯ ಬಡತನವನ್ನ ನೀಗಿಸುತ್ತಾನೆ" ಎಂದು ಹೇಳುತ್ತಿದ್ದರು. ಅವರ ಆಸೆಯೇ ನನ್ನ ಜೀವನವನ್ನು ರೂಪಿಸಿತು ಎಂದು ಮಾಸ್ತಿಯವರು ಹೇಳುತ್ತಾರೆ. ಇವರು ತಮ್ಮ ಪ್ರಾಥಮಿಕ ವ್ಯಾಸಂಗವನ್ನು ಶಿವಾರಪಟ್ಟಣದಲ್ಲಿ ಮುಗಿಸಿದರು. ನಂತರ ಹೈಸ್ಕೂಲು ವಿದ್ಯಾಭ್ಯಾಸ ಮೈಸೂರಿನ ವೆಸ್ಲಿಯನ್ ಹೈಸ್ಕೂಲ್. ೧೯೦೭ ರಲ್ಲಿ ಮೆಟ್ರ್ಯುಕ್ಯಲೇಷನ್ ಮುಗಿಸಿ, ೧೯೧೪ ರಲ್ಲಿ ಎಂ.ಎ ಪದವಿ ಪಡೆದರು. ೧೯೧೩ ರಲ್ಲಿ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆ ಪಾಸುಮಾಡಿ, ಅದೇ ವರ್ಷ ಅಸಿಸ್ಟೆಂಟ್ ಕಮೀಷನರ್ ಆಗಿ ನೇಮಕಗೊಂಡರು. ಇದರಿಂದ ಅವರ ಬದುಕಿನ ಬವಣೆ ಸ್ವಲ್ಪ ಮಟ್ಟಿಗೆ ನೀಗಿತು.

ಮಾಸ್ತಿ ಅವರು ಮೊದಲನಿಂದಲೂ ಧ್ಯೇಯನಿಷ್ಠವಾಗಿ ಬದುಕುತಿದ್ದರು. ಹಿಡಿದ ಗುರಿಯನ್ನು ಕೊನೆಯವರೆಗೂ ಛಲ ಹಿಡಿದು ಸಾಧಿಸಿದವರು. ಇವರು ತಮ್ಮ ವೃತ್ತಿ ಜೀವನದ ಜೊತೆ ಸಾಹಿತ್ಯವನ್ನು ಪ್ರವೃತ್ತಿಯಾಗಿ ಆಯ್ಕೆ ಮಾಡಿಕೊಂಡರು. ತಮಗೆ ಒಪ್ಪಿಸಿದ, ಇಲ್ಲವೇ ತಮ್ಮ ಪಾಲಿಗೆ ಬಂದ ಯಾವುದೇ ಕೆಲಸವನ್ನು ಅತ್ಯಂತ ನಿಷ್ಠೆಯಿಂದ ಸಮರ್ಪಕವಾಗಿ ಮಾಡುತ್ತಿದ್ದರು.

ಶ್ರೀನಿವಾಸರ ವ್ಯಕ್ತಿತ್ವದ ದೊಡ್ಡ ಗುಣಗಳೆಂದರೆ ಪ್ರಾಮಾಣಿಕತೆ ಮತ್ತು ಸ್ವಾಭಿಮಾನ. ಇವರು ಯಾವತ್ತೂ ಸ್ನೇಹಶೀಲ, ಉದಾರನಡವಳಿಕೆ ಸೌಜನ್ಯಯುತರು. ತಮಗೆ ನ್ಯಾಯವೆಂದು ಕಂಡದ್ದನ್ನು ಮಾತ್ರ ಮಾಡುತ್ತಿದ್ದರು. ನಿಯಮಕ್ಕೆ ವಿರುದ್ಧವಾದುದನ್ನು ಎಂದಿಗೂ ಮಾಡುತ್ತಿರಲಿಲ್ಲ.

ಜಿ.ಎಚ್.ನಾಯಕ್ ಅವರು ಮಾಸ್ತಿಯವರ ದೃಷ್ಟಿಕೋನ ಕುರಿತು "ಮಾಸ್ತಿಯವರದು ಸಮಾಜಸೇವಾಕಾಂಕ್ಷಿ ದೃಷ್ಟಿ. ಅದು ಸಾಂಪ್ರಾದಾಯಿಕ ದೃಷ್ಟಿ ಕೋನದ್ದು. ವಸ್ತುಸ್ಥಿತಿವಾದಿಯ ನಿಲುವಿನಲ್ಲೇ ಸಮಾಜವನ್ನು ಒಪ್ಪಿಕೊಂಡು, ಅದರ ಧಾರ್ಮಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಸ್ವೀಕರಿಸಿ, ಅವುಗಳ ಉದಾತ್ತ ಸಾಧ್ಯತೆಗಳನ್ನು ವ್ಯಕ್ತಿಗಳ ಜೀವನ ಸಂದರ್ಭಗಳಲ್ಲಿ ಕಂಡು ಕೊಳ್ಳಬೇಕೆನ್ನುವ ಹಿತ ಚಿಂತಕ ದೃಷ್ಟಿಯಾಗಿದೆ"೧ ಎನ್ನುತ್ತಾರೆ.

ಮಾಸ್ತಿಯವರು ವೃತ್ತಿ ಜೀವನದಲ್ಲಿ ವಿವಿಧ ಸ್ಥಳಗಳಲ್ಲಿ ವಿವಿಧ ಪ್ರಕಾರದ ಜನಗಳೊಂದಿಗೆ ಕೆಲಸ ಮಾಡಬೇಕಾಗಿ ಬಂದದ್ದರಿಂದ, ಅಪಾರ ಅನುಭವ ಸಂಪತ್ತು ಅವರಿಗೊದಗಿತು. ಇದು ಅವರ ಸಾಹಿತ್ಯ ರಚನೆಗೆ ಪ್ರೇರಣೆಯಾದದ್ದಲ್ಲದೆ, ವಸ್ತುವನ್ನೊದಗಿಸುವಲ್ಲಿ, ವ್ಯಕ್ತಿ ಸ್ವಭಾವಗಳನ್ನು ಚಿತ್ರಿಸುವಲ್ಲಿ ತುಂಬ ಅನುಕೂಲವಾಯಿತು. ತಮ್ಮ ಬಿಡುವಿಲ್ಲದ ಕೆಲಸದ ಮಧ್ಯದಲ್ಲೂ ನಿರಂತರವಾಗಿ ಸಾಹಿತ್ಯ ರಚನೆ ಮಾಡುತ್ತಾ ಬಂದ ಅವರ ಸೃಜನಶೀಲತೆ ಬೆರಗುಗೊಳಿಸುವಂತದ್ದು.

ಕನ್ನಡದಲ್ಲಿ ಮೊದಲು ಸಣ್ಣಕತೆ ಬರೆದವರು ಪಂಜೆ ಮಂಗೇಶರಾಯರು. ಆದರೆ ಈ ಪ್ರಕಾರಕ್ಕೆ ಭದ್ರವಾದ ಬುನಾದಿಯನ್ನು ಹಾಕಿದವರು ಮಾತ್ರ ಮಾಸ್ತಿ. ಅಷ್ಟೇ ಅಲ್ಲ ಇಷ್ಟು ವರ್ಷಗಳ ನಂತರವೂ, ಕನ್ನಡದಲ್ಲಿ ಕಥಾಕ್ಷೇತ್ರ ಸಮೃದ್ಧವಾಗಿರುವಾಗಲೂ ಮಾಸ್ತಿಯವರೇ ಶ್ರೇಷ್ಠ ಕತೆಗಾರರು. ಇವರು ಮೊಟ್ಟ ಮೊದಲು ಸ್ಟ್ರಾಂಡ್ ಮ್ಯಾಗಜೀನ್ ಮಾಸ ಪತ್ರಿಕೆಯಲ್ಲಿ ಬರುವ ಕಥೆಗಳನ್ನು ಓದಿದಾಗ ಮಾಸ್ತಿಯವರಿಗೆ ನಮ್ಮ ಭಾಷೆಯಲ್ಲೂ ಇಂಥ ಕಾರ್ಯ ನಡೆಯಬಾರದೇಕೆನ್ನಿಸಿತು. ಅದರ ಜೊತೆಗೆ ಅವರಲ್ಲಿನ ಕಥನ ಪ್ರತಿಭೆಯಿಂದಾಗಿ ಇವರು ೧೦೦ ವರ್ಷಗಳ ಹಿಂದೆಯೇ ಕಥೆ ಬರೆಯುವುದನ್ನು

ಆರಂಭಿಸಿದರು. ಮೊದಲ ಕತೆ 'ರಂಗನ ಮದುವೆ ೧೯೧೦ರಲ್ಲಿ ಪ್ರಕಟವಾಯಿತು. ನಂತರ ೧೯೨೦ರಲ್ಲಿ 'ಕೆಲವು ಸಣ್ಣ ಕಥೆಗಳು' ಎಂಬ ಮೊದಲ ಕಥಾ ಸಂಕಲನ ಪ್ರಕಟವಾಯಿತು. ಇದು ಆಧುನಿಕ ಕನ್ನಡ ಸಾಹಿತ್ಯದ ವಿಶಿಷ್ಟವಾದ ಮೊದಲ ಪುಸ್ತಕವೆನಿಸಿ ಕೊಂಡಿತು.

ಮಾಸ್ತಿಯವರು ಹೊಸಗನ್ನಡ ಸಾಹಿತ್ಯದ ನಿರ್ಮಾಪಕರಲ್ಲೊಬ್ಬರು; ಯಾವ ಭಾಷೆಗಾದರೂ, ಸಾಹಿತ್ಯಕ್ಕಾದರೂ ಕೋಡಾಗಬಲ್ಲಂಥ ಶ್ರೇಷ್ಠ ಲೇಖಕರು. ಅವರ ಪ್ರತಿಭೆ ವಿಶೇಷವಾಗಿ ಮೆರೆದಿರುವುದು ಸಣ್ಣ ಕಥೆಗಳ ಪ್ರಕಾರದಲ್ಲಿ. ಆದರೆ ಇತರ ಪ್ರಕಾರಗಳಿಗೆ ಅವರ ಕೊಡುಗೆ ಕಿರಿದೇನಲ್ಲ.

ಮಾಸ್ತಿಯವರನ್ನು 'ಸಣ್ಣ ಕಥೆಗಳ ಜನಕ'ನೆಂದು 'ಕನ್ನಡದ ಭಾಸ'ನೆಂದು 'ಕರ್ನಾಟಕದ ಠ್ಯಾಗೋರ'ರೆಂದು ಕರೆದಿದ್ದಾರೆ. ಹಳೆಯ ಕಾವ್ಯ ಪ್ರಪಂಚಕ್ಕೆ ಪಂಪ ಹೇಗೋ ಹಾಗೆ ಆಧುನಿಕ ಕನ್ನಡ ಕಥಾ ಪ್ರಪಂಚಕ್ಕೆ ಮಾಸ್ತಿಯವರು. 'ಮಾಸ್ತಿ ಕನ್ನಡದ ದೊಡ್ಡ ಆಸ್ತಿ' ಎಂದು ಪ್ರಸಿದ್ಧಿಯನ್ನು ಹೊಂದಿದ್ದಾರೆ.

ಮಾಸ್ತಿಯವರ ಬರವಣಿಗೆಯೂ ವೈವಿಧ್ಯಮಯ, ಕಥೆ, ಕಾದಂಬರಿ, ಕವನ, ಕಥನ ಕವನ, ನಾಟಕ, ಜೀವನ ಚರಿತ್ರೆ, ವಿಮರ್ಶೆ, ಆತ್ಮಕಥೆ, ಅನುವಾದಿತ ಕೃತಿಗಳನ್ನು ಬರೆದು ಕನ್ನಡ ಸಾಹಿತ್ಯದಲ್ಲಿ ಒಬ್ಬ ಶ್ರೇಷ್ಠ ಬರಹಗಾರರಾಗಿದ್ದಾರೆ. ಗೋರೂರು ರಾಮಸ್ವಾಮಿ ಅಯ್ಯಾಂಗಾರ್ ಅವರು "ಮಾಸ್ತಿಯವರು ಬರೆದಿರುವ ಕತೆಗಳಲ್ಲಿ ಬಹುಭಾಗವು ನಮ್ಮ ಜನರಿಗೆ ನಮ್ಮ ಸಂಸಾರಗಳಿಗೆ ಸಂಬಂಧಿಸಿದವು"[೨] ಎನ್ನುತ್ತಾರೆ.

'ಶ್ರೀನಿವಾಸ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಮಾಸ್ತಿಯವರು ನವೋದಯ ಕಾಲಘಟ್ಟದಲ್ಲಿ ತಮ್ಮ ಸಾಹಿತ್ಯವನ್ನು ಸೃಷ್ಟಿಸಿದ್ದಾರೆ. ಇವರ ಸಾಹಿತ್ಯದಲ್ಲಿ ಪ್ರಗತಿಪರ ಚಿಂತನೆಗಳು ಕಂಡುಬರುವುದರ ಜೊತೆಗೆ ಮಾನವನ ಸಾಮಾಜಿಕ ಪರಿಸರವನ್ನು ಕುರಿತು, ಅವರ ಕಷ್ಟ ಸುಖಗಳನ್ನು ತಮ್ಮ ಸಾಹಿತ್ಯದಲ್ಲಿ ಅಭಿವ್ಯಕ್ತಿಸಿದ್ದಾರೆ. ಇವರ ಸಣ್ಣ ಕಥೆಗಳ ಭಾಷೆ, ನಿರೂಪಣೆ ಶೈಲಿ, ಹಾಸ್ಯ ಪ್ರಜ್ಞೆ ಜೀವನದ ನಿಚ್ಚಳ ಅನುಭವಗಳು ತುಂಬ ಸರಳವಾಗಿದ್ದು ಎಂತಹ ಓದುಗರನ್ನೂ ತನ್ನೊಳಗೆ ಆವರಿಸಿಕೊಂಡು ಬಿಡುವ ಗತ್ತು ಮಾಸ್ತಿಯವರ ಸಾಹಿತ್ಯದ್ದು.

ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರು “ಮನುಷ್ಯರ ಕಥೆಗಳನ್ನು ಚರಿತ್ರೆಯಂತೆಯೂ, ಚರಿತ್ರೆಯನ್ನು ಮನುಷ್ಯರ ಕಥೆಗಳಂತೆಯೂ ಹೇಳುತ್ತಾ ಹೋಗುತ್ತಾರೆ”.೩ ಹೀಗಾಗಿ ಇತಿಹಾಸ, ಪುರಾಣ, ವರ್ತಮಾನ ಹೀಗೆ ಭಿನ್ನ ಭಿನ್ನ ಹಿನ್ನೆಲೆಯ ಕಥಾವಸ್ತು ತೆಗೆದುಕೊಂಡಾಗಲೂ ಅವುಗಳನ್ನು ನಿರ್ವಹಿಸುವ ಕ್ರಮದಲ್ಲಿ ಒಂದೇ ಧೋರಣೆ ಇರುವುದನ್ನು ನೋಡಬಹುದು. ಆದ್ದರಿಂದ ಮಾಸ್ತಿಯವರಿಗೆ ಸಮಕಾಲೀನ ಮೌಲ್ಯಗಳಿಗಿಂತ ಸಾರ್ವಕಾಲಿಕ ಮೌಲ್ಯಗಳಲ್ಲಿ ಹೆಚ್ಚು ಆಸಕ್ತಿ ಇರುವುದನ್ನು ಕಾಣಬಹುದು.

ಮಾಸ್ತಿಯವರು ‘ನಿಜಗಲ್ಲಿನ ರಾಣಿ’, ‘ಮೊಸರಿನ ಮಂಗಮ್ಮ’, ‘ವೆಂಕಟಶಾಮಿಯ ಪ್ರಣಯ’, ‘ಕಲ್ಮಾಡಿಯ ಕೋಣ’, ‘ಒಂದು ಹಳೆಯ ಕಥೆ’, ‘ಜೋಗ್ಯೋರ ಅಂಜಪ್ಪನ ಕೋಳಿ ಕಥೆ’ ಮುಂತಾದ ನೂರು ಕತೆಗಳನ್ನು ಬರೆದಿದ್ದಾರೆ. ‘ಸುಬ್ಬಣ್ಣ’ [೧೯೨೮], ‘ಚೆನ್ನಬಸವನಾಯಕ’ [೧೯೪೯], ‘ಚಿಕವೀರ ರಾಜೇಂದ್ರ’ [೧೯೫೯], ‘ಶೇಷಮ್ಮ’ [೧೯೭೬], ‘ಮಾತುಗಾರ ರಾಮಣ್ಣ’, ಎಂಬ ಕಾದಂಬರಿಗಳನ್ನು, ‘ಗೌಡರ ಮಲ್ಲಿ’ [೧೯೪೦], ‘ರಾಮನವಮಿ’[೧೯೪೧], ‘ಮೂಕನ ಮಕ್ಕಳು’ [೧೯೪೩], ‘ಸುನೀತ’ [೧೯೪೬], ‘ಬಿನ್ನಹ’ [೧೯೨೨], ‘ಅರುಣ’ [೧೯೨೪], ‘ತಾವರೆ’ [೧೯೩೦], ‘ಮನವಿ’ [೧೯೫೧], ‘ನವರಾತ್ರಿ’ [೫ ಸಂಪುಟ] [೧೯೪೪-೪೮], ಎಂಬ ಕಥನ ಕವನಗಳನ್ನು, ‘ಶ್ರೀರಾಮ ಪಟ್ಟಾಭಿಷೇಕ’ [೧೯೭೨] ಎಂಬ ಖಂಡಕಾವ್ಯವನ್ನು, ‘ಮಂಜುಳ’ [೧೯೨೩], ‘ತಾಳೀಕೋಟೆ’ [೧೯೨೩], ‘ಸಾವಿತ್ರಿ’ [೧೯೨೩], ‘ಯಶೋಧರಾ’ [೧೯೩೩], ‘ಕಾಕನಕೋಟೆ’ [೧೯೩೮], ‘ಭಟ್ಟರ ಮಗಳು’ [೧೯೬೯], ‘ಅಜ್ಜನ ದಾರಿ’ [೧೯೮೩], ‘ಕಾಳಿದಾಸ’ [೧೯೭೮] ಇತ್ಯಾದಿ ನಾಟಕಗಳನ್ನು, ‘ಚಿತ್ರಾಂಗದ’ [೧೯೪೫], ‘ಹ್ಯಾಮ್ಲೆಟ್’ [೧೯೫೮], ‘ಚಂಡಮಾರುತ’ [೧೯೫೯], ‘ದ್ವಾದಶ ರಾತ್ರಿ’ [೧೯೬೦] ಮೊದಲಾದ ನಾಟಕಗಳನ್ನು ಭಾಷಾಂತರಿಸಿದ್ದಾರೆ. ಇವರ ಆತ್ಮಕಥೆ 'ಭಾವ' ಎಂಬ ಹೆಸರಿನಿಂದ ಮೂರು ಸಂಪುಟಗಳಲ್ಲಿ ಪ್ರಕಟಗೊಂಡಿದೆ.

ಶ್ರೀನಿವಾಸ ಅವರ ಕನ್ನಡ ಸಾಹಿತ್ಯ ಸೇವೆಗೆ ಯೋಗ್ಯ ಮನ್ನಣೆ ಸಂದಿದೆ. ೧೯೨೯ ರಲ್ಲಿ ಬೆಳಗಾಂ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿ ಅವರನ್ನೊಲಿದು ಬಂದಿತ್ತು. ೧೯೫೪ ರಲ್ಲಿ

ಮೂನಾದಲ್ಲಿ ನಡೆದ ವಿಶ್ವವಿದ್ಯಾಲಯ ಭಾಷಾ ಸಮ್ಮೇಳನದಲ್ಲಿ ರಾಷ್ಟ್ರ ಭಾಷಾ ವಿಭಾಗದ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ವಿಶ್ವವಿದ್ಯಾನಿಲಯ ೧೯೫೬ ರಲ್ಲಿ, ಮೈಸೂರು ವಿಶ್ವವಿದ್ಯಾನಿಲಯ ೧೯೭೭ರಲ್ಲಿ ಗೌರವ ಡಾಕ್ಟರೇಟ್ ನೀಡಿವೆ. ೧೯೬೧ ರಲ್ಲಿ ಅಖಿಲ ಭಾರತ ಸಾಹಿತಿಗಳ ಸಮ್ಮೇಳನದ ಅಧ್ಯಕ್ಷತೆ, ೧೯೬೯ ರಲ್ಲಿ ಸಣ್ಣಕಥೆಗಳು ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ, ೧೯೬೮ ರಲ್ಲಿ ಮೈಸೂರಿನಲ್ಲಿ ಸಾರ್ವಜನಿಕರ ಸನ್ಮಾನ, ೧೯೭೩ ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಫೆಲೋಷಿಪ್. ೧೯೭೨ ರಲ್ಲಿ 'ಶ್ರೀನಿವಾಸ' ಅಭಿನಂದನ ಗ್ರಂಥ ಸಮರ್ಪಣೆ, ೧೯೮೩ ರಲ್ಲಿ ಇವೆಲ್ಲಕ್ಕೆ ಕಳಸವಿಟ್ಟಂತೆ 'ಚಿಕವೀರ ರಾಜೇಂದ್ರ' ಕಾದಂಬರಿಗೆ ಭಾರತೀಯ ಜ್ಞಾನಪೀಠ ಪ್ರಶಸ್ತಿ. ೧೯೮೪ ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವ. ಇವೆಲ್ಲ ನಾಡು ಮಾಸ್ತಿಗೆ ಸಲ್ಲಿಸಿರುವ ಮನ್ನಣೆಗಳು.

ಶ್ರೀನಿವಾಸ ಅವರು ಅಂಬಿಲ್ ಕೃಷ್ಣಸ್ವಾಮಿ ಅಯ್ಯಂಗಾರರ ಮಗಳು ಪಂಕಜಮ್ಮನವರನ್ನು ಮದುವೆಯಾಗಿದ್ದರು. ಇವರ ಕೌಟುಂಬಿಕ ಬದುಕು ನೆಮ್ಮದಿಯಿಂದ ಕೂಡಿತ್ತು. ಪಂಕಜಮ್ಮನವರು ಎಲ್ಲ ಅರ್ಥದಲ್ಲೂ ಸಹ ಧರ್ಮಿಣಿಯಾಗಿ ಮಾಸ್ತಿಯವರ ಸಾಹಿತ್ಯಕ ಜೀವನದುದ್ದಕ್ಕೂ ಜೊತೆಯಾಗಿ ನಿಂತಿದ್ದು ಅವರು ೧೯೬೮ ರಲ್ಲಿ ಅಗಲಿದರು.

ಹೀಗೆ ಮಾಸ್ತಿಯವರು ಅತ್ಯಂತ ಮಹತ್ವದ ಕೃತಿಗಳನ್ನು ರಚಿಸುವುದರ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಜೊತೆಗೆ ಇವರು ೧೯೪೪-೬೫ ರಲ್ಲಿ 'ಜೀವನ' ಪತ್ರಿಕೆಯ ಸಂಪಾದಕರಾಗಿ, ಆ ಪತ್ರಿಕೆಯ ಮೂಲಕ ಸಮಾಜ ಸೇವೆಯ ಕಾರ್ಯದಲ್ಲಿ ತೊಡಗಿಕೊಂಡಿದ್ದರು. ಈ ಬಗೆಯ ಬಹುಮುಖ ಕಾಳಜಿಯ ಪ್ರಖ್ಯಾತ ಸಾಹಿತಿಯಾಗಿದ್ದ ಮಾಸ್ತಿಯವರು ಜೂನ್ ೬, ೧೯೮೬ ರಲ್ಲಿ ತೀರಿಕೊಂಡರು.

ಅಡಿಟಿಪ್ಪಣಿ

೧ ಜಿ.ಎಚ್.ನಾಯಕ್, ಮಾಸ್ತಿಯವರ ಕಥೆಗಳಲ್ಲಿ ಸಂಘರ್ಷದ ಸ್ವರೂಪ-ಮಾಸ್ತಿ ಅವರ ಸಾಹಿತ್ಯ ಒಂದು ಅಧ್ಯಯನ, ಪುಟ-೨೩

೨ ಡಾ.ಶೈಲಜಾ ಉಡಚಣ, ನಾನು ನಾವು ಮತ್ತು ಸಾಹಿತ್ಯ, ಪುಟ -೧೩೩

೩ ರಾ.ಲಕ್ಷ್ಮೀನಾರಾಯಣ, ಮಾಸ್ತಿ, ಪುಟ - ೧೫

ಅಧ್ಯಾಯ – ೪

ಸಾಮಾಜಿಕ ಅಧ್ಯಯನ

ಮಾಸ್ತಿಯವರ ಕಥೆಗಳು ಕನ್ನಡ ಸಾಹಿತ್ಯಕ್ಕೆ ಹೊಸ ಬಗೆಯ ಬೆಳಕನ್ನು ಶಕ್ತಿಯನ್ನೂ ತೇಜಸ್ಸನ್ನು ಉಂಟುಮಾಡಿವೆ. ಇವರು ನಿರೂಪಿಸಿದ ಕಥೆಗಳಿಗೆ ಒಂದು ಅಧಿಕೃತತೆ ಇದೆ. ಇದು ಬರೀ ಕಟ್ಟುಕತೆಯಲ್ಲ, ನಡೆದದ್ದು ಅಥವಾ ನೈಜ ಘಟನೆಯನ್ನಾಧರಿಸಿದ್ದು. ಅಂದರೆ ನಮ್ಮ ಜನರಿಗೆ, ನಮ್ಮ ಸಂಸಾರಗಳಿಗೆ ಸಂಬಂಧಪಟ್ಟವು. ಭಾರತೀಯ ಸಂಸ್ಕೃತಿ, ಪರಂಪರೆಯು ಇವರ ಕಥೆಯ ಬಹುಮುಖ್ಯ ವಸ್ತುವಾಗಿದೆ.

ಕನ್ನಡದ ಸಣ್ಣ ಕಥೆಯ ವಿಚಾರವಾಗಿ ಶಂಕರ ಮೊಕಾಶಿಯವರು ಹೇಳುತ್ತ "ಶ್ರೀನಿವಾಸರ ಸಣ್ಣಕಥೆಗಳಲ್ಲಿ ಬೇಕಾದವರಿಗೆ ಬೇಕಾದಷ್ಟು ಸೈಕಾಲಜಿ ಇದೆ. ಬೇಡವಾದವರಿಗೆ ಕನಿಷ್ಟ ಪಕ್ಷ ಚೆಂದವಾದ ಕಥೆ, ನಿರರ್ಗಳ ಭಾಷೆ, ಸುಖವಾದ ಸಂಭಾಷಣೆ, ಕೈಚಾಚಿದರೆ ಎಟುಕುವ ಪಾತ್ರಗಳು ಜೀವನದುದ್ದುಕ್ಕೂ ಮರೆಯಲಾಗದ ಸನ್ನಿವೇಶಗಳು ದೊರಕುತ್ತವೆ"೧ ಎಂದಿದ್ದಾರೆ.

ಕಥೆಗಾರರು ಸಮಾಜದ ವಾಸ್ತವ ಅಂಶಗಳನ್ನು ಇಟ್ಟುಕೊಂಡು ಕಥೆಗಳನ್ನು ರಚಿಸಿದ್ದಾರೆ. ಇವರು ಬರೆದಿರುವ ಮೊಸರಿನ ಮಂಗಮ್ಮ, ವೆಂಕಟಶಾಮಿಯ ಪ್ರಣಯ, ನಳನಿಯ ತಂದೆ ಇತ್ಯಾದಿ ಕಥೆಗಳನ್ನು ಓದಿದರೆ ಅಲ್ಲಿ ಬರುವ ಘಟನೆಗಳು ನಮ್ಮ ಸುತ್ತಮುತ್ತಲೇ ನಡೆಯುತ್ತಿರುವಂತಹದ್ದು ಅನಿಸುತ್ತದೆ.

ಮಾಸ್ತಿಯವರು ಸರಳ ಭಾಷೆಯಲ್ಲಿ ಎಲ್ಲರಿಗೂ ಅರ್ಥವಾಗುವಂತೆ ಹೇಳುತ್ತಾರೆ. ಮಾಸ್ತಿಯವರು ತಾವು ನೋಡಿ, ಕೇಳಿದಂತಹ ವಿಚಾರಗಳನ್ನು ತಮ್ಮ ಅನುಭವಕ್ಕೆ ತಂದುಕೊಂಡು ಅದನ್ನು ಕಥೆಗಳ ಮೂಲಕ ಜನರಿಗೆ ಹೇಳುವ ಪ್ರಯತ್ನ ಮಾಡಿದ್ದಾರೆ. ಮಾಸ್ತಿಯವರ ಕಥೆಗಳಲ್ಲಿ ಇಂದಿನ, ಹಿಂದಿನ, ನಮ್ಮ ನಾಡಿನ, ನಮ್ಮ ರಾಷ್ಟ್ರದ ಜೀವನ ಚಿತ್ರಗಳನ್ನು ಕಾಣಬಹುದು. ಇವೆಲ್ಲ ಸತ್ಯವನ್ನು ಬಿಂಬಿಸುತ್ತವೆ.

ಕಥೆಗಾರರಿಗೆ ಬಹುಶಃ ಅವರ ಬದುಕೇ ಕಥೆ ಹೇಳುವ ಕಲೆಯನ್ನು ಕಲಿಸಿರಬೇಕು. "ಜೀವನದ ಯಾವ ಮುಖವು ತನ್ನ ಸಮಗ್ರ ಕಥಾದೇಹವನ್ನು ಪ್ರಕಟಿಸುವುದು!"೨ ಎಂದು

ಬೇಂದ್ರೆಯವರು ಹೇಳಿದ್ದಾರೆ. ಮಾಸ್ತಿಯವರು ಕಥೆಯನ್ನು ಬರೆದರೆನ್ನುವುದಕ್ಕಿಂತ ಬದುಕು ಮತ್ತದರ ವ್ಯಾಪಕ ಅನುಭವಗಳು ಅವರಿಂದ ಕತೆಗಳನ್ನು ಬರೆಸಿರಬೇಕು ಎನಿಸುತ್ತದೆ.

ಮಾಸ್ತಿ ಅವರ ಕಥೆಗಳಲ್ಲಿ ಸಾಮಾಜಿಕ ಜನ ಜೀವನ ದಟ್ಟವಾಗಿ ಚಿತ್ರಣಗೊಂಡಿದೆ. ಇವರ ಕಥೆಗಳಲ್ಲಿ ಸಾಮಾಜಿಕ ಬದುಕಿನ ವಿವಿಧ ಮುಖಗಳ ದರ್ಶನವನ್ನು ನಾವು ಕಾಣುತ್ತೇವೆ. ಅವುಗಳಲ್ಲಿ ಗ್ರಾಮೀಣ ವಿಧವೆಯರು.

೧.ಗ್ರಾಮೀಣ ವಿಧವೆಯರು

ಮಾಸ್ತಿಯವರು ತಾವು ಚಿತ್ರಿಸಿರುವ ಪ್ರಪಂಚದಲ್ಲಿ ಯಾವುದೇ ಒಂದು ವರ್ಗಕ್ಕೇ ಮಾತ್ರ ಸೀಮಿತವಾಗದೆ ಎಲ್ಲಾ ವರ್ಗದ ಜನರ ನೋವು, ಬೇಸರಿಕೆ, ನೀತಿನಿಲುವು, ನಡೆನುಡಿಗಳು ಎಲ್ಲವನ್ನು ಸೂಕ್ಷ್ಮವಾಗಿ ಗುರುತಿಸುವ ಪ್ರಯತ್ನವನ್ನು ಮಾಡಿದ್ದಾರೆ. ಮಾಸ್ತಿಯವರು ಅಂಥ ಸಮಾಜದಲ್ಲೇ ಬದುಕಿದಂತ ವ್ಯಕ್ತಿಯಾದ್ದರಿಂದ ಅವರು ಆ ಸಮಾಜದಲ್ಲಿ ನಡೆಯುತಿದ್ದ ವಾಸ್ತವ ಸಂಗತಿಗಳನ್ನು ಸೂಕ್ಷ್ಮಾತಿ ಸೂಕ್ಷ್ಮವಾಗಿ ಗಮನಿಸಿ ಅದನ್ನು ಕಥೆಗಳಲ್ಲಿ ಹೇಳುವುದರ ಮೂಲಕ ಸಫಲತೆಯನ್ನು ಪಡೆದಿದ್ದಾರೆ.

ಶ್ರೀನಿವಾಸರವರು ಸಂಪ್ರದಾಯ ವ್ಯವಸ್ಥೆಯಲ್ಲಿ ಗಂಡನನ್ನು ಕಳೆದುಕೊಂಡ ಹೆಣ್ಣು ವಿಧವೆಯಾಗಿ ಬದುಕುವ ಅವಳ ಸ್ಥಿತಿಯನ್ನು ಯಥವತ್ತಾಗಿ ಕೊಡುತ್ತಾರೆ. ಇವರು ಬಹುಪಾಲು ಕಂಡಿರುವ ವಿಧವೆಯರು ಬ್ರಾಹ್ಮಣ ವರ್ಗದ ಅಥವಾ ಮಡಿವಂತರ ಹೆಣ್ಣು ಮಕ್ಕಳು. ಶೂದ್ರ ವರ್ಗದಲ್ಲಿ ಅಷ್ಟಾಗಿ ವಿಧವೆಯರು ಕಂಡುಬರುವುದಿಲ್ಲ. ಏಕೆಂದರೆ ಈ ವರ್ಗದಲ್ಲಿ 'ಕೂಡಿಕೆ'ಯ ಮೂಲಕ ಆ ವಿಧವೆಯ ಜೀವನಕ್ಕೆ ಪುನರ್ ವ್ಯವಸ್ಥೆ ಕಲ್ಪಿಸಿಕೊಡುವ ಸ್ಥಿತಿ ಇದೆ. ಆದರೆ ಬ್ರಾಹ್ಮಣ ವರ್ಗದಲ್ಲಿ ಗಂಡ ಸತ್ತ ನಂತರ ಹೆಂಡತಿಯಾದವಳು ತನ್ನ ಆಸೆ, ಆಕಾಂಕ್ಷೆಗಳನ್ನು ಬದಿಗೊತ್ತಿ ತಲೆಯನ್ನು ಬೋಳಿಸಿ ಕೆಂಪು ಸೀರೆ ಹುಟ್ಟು ಕೊಂಡು ಮೂಲೆಯಲ್ಲಿ ಕೂರಬೇಕಾಗಿತ್ತು. ಆದರೆ ಈ ಪದ್ಧತಿ ಇಂದು ಬದಲಾಗಿದೆ. ವಾಸ್ತವವಾಗಿ ಮಾಸ್ತಿಯವರು ವಿಧವ ವ್ಯವಸ್ಥೆಯನ್ನು ಒಪ್ಪಿಕೊಂಡಿರುವ ಮತ್ತು ಈ ವ್ಯವಸ್ಥೆಯನ್ನು ತಿರಸ್ಕರಿಸಿ ಮದುವೆಯಾಗಿರುವ ಸ್ತ್ರೀಯರನ್ನು ಚಿತ್ರಿಸಿದ್ದಾರೆ.

ಮಾಸ್ತಿ ಅವರ 'ಕಾಮನ ಹಬ್ಬದ ಒಂದು ಕಥೆ'ಯಲ್ಲಿ ಸಾವಿತ್ರಮ್ಮ ವಿಧವೆ. ಚಿಕ್ಕ ವಯಸ್ಸಿನಲ್ಲಿಯೇ ಅವಳಿಗೆ ತನ್ನ ಮಾವನ ಮಗನಾದ ಶೀನೀಯ ಜೊತೆ ಮದುವೆಯಾಗಿತ್ತು. ಸಾವಿತ್ರಮ್ಮ ತನ್ನ ತಂದೆ ತಾಯಿ ತೀರಿಕೊಂಡ ಮೇಲೆ ಅತ್ತೆ ಮನೆಗೆ ಬಂದು ಸೇರಿದಳು. ಇವಳಿಗೆ ತನ್ನ ಗಂಡ ಶೀನೀಯನ್ನು ಕಂಡರೆ ತುಂಬ ಪ್ರೀತಿ, ಗೌರವ ಆದರೆ ಶೀನೀ ಇವಳ ಬಗ್ಗೆ ಯಾವ ಯೋಚನೆಯನ್ನು ಮಾಡದೇ ಗುರುಗಳ ಜೊತೆ ಹೊರಟು ಹೋದವನು ಮತ್ತೆ ಬರಲೇ ಇಲ್ಲ. ಆಗ ಶೀನೀಯ ಅಣ್ಣಂದಿರು ಇಷ್ಟುದಿನವಾದರೂ ಅವನು ಬಂದಿಲ್ಲ, ಅಂದರೇ ಶೀನೀ ಸತ್ತು ಹೋಗಿರಬೇಕು ಎಂದು ಹೇಳಿ, ಅವನಿಗೆ ಸೇರಬೇಕಾದ ಎಲ್ಲ ಆಸ್ತಿಯನ್ನು ತಾವೇ ಹಂಚಿಕೊಂಡು

ಶೀನೀಯ ಹೆಂಡತಿಗೆ ಮತ್ತು ಅವನ ತಾಯಿಗೆ ಸ್ವಲ್ಪ ಜೀವನಾಂಶವನ್ನು ಕೊಟ್ಟು ಅವರು ಬೇರೆ ಬೇರೆಯಾದರು. ಶೀನೀಯ ಅಣ್ಣಂದಿರು ಶೀನೀ ಸತ್ತ ಅಂತ ತಿಳಿದು, ಮನುಷ್ಯತ್ವವೇ ಇಲ್ಲದವರಂತೆ ನಾಯಿ ನರಿಗಳಿಗಿಂತ ಕಡೆಯಾಗಿ ಆಕೆಯನ್ನು ನಡೆಸಿಕೊಂಡರು.

ಸಾವಿತ್ರಮ್ಮನವರು ಶೀನೀ ಸತ್ತ ಅಂತ ಅವನ ಅಣ್ಣಂದಿರು ಹೇಳಿದಾಗ ನಂಬಲಿಲ್ಲ. ಆದರೇ ತನ್ನ ಗಂಡನ ಜೊತೆ ಹೋಗಿದ್ದವನು ಬಂದು ತಮ್ಮ ಗಂಡ ತೀರಿ ಹೋದ ವಿಚಾರವನ್ನು ಹೇಳುತ್ತಾನೆ. ಆಗ "ಸಾವಿತ್ರಮ್ಮ ವಿಧವೆಯ ವೇಷವನ್ನು ಅಂಗೀಕರಿಸಿದಳು. ಅತ್ತೆ ಭಾವ ಊರಿನ ಜನ ಎಲ್ಲರೂ ಬೇಡ ಎಂದರೂ; ಗಂಡ ದೇಶಾಂತರ ಹೋದರೆ ಈ ವೇಷ ಯಾಕೆ ಎಂದರು. ಸಾವಿತ್ರಮ್ಮ ಕೇಳಲಿಲ್ಲ. 'ಏನಾಯಿತು ಎಂತ ತಿಳಿಯದೆ ಇದ್ದಾಗ ಎಲ್ಲಾದರೂ ಸುಖವಾಗಿರಲಿ ಎಂತ ನಾನು ಅರಿಶಿನ ಕುಂಕುಮ ಹಚ್ಚಿಕೊಳ್ಳುತ್ತಾ ಇದ್ದೆ. ತನಗೇನು ಆಸೆಯಿಲ್ಲವೆ? ಆದರೆ ನನಗೆ ಪ್ರಾಪ್ತಿಯಿಲ್ಲ. ಅವರು ಹೋದರು ಎಂದಮೇಲೆ ನಾನು ಹೋದ ಹಾಗೆಯೇ. ನನಗೇಕೆ ಸೊಗಸು? ನಾನು ಕೂದಲಿಟ್ಟುಕೊಂಡು ಅವರು ನರಕದೊಳಗೆ ಯಾಕೆ ಇರಬೇಕು', ಎಂದರು. ಈ ಜನ್ಮದಲ್ಲಿ ಸೇವೆ ಮಾಡುವುದಕ್ಕೆ ಸಿಕ್ಕದೆ ಹೋದ ಅವಕಾಶ ಮುಂದಿನ ಜನ್ಮಕ್ಕೆ ಸಿಕ್ಕಲಿ ದೇವರೇ ಎಂದು ತಮಗೆ ತಿಳಿದ ವ್ರತಗಳನ್ನೆಲ್ಲಾ ಮಾಡುವುದಕ್ಕೆ ಮೊದಲುಮಾಡಿದರು"೩ ಎಂದು ಆ ವಿಧವೆಯ ಬಗ್ಗೆ ಮರುಕ ವ್ಯಕ್ತ ಪಡಿಸುತ್ತಾರೆ.

ಚಿಕ್ಕ ವಯಸ್ಸಿನಲ್ಲೇ ಗಂಡನನ್ನು ಕಳೆದುಕೊಂಡ ಸಾವಿತ್ರಮ್ಮನ ಬಗ್ಗೆ ಅಲ್ಲಿನ ಸಮಾಜ ಅನುಕಂಪವನ್ನು ವ್ಯಕ್ತಪಡಿಸುವುದರ ಜೊತೆಗೆ ತಲೆ ಬೋಳಿಸಿಕೊಳ್ಳುವುದು, ಕೆಂಪು ಸೀರೆ ಉಡುವುದು ಇಂತಹ ಘೋರ ಸಂಪ್ರದಾಯಗಳನ್ನು ವಿರೋಧಿಸುತ್ತದೆ. ಆದರೆ ಆ ಸಂಪ್ರದಾಯಗಳ ನಡುವೆ ಬೆಳೆದಂತಹ ಸಾವಿತ್ರಮ್ಮನವರು ಆ ಸಂಪ್ರದಾಯಗಳನ್ನು ಒಪ್ಪಿಕೊಂಡಿದನ್ನು ಪ್ರತಿನಿಧಿಸುವ ಹೆಣ್ಣಾಗಿ ಕಂಡುಬರುತ್ತಾಳೆ.

'ನಿಜಗಲ್ಲಿನ ರಾಣಿ' ಕತೆಯಲ್ಲಿ ಬರುವ ನಿಜಗಲ್ಲಿನ ಆಗಿನ ಪಾಳೆಯಗಾರರಲ್ಲಿ ರಾಮರಸನಾಯಕನು ಪ್ರಸಿದ್ಧನು. ಇವನಿಗೆ ಇಬ್ಬರು ಹೆಂಡತಿಯರು. ಮೊದಲನೆಯವಳು ಲಕುಮವ್ವೆ, ಎರಡನೆಯವಳು ಗಿರಿಜವ್ವೆ. ಈಕೆಯ ತಮ್ಮ ಕಸ್ತೂರಿನಾಯಕನ ಕುತಂತ್ರದಿಂದ ರಾಜ ಸಾವನ್ನಪ್ಪುತ್ತಾನೆ. ಗಿರಿಜವ್ವೆ ಮತ್ತು ಲಕುಮವ್ವೆ ಇಬ್ಬರೂ ರಾಣಿಯರೂ ವಿಧವೆಯರಾಗುತ್ತಾರೆ. ಆದರೇ

ಹಿಂದಿನ ಕಟ್ಟುಪಾಡುಗಳನ್ನು ಅನುಸರಿಸುವ ಮಹಿಳೆಯರಾಗಿ ಇವರು ಕಂಡು ಬರುವುದಿಲ್ಲ. "ಲಕುಮವ್ವೆ ತಾನು ಸಹಗಮನ ಮಾಡುವುದಾಗಿ ತಿಳಿಸಿದಳು. ಗಿರಿಜವ್ವೆ "ನೀವು ಮನೆಗೆ ದೊಡ್ಡವರು, ಮಗುವನ್ನು ಸಾಕಿ ಗದ್ದಿಗೆಯ ಮೇಲೆ ಇರಿಸಬೇಕು. ಅದು ನಿಮ್ಮಿಂದ ಆಗುವುದಲ್ಲದೆ ನನ್ನಿಂದ ಆಗುತ್ತದೆಯೇ? ನೀವು ಇರಿ. ನಾನು ಸಹಗಮನ ಮಾಡುತ್ತೇನೆ"೮ ಎಂದಳು. ಅಷ್ಟರಲ್ಲಿ ಊರಿನ ಮುಖಂಡರು ಬಂದು ಯಾರೂ ಸಹಗಮನ ಮಾಡಕೂಡದು ಎಂದು ಹೇಳಿದರು. ಅದಕ್ಕೆ ಇಬ್ಬರೂ ರಾಣಿಯರು ಒಪ್ಪಿಕೊಂಡರು.

ಇಲ್ಲಿ ಗಿರಿಜವ್ವೆ ತನ್ನ ರಾಜ್ಯವನ್ನು ರಕ್ಷಿಸಿಕೊಳ್ಳುವುದಕೋಸ್ಕರ ದಳಪತಿಯನ್ನು ಮದುವೆಯಾಗಲು ಒಪ್ಪಿ ಸುಮಂಗಲಿಯಂತೆ ಅಲಂಕಾರವನ್ನು ಮಾಡಿಕೊಂಡಳು. ಅದನ್ನು ನೋಡಿದಂತಹ ಜನ ಸಾಮಾನ್ಯರೂ ಅಸಹ್ಯ ಪಟ್ಟುಕೊಂಡರು. ಏಕೆಂದರೆ ಅಲ್ಲಿನ ಜನರಿಗೆ ಗಿರಿಜವ್ವೆ ವಿಧವೆಯಾಗಿಯೇ ಇರಬೇಕು. ಜೊತೆಗೆ ಅಲ್ಲಿನ ಸಮಾಜ ವ್ಯವಸ್ಥೆ ಯಾವುದೇ ಬದಲಾವಣೆಯನ್ನು ಬಯಸುವುದಿಲ್ಲ.

ಗಿರಿಜವ್ವೆಯ ಪತಿಪರಾಯಣತೆ, ರಾಜ್ಯದ ಬಗ್ಗೆ, ಜನತೆಯ ಬಗ್ಗೆ ಇದ್ದ ಅಪಾರವಾದ ಪ್ರೀತಿಯಿಂದಾಗಿ ದಳಪತಿಯನ್ನು ಒಪ್ಪಿರುವುದಾಗಿ ಹೇಳಿ ಕೊನೆಗೆ ಇಷ್ಟೆಲ್ಲ ತೊಂದರೆಗೆ ಕಾರಣನಾದ ತನ್ನ ತಮ್ಮನ ಜೊತೆಯಲ್ಲಿ ಬಂಡೆಯಿಂದ ಬಿದ್ದು ಸಾಯುತ್ತಾಳೆ. ಆದರೆ ರಾಮರಸನಾಯಕನ ಹಿರಿಯ ಹೆಂಡತಿಯಾದ ಲಕುಮವ್ವೆ ವಿಧವೆಯಾಗಿಯೇ ಇದ್ದು ಕೊಂಡು ತುಂಬ ಧೈರ್ಯವಾಗಿ ರಾಜ್ಯಭಾರವನ್ನು ಮಾಡುವುದರ ಜೊತೆಗೆ ಗಿರಿಜವ್ವೆಯ ಮಗುವನ್ನು ಸಾಕಿ ಬೆಳೆಸಿದಳು. ಅದಕ್ಕೆ ಇವಳನ್ನು ಕಂಡರೇ ರಾಜ್ಯದ ಜನತೆಗೆ ಒಂದು ವಿಧವಾದ ಗೌರವ.

'ದುರದೃಷ್ಟದ ಹೆಣ್ಣು' ಕತೆಯಲ್ಲಿ ಬರುವ ತರುಣಿ ತುಂಬ ಚೆಲುವೆ. ಇವಳ ತಂದೆ ತಾಯಿಗೆ ಐದು ಜನ ಹೆಣ್ಣು ಮಕ್ಕಳು. ಅವರಲ್ಲಿ ಈ ತರುಣಿಯೆ ಹಿರಿಯವಳು. ಬಡ ಮನೆತನ. ಒಬ್ಬ ತರುಣ ಬಂದು ಆಕೆಯನ್ನು ಮದುವೆಯಾಗಿ ಬೆಂಗಳೂರಿಗೆ ಕರೆದು ಕೊಂಡು ಹೋದ. ಅದರೆ ಅಲ್ಲಿ ಅವನು ಆ ತರುಣಿಯನ್ನು ವೇಶ್ಯಾವೃತ್ತಿಗೆ ನೂಕುತ್ತಾನೆ. ಆಗ ಅಲ್ಲಿಗೆ ಬಂದಂತಹ ವ್ಯಕ್ತಿ ಇವಳ ಕತೆಯನ್ನು ಕೇಳಿ ಮರುಗಿ ಅವಳನ್ನು ಮದುವೆಯಾಗಲು ಒಪ್ಪುತ್ತಾನೆ. ಆದರೆ ಇವಳ ಗಂಡ ಒಪ್ಪುವುದಿಲ್ಲ. ಹಾಗಾಗಿ ಆ ವ್ಯಕ್ತಿ ಇವಳ ಗಂಡನನ್ನು ಸಾಯಿಸುತ್ತಾನೆ.

ತರುಣಿ ತನ್ನ ಗಂಡನ ನಡುವಳಿಕೆಯಿಂದ ಬೇಸತ್ತು, ಗಂಡನ ಸಾವಿಗೆ ಕಾರಣಳಾಗುವುದಲ್ಲದೇ, ತನ್ನ ವೈಧವ್ಯವನ್ನು ತಾನೇ ತಂದುಕೊಳ್ಳುತ್ತಾಳೆ. ವಿಧವೆಯಾಗಿ ಅನುಭವಿಸಬೇಕಾದ ಎಲ್ಲಾ ಪದ್ಧತಿಗಳನ್ನು ಧಿಕ್ಕರಿಸಿ, ಬೇರೆ ಒಬ್ಬ ವ್ಯಕ್ತಿಯನ್ನು ಮದುವೆಯಾಗುವುದರ ಮೂಲಕ ತನ್ನ ಜೀವನ ವ್ಯವಸ್ಥೆಯನ್ನು ಪುನರ್ ರೂಪಿಸಿಕೊಳ್ಳುತ್ತಾಳೆ.

'ಬಿಳಿಗಿರಿ ರಂಗ' ಎಂಬ ಕಥೆಯಲ್ಲಿ ರಂಗನ ತಾಯಿ ವಿಧವೆ. ರಂಗಪ್ಪ ಪೆರಿಯ ರಂಗನಾಥನಿಗೆ ಆನೆ ವಾಹನದ ಉತ್ಸವವನ್ನು ಮಾಡಿಸಲು ಕುಟುಂಬ ಸಮೇತ ಹೋಗುತ್ತಾನೆ. ಅವನ ತಾಯಿಗೆ ಆರೋಗ್ಯ ಸರಿ ಇಲ್ಲದ ಕಾರಣ ಅವಳು ಉತ್ಸವಕ್ಕೆ ಹೋಗುವುದಿಲ್ಲ. ಅವಳ ಭಕ್ತಿಗೆ ಮೆಚ್ಚಿ ಬೆಟ್ಟದಿಂದ ರಂಗನಾಥನೆ ಇಳಿದು ಬಂದು ದರ್ಶನ ಕೊಡುತ್ತಾನೆ.

ಕಥೆಗಾರರು ಯಾವುದೇ ವಿಧವೆಯರು ಮಂಗಳ ಕಾರ್ಯಗಳಿಗೆ ಹೋಗಬಾರದು ಅಂತ ಹೇಳಿದರೂ ಕೊನೆಗೆ ಆ ವಿಧವೆಯೇ ಇರುವಲ್ಲಿಗೆ ದೇವರನ್ನು ಕರೆಸಿ ದರ್ಶನವನ್ನು ಕೊಡಿಸುತ್ತಾರೆ. ಮಾಸ್ತಿಯವರು ಮುತ್ತೈದೆಯರಿಗಿಂತ ವಿಧವೆಯೇ ತುಂಬ ಶ್ರೇಷ್ಠಳಾದವಳು, ಇವಳ ಕೂಗಿಗೆ ಭಗವಂತ ಅವಳಿರುವಲ್ಲಿಗೆ ಓಡಿಬಂದನು. ಇಂತಹ ಕಡೆ ಮಾಸ್ತಿಯವರು ವಿಧವೆಯನ್ನು ತುಂಬ ಶ್ರೇಷ್ಠಳು ಎಂದು ಅಭಿಪ್ರಾಯ ಪಟ್ಟಂತೆ ಕಾಣುತ್ತದೆ.

ಗ್ರಾಮಗಳಲ್ಲಿದ್ದಂತಹ ಮುತ್ತೈದೆಯರು, ವಿಧವೆಯರು ತಲಾತಲಾಂತರದಿಂದ ಇದ್ದಂತೆ ಇರಬೇಕು ಎಂದು ಬಯಸುತ್ತಾರೆ. ಆ ರೀತಿ ಇರದೆ ಸ್ವಲ್ಪ ಸ್ವಂತ ಪ್ರವೃತ್ತಿಯನ್ನು ತೋರಿದರೆ ಸಾಕು ಅಲ್ಲಿನ ಜನಗಳು ಇವರನ್ನು ನೋಡಿ ಅಪಹಾಸ್ಯ ಮಾಡುತ್ತಿದ್ದರು.

ಒಟ್ಟಾರೆ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರಿಗೆ ವಿಧವೆಯರ ಬಗ್ಗೆ ಅನುಕಂಪವಿದೆ. ವಿಧವೆಯರನ್ನು ಹಾಗೆಯೇ ಉಳಿಸಿಕೊಳ್ಳುವ ವ್ಯವಸ್ಥೆಯ ಬಗ್ಗೆ, ಧರ್ಮದ ಬಗ್ಗೆ ಕ್ರೋಧವಿದೆ. ಇಂಥ ಅನಿಷ್ಟ ವ್ಯವಸ್ಥೆ ತೊಲಗಬೇಕೆಂಬ ಕಾಳಜಿ ಇದೆ. ಗ್ರಾಮಗಳಲ್ಲಿ ಕ್ಷೌರ ಮಾಡಿಸಿಕೊಳ್ಳುತ್ತಿರುವವರು ಗಂಡಸರು ಆದರೆ ಹಿಂದೆ ವಿಧವ ಸ್ತ್ರೀ ಕೂಡ ಪುರುಷರಂತೆ ತಲೆಯನ್ನು ಕ್ಷೌರಮಾಡಿಸಿಕೊಳ್ಳ ಬೇಕಾಗಿತ್ತು. ಈ ಒಂದು ವ್ಯವಸ್ಥೆ ಹೆಚ್ಚಾಗಿ ಕಂಡು ಬರುವುದು ಬ್ರಾಹ್ಮಣ ವರ್ಗದಲ್ಲಿ ಮಾತ್ರ. ಹಿಂದೆ ಬಾಲ್ಯ ವಿವಾಹ ಪದ್ಧತಿ ತುಂಬ ಜಾರಿಯಲ್ಲಿತ್ತು. ಇದರಿಂದ ಗಂಡಂದಿರು ಚಿಕ್ಕ ವಯಸ್ಸಿನಲ್ಲಿ ತೀರಿ ಹೋದರೂ ಕೂಡ ಅವರಿಗೆ ಪುನರ್ ವಿವಾಹ ಮಾಡುವಂತಿರಲಿಲ್ಲ. ಸ್ತ್ರೀಯರು ತಾವು

ಸಾಯುವವರೆಗೂ ತಲೆಯನ್ನು ಬೋಳಿಸಿಕೊಂಡು, ಕೆಂಪು ಸೀರೆ ಉಟ್ಟುಕೊಂಡು ಯಾವ ಶುಭ ಸಮಾರಂಭಗಳಿಗೂ ಹೋಗದೆ ವಿಧವೆಯರು ಇದ್ದು ಸತ್ತಂತೆ ಬದುಕುತ್ತಿದ್ದರು.

ಮಾಸ್ತಿಯವರು ಈ ವ್ಯವಸ್ಥೆಯಲ್ಲಿರುವ ವಿಧವೆಯರ ಜೀವನವನ್ನು ಕುರಿತು ಹೇಳುತ್ತ, ಸ್ವಲ್ಪ ಮಟ್ಟಿಗೆ ಬದಲಾವಣೆಯನ್ನು ಬಯಸುತ್ತಾರೆ. ಈ ಸಮಾಜದಲ್ಲಿ ಹೆಂಡತಿ ಸತ್ತರೆ ಗಂಡನಿಗೆ ಪುನಃ ಮದುವೆ ಮಾಡುತ್ತಾರೆ. ಆದರೆ ಗಂಡ ಸತ್ತರೆ ಮಾತ್ರ ಯಾಕೆ ಹೆಂಡತಿಗೆ ಪುನಃ ವಿವಾಹ ಮಾಡದೇ ಅವಳ ಬದುಕನ್ನು ಕತ್ತಲೆಗೆ ನೂಕುತ್ತಾರೆ?.

ಕಥೆಗಾರರು ಬದಲಾಗಬೇಕಾದ ಸಾಮಾಜಿಕ ವ್ಯವಸ್ಥೆಯತ್ತ ಕೈತೋರಿಸುತ್ತಾರೆ. ಗ್ರಾಮೀಣ ಸಮಾಜದಲ್ಲಿ ಅದರಲ್ಲೂ 'ಬ್ರಾಹ್ಮಣ ವರ್ಗ'ದಲ್ಲಿ ಮಾತ್ರ ಈ ಸಮಸ್ಯೆ ತೀರ ಜಟಿಲವಾದುದು. ಪಟ್ಟಣಗಳಲ್ಲಿ ಈ ಸಮಸ್ಯೆ ಅಷ್ಟು ಪ್ರಭಲವಾಗಿಲ್ಲ. ಹಳ್ಳಿಗಳಲ್ಲಿ ಮಾತ್ರ ಈ ಸಮಸ್ಯೆ ಹೆಚ್ಚಾಗಿ ಕಂಡು ಬರುತ್ತದೆ. ಮಾಸ್ತಿಯವರು ತಮ್ಮ ಕತೆಗಳಲ್ಲಿ ಎಲ್ಲಿಯೂ ಶೂದ್ರ ವಿಧವೆಯರ ಬಗ್ಗೆ ಹೇಳಿಲ್ಲದಿರುವುದನ್ನು ನೋಡಿದರೆ, ಈ ವ್ಯವಸ್ಥೆ ವೈದಿಕ ಧರ್ಮದಲ್ಲಿ ಮಾತ್ರ ಇರುವುದು ಎಂಬುವುದು ಸ್ಪಷ್ಟವಾಗಿ ತಿಳಿಯುತ್ತದೆ.

೨.ಜಾತಿ ವ್ಯವಸ್ಥೆ

ಗ್ರಾಮೀಣ ಬದುಕಿನಲ್ಲಿ ಜಾತಿ ಬಹಳ ಪ್ರಮುಖವಾದ ಸಂಗತಿ. ಮನುಷ್ಯ ಜೀವನದ ಎಲ್ಲ ನೆಲೆಗಳನ್ನು ಇದು ಬಹಳ ಸುಲಭವಾಗಿ ನಿಯಂತ್ರಿಸಿ ಬಿಡುತ್ತದೆ. ಒಬ್ಬ ವ್ಯಕ್ತಿಯು ಸಾಮಾಜಿಕವಾಗಿ, ಆರ್ಥಿಕವಾಗಿ ಧಾರ್ಮಿಕವಾಗಿ ಹಿಂದುಳಿಯಲು ಜಾತಿಯೇ ಪ್ರಮುಖ ಕಾರಣ. ಯಾವುದೇ ಒಬ್ಬ ವ್ಯಕ್ತಿ ಮೇಲುನೋಟಕ್ಕೆ ಜಾತಿಯನ್ನು ಬಿಟ್ಟಿರುವವನಂತೆ ಕಂಡರು, ಆತ ಆಚರಣೆಗಳ ಮೂಲಕ ಅದನ್ನು ಬೆಂಬಲಿಸುವ ಪ್ರಯತ್ನ ಮಾಡುತ್ತಿರುತ್ತಾನೆ.

ಪ್ರಾಚೀನ ಕಾಲದಲ್ಲಿ ಜನರು ಮಾಡುವ ವೃತ್ತಿಯನ್ನು ಅನುಸರಿಸಿ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು ಎಂದು ವಿಂಗಡಿಸುವುದರ ಮೂಲಕ ಗುರುತಿಸಲಾಗುತ್ತಿತ್ತು. ಅಂದರೆ ಬ್ರಹ್ಮನ ಬಾಯಿಂದ ಬಂದಂತಹ ಬ್ರಾಹ್ಮಣರು ಪೂಜೆ, ಯಜ್ಞಗಳನ್ನು ಮಾಡುತ್ತಿದ್ದರು. ಇವರು ಉಳಿದ ಎಲ್ಲ ವರ್ಗಗಳಿಗಿಂತ ತುಂಬ ಶ್ರೇಷ್ಠರು. ಬ್ರಹ್ಮನ ತೋಳಿನಿಂದ ಬಂದಂತಹ ಕ್ಷತ್ರಿಯರು ಯುದ್ಧವನ್ನು ಮಾಡುವುದರ ಮೂಲಕ ರಾಜ್ಯ ರಕ್ಷಣೆಯನ್ನು ಮಾಡುತ್ತಿದ್ದರು. ಅದೇ ರೀತಿ ವೈಶ್ಯರು ಬ್ರಹ್ಮನ ತೊಡೆಯಿಂದ ಬಂದವರು. ಇವರು ವ್ಯಾಪಾರ ಇತ್ಯಾದಿ ಕೆಲಸಗಳಲ್ಲಿ ನಿರತರಾಗಿದ್ದರೂ. ಕೊನೆಯದಾಗಿ ಬ್ರಹ್ಮನ ಪಾದದಿಂದ ಬಂದಂತವರು ಶೂದ್ರರು. ಇವರು ಎಲ್ಲ ವರ್ಗಗಳಿಗಿಂತ ಕೆಳವರ್ಗದವರು. ಶೂದ್ರರು ಮೇಲಿನ ಮೂರು ವರ್ಗಗಳ ಸೇವೆ ಮಾಡುತ್ತಿದ್ದರು. ಇವರಿಗಿಂತ ಕೆಳಗೆ ಇದ್ದ ಪಂಚಮರು ಬೀದಿ ಕಸಗೂಡಿಸುವುದು, ಚಪ್ಪಲಿ ಹೊಲಿಯುವುದು ಇತ್ಯಾದಿ ಮೊದಲಾದ ಕೆಲಸಗಳನ್ನು ಮಾಡುತ್ತಿದ್ದರು.

ಅಂದಿನ ಕಾಲದಲ್ಲಿ ಇದ್ದಂತಹ ವರ್ಗಗಳೇ ಇಂದು ಜಾತಿಗಳಾಗಿ ಪರಿವರ್ತಿತವಾಗಿ ಸಮಾಜದ ವ್ಯವಸ್ಥೆಯನ್ನು ಭೂತದ ರೀತಿಯಲ್ಲಿ ಕಾಡುತ್ತಿವೆ.

ಹಿಂದೆ ಬ್ರಾಹ್ಮಣ ವರ್ಗದಲ್ಲಿ ಹುಟ್ಟಿದವರು ಮಾತ್ರ ಶಿಕ್ಷಣವನ್ನು ಕಲಿಯಬೇಕು ಎಂಬ ವ್ಯವಸ್ಥೆ ಇತ್ತು. ಕೆಳವರ್ಗದ ಮಕ್ಕಳು ವಿದ್ಯಾಭ್ಯಾಸ ಕಲಿಯುವುದೇ ಒಂದು ಮಹಾ ಅಪರಾಧವೆಂದು ಎನ್ನುತ್ತಿದ್ದರು. ಉನ್ನತವರ್ಗದವರ ದಬ್ಬಾಳಿಕೆ, ದೌರ್ಜನ್ಯಗಳಿಗೆ ಒಳಗಾಗಿ ಇವರು ಹೇಳಿದಂತೆ ಕೇಳಿಕೊಂಡು ಇರಬೇಕಾಗಿತ್ತು. ಮೇಲ್ವರ್ಗದ ಪುರುಷರು ಕೆಳವರ್ಗದ ಸ್ತ್ರೀಯರ ಜೊತೆ ಅನೈತಿಕ ಸಂಬಂಧವನ್ನು ಇಟ್ಟುಕೊಳ್ಳ ಬಹುದಿತ್ತು. ಆದರೆ ಅವರನ್ನು ಮದುವೆಯಾಗುವಂತಿರಲಿಲ್ಲ. ಅದೇ

ರೀತಿ ಮೇಲ್ವರ್ಗದ ಸ್ತ್ರೀಯರು ಕೆಳವರ್ಗದ ಪುರುಷರನ್ನು ಮದುವೆಯಾಗುವುದಕ್ಕೆ ಅಲ್ಲಿನ ಸಮಾಜ ವ್ಯವಸ್ಥೆ ಒಪ್ಪುತ್ತಿರಲಿಲ್ಲ.

ಬ್ರಾಹ್ಮಣ ವರ್ಗದವರಿಗೆ ಎಲ್ಲಾ ರೀತಿಯ ಸ್ವತಂತ್ರ ದೊರಕುತ್ತಿತ್ತು. ಆದರೇ ಅವರಿಗಿಂತ ಕೆಳವರ್ಗದ ವ್ಯಕ್ತಿಗಳಿಗೆ ಮಾತ್ರ ಯಾವ ಸ್ವತಂತ್ರವು ದೊರಕುತ್ತಿರಲಿಲ್ಲ. ಇವರು ಮೇಲ್ವರ್ಗದವರು ಹೇಳಿದ ರೀತಿಯಲ್ಲಿಯೇ ಬದುಕ ಬೇಕಾಗಿತ್ತು. ಗ್ರಾಮಗಳಲ್ಲಿ ನಾವು ಹೆಚ್ಚಾಗಿ ಕೆಳವರ್ಗದವರ ಮೇಲೆ ಆಗುತ್ತಿರುವಂತಹ ಶೋಷಣೆಗಳನ್ನು ಕಾಣಬಹುದು. ಆದರೇ ಇಂತಹ ಶೋಷಣೆಗಳು ಪಟ್ಟಣಗಳಲ್ಲಿ ಅಷ್ಟಾಗಿ ಕಾಣಲಾಗುವುದಿಲ್ಲ.

ಮಾಸ್ತಿಯವರು ಕತೆಗಳಲ್ಲಿ ಜಾತಿಯ ಬಗ್ಗೆ ಅತ್ಯಂತ ಸೂಕ್ಷ್ಮವಾಗಿ ಹೇಳುವ ಪ್ರಯತ್ನವನ್ನು ಮಾಡಿದ್ದಾರೆ. ಇವರ ಕತೆಗಳಲ್ಲಿ ಅತ್ಯಂತ ಪ್ರಸಿದ್ಧವಾದ ಕಥೆ ಆದರೆ 'ವೆಂಕಟಶಾಮಿ ಪ್ರಣಯ'. ಇದು ದೊಂಬರ ಹುಡುಗಿಯಲ್ಲಿ ಅನುರಕ್ತನಾದ ನಾಯಿಂದರ ಹುಡುಗ ವೆಂಕಟಶಾಮಿಯ ಅದಮ್ಯ ಪ್ರಣಯ ಕಥೆ. ಆ ಊರಿನಲ್ಲಿ ದೊಂಬರ ಹುಡುಗಿಯ ಬಗ್ಗೆ ನಾಯಿಂದನಿಗೆ ಮಾತ್ರ ಆಸೆಯಾಗುವುದಿಲ್ಲ. ಊರ ಹಿರಿಯರಿಗೂ ಅವಳ ಬಗ್ಗೆ ಆಸೆಯಾಗುತ್ತದೆ. ಆದರೆ ಅವಳು ಕೆಳಜಾತಿಯವಳು ಎಂದು ಎಲ್ಲರು ತಿರಸ್ಕರಿಸುತ್ತಾರೆ. ವೆಂಕಟಶಾಮಿ ತಾನು ಮೇಲ್ವರ್ಗದವನಾಗಿದ್ದರು ಕೂಡ ಅವಳನ್ನು ಪ್ರೀತಿಸುತ್ತಿರುತ್ತಾನೆ. ಅದನ್ನು ಯಾರು ಒಪ್ಪುವುದಿಲ್ಲ. ಗ್ರಾಮಗಳಲ್ಲಿ ಇರುವಷ್ಟು ಕಟ್ಟುಪಾಡುಗಳು ಸಂಪ್ರದಾಯಗಳು ಪಟ್ಟಣದಲ್ಲಿ ಇಲ್ಲ ಅದಕ್ಕೇ ಅವನು ದೊಂಬರ ಹುಡುಗಿಯ ಜೊತೆ ಬೆಂಗಳೂರಿಗೆ ಹೋಗಲು ನಿರ್ಧರಿಸುತ್ತಾನೆ.

ಎಲ್ಲ ವಿಚಾರಗಳನ್ನು ತಿಳಿದ ವೆಂಕಟಶಾಮಿಯ ತಾಯಿ ಅಲ್ಲಿನ ವ್ಯವಸ್ಥೆಯನ್ನು ಕುರಿತು ತನ್ನ ಮಗನಿಗೆ "ಆ ದೊಂಬರ ಹುಡುಗೀನ ಕಂಡು ಮರುಳಾದ ಅಂತಾರಲ್ಲೋ, ಯಾವಾಗಲೂ ಅವರ ಜೊತೆಯಲ್ಲೇ ಇರುತ್ತೀಯಂತಲ್ಲ?.

'ಹೌದಮ್ಮ'

'ಹಿಂಗೆ ಮಾಡಬೌದೇನೋ?'

'ಬೌದೋ ಗಿವ್ದೋ ಅವಳ ಬಿಟ್ಟು ನಾನಿರಲಾರೆ ಅಮ್ಮ'

ಹಿಂಗನ್ಕೋರುಂಟೇನೋ, ಹೆತ್ತೋರು ಸಾಕಿದೋರ ಮಾರ್ಯಾದಿ ಬೇಡವಾ, ಜಾತಿಯೋರು ಏನೆಂದಾರು ಅಂತ ಭಯ ಬೇಡವಾ?"[೫] ತಾಯಿ ಎಷ್ಟು ಹೇಳದರೂ ಅವನು ಒಪ್ಪುವುದಿಲ್ಲ. ಕೊನೆಗೆ ಗೌಡರ ಮೂಲಕವೂ ಸಹ ಅವನಿಗೆ ಬುದ್ಧಿ ಮಾತನ್ನು ಹೇಳಸುತ್ತಾರೇ. ಆದರೇ ಇದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ.

ವೆಂಕಟಶಾಮಿ ಸಮಾಜದ ಕಟ್ಟುಪಾಡುಗಳನ್ನು ದಿಕ್ಕರಿಸಿ ಹೋಗಲು ಯತ್ನಿಸುತ್ತಾನೆ. ಆದರೆ ಅದರಿಂದ ಹೊರಬರಲು ಆಗದೇ ತನ್ನ ಪ್ರೀತಿಗಾಗಿ ಧೀರನಂತೆ ಬದುಕನ್ನೇ ಬಲಿ ಕೊಡುತ್ತಾನೆ.

ಮಾಸ್ತಿ ಅವರು ಪ್ರೀತಿ-ಪ್ರಣಯಗಳು ಜಾತಿಯ ಕಟ್ಟುಪಾಡನ್ನು ಮೀರಿ ಹೋಗ ಬಲ್ಲವು ಎಂಬುದನ್ನು, ಆಗಿನ ಸಮಾಜ ಅದನ್ನು ಆಗಗೊಳಸಲಿಲ್ಲ ಎಂಬುದನ್ನು ಅತ್ಯಂತ ನಿರುದ್ವಿಗ್ನವಾಗಿ ಹೇಳದ್ದಾರೆ.

'ವೆಂಕಟಿಗನ ಹೆಂಡತಿ' ಕಥೆಯಲ್ಲಿ ವೆಂಕಟಿಗನ ಹೆಂಡತಿ ಇವನನ್ನು ತಿರಸ್ಕರಿಸಿ ಶ್ರೀಮಂತನಾದ ರೆಡ್ಡಿಯನ್ನು ಮೆಚ್ಚಿ ಅವನೊಂದಿಗೆ ಬದುಕಲು ಹೋಗುತ್ತಾಳೆ. ಅದಕ್ಕಾಗಿ ವೆಂಕಟಿಗ ಯಾವ ಕೋಪವನ್ನು ಮಾಡಿಕೊಳ್ಳದೇ ಸಹನೆ, ಔದಾರ್ಯ, ಅನುಕಂಪೆಯಿಂದ ನಡೆದುಕೊಳ್ಳುತ್ತಾನೆ. ಅವನ ಅತ್ತೆ, ಅವನ ಹೆಂಡತಿ, ಅವಳ ಪ್ರಿಯಕರ ಎಲ್ಲರೂ ಬೇರೊಂದು ಮದುವೆ ಆಗುವಂತೆ ತಿಳಸಿದರೂ ವೆಂಕಟಿಗ ಮಾತ್ರ "ಇಂದಲ್ಲದಿದ್ದರೆ, ಇನ್ನೊಂದು ದಿನ ಈ ಜನ್ಮ ಜನ್ಮಕ್ಕಲ್ಲದೆ ಇದ್ದರೆ ಇನ್ನೊಂದು ಜನ್ಮಕ್ಕಾದರೂ ನಾನೂ ಇವಳಗೆ ದಿಕ್ಕಾಗಬೇಕು."[೬] ಎಂಬ ಪ್ರೀತಿಯಿಂದ ಊರನ್ನು ಬಿಟ್ಟು ಸೌದೆಯನ್ನು ಮಾರಿಕೊಂಡಿದ್ದನು.

ವೆಂಕಟಿಗನನ್ನು ತಿರಸ್ಕರಿಸಿ ಹೋಗಿದ್ದ ಆತನ ಹೆಂಡತಿ ಕೆಲದಿನಗಳ ನಂತರ ಪ್ರಿಯಕರನ ಹೀನ ಸ್ವಭಾವವನ್ನು ತಿಳದು ವೆಂಕಟಿಗನೊಂದಿಗೆ ಬಾಳಬೇಕೆಂದು ಹಿಂತಿರುಗಿ ಬಂದವಳಗೆ ಒಂದು ಮಗುವಿದ್ದರೂ ಕೂಡ ವೆಂಕಟಿಗ ಅವಳನ್ನು ಸ್ವೀಕರಿಸುತ್ತಾನೆ.

ವೆಂಕಟಿಗ ಕೀಳು ಕುಲದ ವ್ಯಕ್ತಿಯಾಗಿದ್ದಾನೆ. ಏಕೆಂದರೆ ಶೂದ್ರರಲ್ಲಿ 'ಕೂಡಿಕೆ' ಎಂಬ ವ್ಯವಸ್ಥೆಯ ಮೂಲಕ ಸ್ತ್ರೀಯರ ಜೀವನವನ್ನು ಪುನರ್ ರೂಪಿಸುತ್ತಾರೆ. ಆದರೆ ಮೇಲ್ವರ್ಗದಲ್ಲಿ ಈ ವ್ಯವಸ್ಥೆ ಜಾರಿಯಲ್ಲಿ ಇಲ್ಲ. ಆದ್ದರಿಂದ ವೆಂಕಟಿಗ ತನ್ನ ಹೆಂಡತಿ ಬೇರೆಯವರ ಜೊತೆ ಇದ್ದು ಅವಳಗೆ

ಒಂದು ಮಗು ಕೂಡ ಇದೇ. ಇಂತಹ ಹೆಂಡತಿಯನ್ನು ಒಪ್ಪಿಕೊಳ್ಳುವ ಒಳ್ಳೆಯ ವ್ಯಕ್ತಿತ್ವವನ್ನು ಆತ ಬೆಳೆದ ಸಮಾಜ ದೊರಕಿಸಿ ಕೊಟ್ಟಿರಬಹುದು.

ಒಟ್ಟಾರೆಯಾಗಿ ಮೇಲ್ವರ್ಗಕ್ಕೇ ಸೇರಿದ ಮಾಸ್ತಿಯವರು ತಮ್ಮ ಕಥೆಗಳಲ್ಲಿ ಕೆಳವರ್ಗದವರ ಬಗ್ಗೆ ಹೇಳುತ್ತ ಅವರು ಬದಲಾವಣೆಯನ್ನು ಬಯಸುತ್ತಾರೆ. ಆದರೆ ಯಾವ ಬದಲಾವಣೆಯು ಆಗುವುದಿಲ್ಲ. ಮಾಸ್ತಿಯವರು ಮೇಲುನೋಟಕ್ಕೆ ಕೆಳವರ್ಗದವರ ಪರವಾಗಿರುವವರಂತೆ ಕಂಡರೂ ಕೂಡ ಅವರು ತಮ್ಮ ವೈದಿಕ ಸಂಪ್ರದಾಯದ ಕಡೆಯೇ ಹೆಚ್ಚುವಾಲಿರುವುದನ್ನು ನಾವು ಕಾಣಬಹುದು.

೩. ಗಂಡ – ಹೆಂಡತಿ ಸಂಬಂಧಗಳು

ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳು ಹೆಚ್ಚಾಗಿ ಅವಿದ್ಯಾವಂತರಾಗಿರುತ್ತಾರೆ. ಆದರೆ ಅವರು ಉತ್ತಮ ಸುಸಂಸ್ಕೃತರು. ಪುರಾಣದಲ್ಲಿ ಹೆಣ್ಣು ಮಕ್ಕಳ ಬಗ್ಗೆ ಹೇಳುತ್ತ ಇವಳು ಬಾಲ್ಯದಲ್ಲಿ ತಂದೆಯ ಆಶ್ರಯದಲ್ಲಿ, ಯೌವನದಲ್ಲಿ ಗಂಡನ ಆಶ್ರಯದಲ್ಲಿ, ಮುಪ್ಪಿನಲ್ಲಿ ಮಗನ ಆಶ್ರಯದಲ್ಲಿ ಇರಬೇಕು. ಅಂದರೇ ಹೆಣ್ಣಿಗೆ ಯಾರದರೂ ಒಬ್ಬರ ಆಶ್ರಯ ಇರಲೇ ಬೇಕು. ಅವಳು ಒಂಟಿಯಾಗಿ ಜೀವನವನ್ನು ನಡೆಸುವುದಕ್ಕೆ ಸಮರ್ಥಳಲ್ಲ ಎಂದು ಹೇಳಲಾಗಿದೆ.

ಹಳ್ಳಿಗಳಲ್ಲಿ ಇರುವ ಹೆಣ್ಣು ಮಕ್ಕಳಿಗೆ ಯಾವುದೇ ಸ್ವತಂತ್ರವಿರಲಿಲ್ಲ. ಇವರು ತಂದೆ ಹೇಳಿದನ್ನು ಕೇಳಿಕೊಂಡು ಅವರು ಹೇಳಿದ ರೀತಿಯಲ್ಲಿ ಇರಬೇಕಾಗುತ್ತಿತ್ತು. ತಂದೆ ಒಪ್ಪಿದ ಹುಡುಗನನ್ನೇ ಮದುವೆ ಯಾಗಬೇಕಿತ್ತು. ತಾನು ಚಿಕ್ಕಂದಿನಿಂದ ಆಡಿ ಬೆಳೆದ ತನ್ನ ತವರು ಮನೆಯನ್ನು ಬಿಟ್ಟು ಗಂಡನ ಮನೆಯನ್ನೇ ತನ್ನ ಮನೆ ಅಂದುಕೊಳ್ಳಬೇಕು. ಆ ಮನೆಯ ಮರ್ಯಾದೆಯನ್ನು ಕಾಪಾಡಿಕೊಳ್ಳುವ ಕರ್ತವ್ಯ ಇವಳ ಮೇಲಿರುತ್ತದೆ. ಜೊತೆಗೆ ಹೆಂಡತಿಯಾದವಳು ಗಂಡನಿಗೆ ಬೆನ್ನೆಲುಬಾಗಿ ನಿಂತುಕೊಂಡು ಅವನ ಕೆಲಸ ಕಾರ್ಯಗಳಲ್ಲಿ ಸಹಾಯಕಳಾಗಿ ಇರಬೇಕು.

ಗಂಡ – ಹೆಂಡತಿಯ ಸಂಬಂಧ ತುಂಬ ಪವಿತ್ರವಾದ ಸಂಬಂಧ. ಯಾವುದೋ ಊರಿನ ಗಂಡು ಯಾವುದೋ ಊರಿನ ಹೆಣ್ಣನ್ನು ಮದುವೆಯಾಗುತ್ತಾನೆ. ಇದರಿಂದ ಆ ಇಬ್ಬರ ಕುಟುಂಬಗಳಲ್ಲಿ ಮಾತ್ರ ಸಂಬಂಧ ಬೆಸೆಯುವುದಿಲ್ಲ. ಬದಲಿಗೆ ಊರು ಊರುಗಳ ನಡುವೆ ಸಂಬಂಧವನ್ನು ಬೆಸೆಯುತ್ತವೆ. ಈ ರೀತಿ ಮದುವೆಯಿಂದಾಗಿ ಜನಗಳಲ್ಲಿ ನಮ್ಮವರು ತಮ್ಮವರು ಎಂಬ ಒಳ್ಳೆಯ ರೀತಿಯ ಬಾಂಧವ್ಯ ಬೆಳೆಯುತ್ತದೆ. ಅದೇ ರೀತಿ ಯಾವುದೋ ದೇಶದ ಗಂಡು ಮತ್ತೊಂದು ದೇಶದ ಹೆಣ್ಣನ್ನು ಮದುವೆಯಾಗುವುದರಿಂದ ಸ್ವಲ್ಪ ಮಟ್ಟಿಗೆ ಸಂಘರ್ಷಗಳು ಕಮ್ಮಿಯಾಗಿ ಸಮಾಜದ ಅಭಿವೃದ್ಧಿಗೆ ಪೂರಕವಾಗುತ್ತದೆ.

ಗಂಡ – ಹೆಂಡತಿ ಇಬ್ಬರೂ ಕೂಡ ನೆಮ್ಮದಿಯಿಂದ ಉತ್ತಮವಾದ ರೀತಿಯಲ್ಲಿ ಬದುಕಿದರೆ ಮಾತ್ರ ಇವರ ಸಂಸಾರ ಚೆನ್ನಾಗಿರುತ್ತದೆ. ಗಂಡನಾದವನು ಹೆಂಡತಿಯನ್ನು ತುಂಬ ಆತ್ಮೀಯತೆಯಿಂದ ಗೌರವಿಸಬೇಕು. ಅದೇ ರೀತಿ ಹೆಂಡತಿಯಾದವಳು ಕೂಡ ತನ್ನ ಗಂಡನನ್ನು ತುಂಬ ಪ್ರೀತಿಯಿಂದ ನೋಡಿಕೊಳ್ಳಬೇಕು.

ಮಾಸ್ತಿಯವರು ಕಥೆಗಳಲ್ಲಿ ಗಂಡ – ಹೆಂಡತಿಯ ಸಂಬಂಧ ಚೆನ್ನಾಗಿರುವುದರ ಬಗ್ಗೆಯು, ಗಂಡ ಸರಿ ಇದ್ದರೆ ಹೆಂಡತಿ ಸರಿ ಇರುವುದಿಲ್ಲ, ಹೆಂಡತಿ ಸರಿ ಇದ್ದರೆ ಗಂಡ ಸರಿ ಇರುವುದಿಲ್ಲ. ಇವರುಗಳ ಬಗ್ಗೆ ಹೇಳುತ್ತ ನಮ್ಮ ಸಮಾಜ ವ್ಯವಸ್ಥೆಯ ವಾಸ್ತವ ಸ್ಥಿತಿಯ ಬಗ್ಗೆ ಹೇಳುತ್ತಾರೆ.

'ಮಲೆನಾಡಿನ ಒಂದು ಪಿಶಾಚ' ಕಥೆಯು ಅದ್ಭುತ ವಾದುದಾಗಿದೆ. ಈ ಕಥೆಯ ನಾಯಕ ನರಸಿಂಹನ್ ಮಲೆನಾಡಿನ ಒಂದು ಹಳ್ಳಿಗೆ ಪೋಸ್ಟುಮೇಸ್ಟರಾಗಿ ಕೆಲಸಕ್ಕೆ ಸೇರಿ ಕೊಳ್ಳುತ್ತಾನೆ ಅವನ ಹೆಂಡತಿ ಗರ್ಭಿಣಿಯಾಗಿದ್ದಳು. ಆದ್ದರಿಂದ ಅವನು ನಾನು ಅಲ್ಲಿಗೆ ಹೋಗಿ ಅಲ್ಲಿನ ಸ್ಥಿತಿಯನ್ನು ನೋಡಿಕೊಂಡು ನಿನ್ನನ್ನು ಕರೆಸಿಕೊಳ್ಳುತ್ತೇನೆ ಎಂದು ಹೇಳಿ ಹೋಗುತ್ತಾನೆ. ಅಲ್ಲಿ ಅವನಿಗೆ ಒಬ್ಬ ವ್ಯಕ್ತಿಯಿಂದ ಪಿಶಾಚಿಯ ಬಗ್ಗೆ ಮಾಹಿತಿ ತಿಳಿದು ಭಯವಾಗುತ್ತದೆ. ಆಗ ಅವನು ಹೆಂಡತಿಗೆ ಒಂದು ಕಾಗದ ಬರೆದು "ಇಲ್ಲ ಹೆರಿಗೆಗೆ ಅನುಕೂಲವಿಲ್ಲ. ನೀನು ಅಲ್ಲಿಯೇ ಇದ್ದು ಹೆರಿಗೆಯಾದ ಮೇಲೆ ಬರುವುದು ಒಳ್ಳೆಯದು', ಎಂದು ಹೇಳಿದನು. ಹೆಂಡತಿ 'ಅನುಕೂಲವಿಲ್ಲದ ಆ ಊರಿನಲ್ಲಿ ನಿಮ್ಮನ್ನು ಕೇಳುವವರು ಯಾರು? ನಾನು ಹತ್ತಿರ ಇದ್ದು ನಿಮ್ಮ ಊಟ ಉಪಚಾರ ನೋಡಿಕೊಂಡರೆ ನೀವು ಹತ್ತಿರ ಇದ್ದು ನನ್ನ ಕಷ್ಟ ಸುಖ ನೋಡಿಕೊಳ್ಳಿ. ನನ್ನನ್ನು ಇಲ್ಲಿ ಯಾರೋ ವಿಚಾರಿಸಿಕೊಳ್ಳುವುದಕ್ಕಿಂತ ಅಲ್ಲಿ ನೀವೇ ವಿಚಾರಿಸಿ ಕೊಳ್ಳುವುದು ಸುಖವೆಂದು ಕಾಣುತ್ತದೆ."೭ ಎಂದು ಕಾಗದ ಬರೆದಳು.

ಗಂಡನಾದವನು ಪಿಶಾಚಿಯ ಬಗ್ಗೆ ತಿಳಿದು ತನ್ನ ಹೆಂಡತಿಗೆ ತೊಂದರೆಯಾಗುತ್ತದೆ ಎಂದು ಬಯಸಿದ. ಅದೇ ರೀತಿ ಹೆಂಡತಿಯೂ ಕೂಡ ಆ ಊರಿನಲ್ಲಿ ತನ್ನ ಗಂಡ ಕಷ್ಟದ ಜೀವನವನ್ನು ಮಾಡುತ್ತಿರಬಹುದು ಎಂದು ಕೊಂಡು ತಾನು ಆ ಊರಿಗೆ ಬರುತ್ತೇನೆ ಎಂದು ತಿಳಿಸಿದಳು.

ಒಟ್ಟಿನಲ್ಲಿ ಈ ಕತೆಯಲ್ಲಿ ಗಂಡ ಹೆಂಡತಿಯ ಆತ್ಮಿಯತೆ, ಪ್ರೀತಿ ಬರೀ ಸಂತೋಷದಲ್ಲಿ ಇದ್ದಾಗ ಮಾತ್ರವಿರದೇ, ಕಷ್ಟದಲ್ಲಿ ಇದ್ದಾಗ ಅದನ್ನು ಇಬ್ಬರೂ ಸೇರಿ ಎದುರಿಸಬೇಕು ಎಂಬುವುದರಲ್ಲಿ ಇರುವ ಗಾಢವಾದ ಪ್ರೀತಿಯನ್ನು ತಿಳಿಯಬಹುದು.

'ಜೋಗ್ಯೋರ ಅಂಜಪ್ಪನ ಕೋಳಿ ಕಥೆ'ಯಲ್ಲಿ ಬರುವ ಅಂಜಪ್ಪನು ಪದಗಳನ್ನು ಹಾಡುತ್ತ ಊರೆಲ್ಲಾ ತಿರುಗಿ ಭಿಕ್ಷೆಯನ್ನು ಎತುತ್ತಿದ್ದನು. ಆಗ ಅವನಿಗೆ ಒಬ್ಬಳು ಹುಡುಗಿ ಕೋಳಿ ಕೊಟ್ಟಿದ್ದಳು.

ಇವಳು ಅಷ್ಟು ಒಳ್ಳೆಯ ಗೃಹಿಣಿಯಾಗಿರಲಿಲ್ಲ ಏಕೆಂದರೆ ತನ್ನ ಗಂಡ ಪೋಲಿ ಬಿದ್ದಿದ್ದ ಅಂತ ತಿಳಿದು ಇವಳು ಅವನನ್ನು ಸರಿದಾರಿಗೆ ತರುವ ಯಾವ ಪ್ರಯತ್ನವನ್ನು ಮಾಡದೆ, ತಾನೇ ತಪ್ಪು ದಾರಿಯನ್ನಿಡಿಯುತ್ತಾಳೆ. ಇದರಿಂದಾಗಿ ಇವಳ ಸಂಸಾರ ಹಾಗೂ ಗಂಡ – ಹೆಂಡತಿಯ ನಡುವೆ ಇದ್ದಂತಹ ಬಾಂದವ್ಯ ಸರಿಹೋಗುವುದಿಲ್ಲ. ಮಾಸ್ತಿಯವರು ತಮ್ಮ ಸುತ್ತ ಆಗುತ್ತಿದ್ದಂತಹ ತೊಂದರೆಗಳನ್ನೇ ತಮ್ಮ ಕಥೆಯಲ್ಲಿ ಹೇಳರುವುದನ್ನು ಗಮನಿಸಬಹುದು.

ಮಾಸ್ತಿ ಅವರು 'ಮೊಸರಿನ ಮಂಗಮ್ಮ'ನಲ್ಲೂ ನಮ್ಮ ಸಮಾಜ ಜೀವನವನ್ನು ಬಹಳ ಸಹಾನುಭೂತಿಯಿಂದ ಚಿತ್ರಿಸಿದ್ದಾರೆ. ಮಂಗಮ್ಮ ಹಳ್ಳಿಯ ಹಳೆಯ ಕಾಲದ ಹೆಂಗಸು. ಆದರೆ ಬಹಳ ಸುಸಂಸ್ಕೃತಳು. ಇವಳು ತನ್ನ ಗಂಡ ಬಿಟ್ಟು ಹೋದಾಗ ಬೇರೆ ಮದುವೆಯಾಗದೇ ಒಬ್ಬಂಟಿಯಾಗಿಯೇ ಇದ್ದುಕೊಂಡು, ತನ್ನ ಮಗನ ಭವಿಷ್ಯವನ್ನು ರೂಪಿಸಿ ಅವನಿಗೆ ಮದುವೆಯನ್ನು ಮಾಡಿದ್ದಾಳೆ. ಮಂಗಮ್ಮ ಗಂಡನ ಬಗ್ಗೆ ಹೇಳುತ್ತ "ಹಸೇ ಮೇಲೆ ಜೊತೇಗೆ ಕುಂತು ಬಾಸಿಂಗ ಕಟ್ಟಿಕೊಂಡು ಸೇಸೆ ಹಾಕಿಸಿಕೊಂಡು ಕೈ ಹಿಡಿದೆ ಅಂದ ಜೀವ ಎತ್ತಲೋ ಹೋಯಿತವ್ವ. ಒಳ್ಳೆ ಪರಾಯದಾಗೆ ಗಂಡ ಬೇಡ ಅಂದ. ಇನ್ನೊಬ್ಬಳಾಗಿದ್ದರೆ. 'ಮಾಡಿಕೊಂಡ ಗಂಡ ಒಲ್ಲ, ಕೂಡಿಕೋ ಬಾರೋ ನಲ್ಲ' ಅಂತ ಕುಣಿದಿರೋಳು. ಅಂದರೆ ನಾನು ನನ್ನ ಮರಿಯಾದೆ ಬಿಡಲಿಲ್ಲವ್ವ"೮ ಎಂದಳು. ಇಲ್ಲಿ ಮಂಗಮ್ಮ ತಪ್ಪು ದಾರಿಯನ್ನಿಡಿಯದೆ ಅವನ ನೆನಪಿನಲ್ಲಿಯೇ ತನ್ನ ಜೀವನವನ್ನು ಸಾಗಿಸಿದಳು.

'ಆಚಾರ್ಯರ ಪತ್ನಿ'ಯು ಒಂದು ಐತಿಹಾಸಿಕ ಕಥೆಯಾಗಿದೆ. ರಾಮಾನುಜಾಚಾರ್ಯರ ದಾಂಪತ್ಯದಲ್ಲಿ ನಡೆದ ಒಂದು ಸಂಗತಿಯನ್ನು ಆಧರಿಸಿ, ಕಥೆಗಾರರು ಗಂಡ – ಹೆಂಡತಿಯ ಸಂಬಂಧದ ಬಗ್ಗೆ ಹೇಳುತ್ತಾರೆ. ರಾಮಾನುಜಾಚಾರ್ಯರು ಮಾನವಜನಾಂಗಕ್ಕೆ ಹೊಸ ಬೋಧನೆಯನ್ನು ಮಾಡ ಹೊರಟ ಮಹಾನುಭಾವರು. ಆದರೆ ಇವರು ಅತಿ ಚಿಕ್ಕ ವಯಸ್ಸಿನ ಗೆಂಡತಿಯ ಅವಿವೇಕದಿಂದಾಗಿ ಸಂಸಾರವನ್ನು ತ್ಯಜಿಸಿ ಸಂನ್ಯಾಸತ್ವವನ್ನು ತೆಗೆದು ಕೊಂಡರಂತೆ. ಇತ್ತ ಮಡದಿ ಪಶ್ಚತ್ತಾಪದಿಂದ ಶಾಪಗ್ರಸ್ತಳಂತೆ ಅವರನ್ನೇ ಹಿಂಬಾಲಿಸುತ್ತಾಳೆ.

ಆಚಾರ್ಯರ ಪತ್ನಿ ಶ್ಯಾಮಲಾಂಬೆಗೆ ತನ್ನ ಹಿನ್ನೆಲೆಯನ್ನು ಹೇಳಿರುತ್ತಾರೆ. ಅದನ್ನು ಶ್ಯಾಮಲಾಂಬೆ ಗುರುಗಳಿಗೆ ಹೇಳುತ್ತ. "ನಿಮ್ಮ ಪತ್ನಿ ಚಿಕ್ಕಂದು ತಮ್ಮ ಮಹಿಮೆಯನ್ನು ತಿಳಿಯದೆ

ಎಡ್ಡಾ ದಿಡ್ಡಿಯಾಗಿ ನಡೆದುಕೊಂಡರಂತೆ. ತಾನು ಸಣ್ಣ ಹುಡುಗಿ, ಸಂಸಾರದ ವಿಷಯ ಬಲ್ಲವಳಲ್ಲ. ಯಜಮಾನರು ತನಗಿಂತ ವಯಸ್ಸಿನಲ್ಲಿ ಇಪ್ಪತ್ತೈದು ವರ್ಷದಷ್ಟು ಹಿರಿಯರು. ಸಾಲದ್ದಕ್ಕೇ ತಾನು ತುಂಬ ಆಚಾರವಂತರ ಮನೆಯೊಂದರಿಂದ ಬಂದಿದ್ದಳು. ಈ ಎಲ್ಲ ಕಾರಣದಿಂದ ತನ್ನ ವೈಧವ್ಯ ಉಂಟಾಯಿತು. ಹೀಗೆಂದು ಗುರುಪತ್ನಿ ತುಂಬ ಪರಿತಾಪ ಪಟ್ಟರು"೯ ಎಂದಳು.

ಆಚಾರ್ಯರ ಪತ್ನಿ ಗಂಡನ ಜೊತೆ ಹಠಮಾರಿತನದಿಂದ ವರ್ತಿಸಿದರು. ಇದರಿಂದಾಗಿ ಅವರು ತಮ್ಮ ಸಂಸಾರವನ್ನು ಆಳುಮಾಡಿಕೊಂಡರು. ನಂತರ ಇವರಿಗೆ ಬುದ್ಧಿ ಬಂದು ತಾನು ಮಾಡಿದ್ದು ತಪ್ಪು ಅಂತ ಅರಿವಾಗಿ, ಕೊನೆಗೆ ಗಂಡನನ್ನು ಸಾವಿನಿಂದ ಪಾರುಮಾಡಿ ಆ ಸಾವನ್ನು ತಾನೇ ತಂದು ಕೊಳ್ಳುವುದರ ಮೂಲಕ ತನ್ನ ತಪ್ಪಿಗೆ ಪ್ರಾಯಶ್ಚಿತವನ್ನು ಮಾಡಿಕೊಂಡಳು.

'ವೆಂಕಟಿಗನ ಹೆಂಡತಿ' ಕಥೆಯು ಸಾಮಾಜಿಕ ವ್ಯವಸ್ಥೆಯನ್ನು ಒಳಗೊಂಡಿದೆ. "ವೆಂಕಟಿಗ ತನ್ನ ಹಳ್ಳಿಯ ಕೂಲಿಕಾರರ ಒಬ್ಬ ತರುಣ, ಅವನ ನೆಂಟರಿಷ್ಟರು ಊರಿನ ತುಂಬ ಉಂಟು. ಅತ್ತೆಯ ಮಗಳು ರಂಗಿ ಚಿಕ್ಕವಯಸ್ಸಿನಿಂದ ಇವನ ಜೊತೆಯಲ್ಲೇ ಬೆಳೆದವಳು. ಚಿಕ್ಕಂದೇ ಇವರು ಗಂಡ ಹೆಂಡಿರಾಗತಕ್ಕವರೆಂದು ಹಿರಿಯರು ಗೊತ್ತು ಮಾಡಿದರು. ರಂಗಿ ಒಳ್ಳೆ ಚೆಲುವೆ. ಅವರ ಜನರಲ್ಲಿ ಆ ಬಣ್ಣ ಆ ಕಣ್ಣು ಅಪೂರ್ವ, ತಾನು ಎತ್ತರದ ಹುಡುಗ ಆದರೂ ಅವಳು ಎಂದೂ ತನ್ನ ಭುಜದ ಮಟ್ಟಕ್ಕೆ ಕಡಿಮೆ ಇದ್ದದ್ದಿಲ್ಲ. ಅವಳು ನಡೆಯುತ್ತಿದ್ದರೆ ಗುಡಿಯಲ್ಲಿ ನಿಲ್ಲಿಸಿದ್ದ ಕಲ್ಲಿನ ಮೂರ್ತಿ ಹೊರಗೇನೂ ನಡೆದುಬಂದಿತೊ ಎಂಬಂತೆ ಕಾಣುವುದು. ಹುಡುಗ ಹುಡುಗಿ ಎಷ್ಟೋಕಾಲ ಬೆಟ್ಟಕ್ಕೆ ಸಾಮಾನು ಹೊತ್ತು ಕೂಲಿಗಳಸಿದರು', ಸುಖವಾಗಿ ಜೊತೆಯಲ್ಲಿ ಬೆಳೆಯುತ್ತಿದ್ದರು."೧೦ ಆದರೆ ಮದುವೆಯಾದ ಮೇಲೆ ವೆಂಕಟಿಗ ಹೆಂಡತಿಯನ್ನು ಎಷ್ಟೇ ಪ್ರೀತಿಯಿಂದ ನೋಡಿಕೊಂಡರೂ ಕೂಡ, ಅವಳು ಅವನನ್ನು ತಿರಸ್ಕರಿಸಿ ಬೇರೆಯ ವ್ಯಕ್ತಿಯ ಜೊತೆ ಸಂಪರ್ಕವನ್ನು ಇಟ್ಟುಕೊಂಡಳು.

ವೆಂಕಟಿಗ ಮತ್ತು ರಂಗಿಯ ಬಾಂದವ್ಯ ಮದುವೆಗಿಂತ ಮುಂಚೆ ಚೆನ್ನಾಗಿತ್ತು. ಆದರೇ ಮದುವೆಯಾದ ಮೇಲೆ ಆ ಬಾಂಧವ್ಯವನ್ನು ರಂಗಿ ಉಳಿಸಿಕೊಳ್ಳದೇ ಪರಮರುಷನನ್ನು ಬಯಸುತ್ತಾಳೆ. ಪ್ರಾಚೀನ ಕಾಲದಲ್ಲಿ ಸ್ತ್ರೀಯರಿಗೆ ಯಾವುದೇ ಸ್ವತಂತ್ರವಿರಲಿಲ್ಲ, ಅದಕ್ಕೇ ಅವರು ಗಂಡ ಹೇಳಿದ ಮಾತನ್ನು ಕೇಳಿಕೊಂಡು ತನ್ನ ಮನೆಯನ್ನು, ಗಂಡ, ಮಕ್ಕಳನ್ನು ತುಂಬ ಚೆನ್ನಾಗಿ ನೋಡಿಕೊಳ್ಳುತ್ತ ಇದ್ದರು. ಆದರೆ ಇಂದು ಈ ಸ್ಥಿತಿ ಸ್ವಲ್ಪ ಮಟ್ಟಿಗೆ ಬದಲಾಗಿದೆ. ಏಕೆಂದರೇ ಇಂದು ಸ್ತ್ರೀಯರಿಗೆ ಸ್ವಲ್ಪ ಮಟ್ಟಿನ ಸ್ವತಂತ್ರ ಸಿಕ್ಕಿದೆ. ಇದನ್ನು ಇವರು ಒಳ್ಳೆಯ ಕೆಲಸಗಳಿಗೆ ಬಳಸಿಕೊಳ್ಳದೇ

ತಮ್ಮ ಸಂಸಾರಗಳನ್ನು ಆಳುಮಾಡಿ ಕೊಳ್ಳುವಲ್ಲ ಈ ಸ್ವತಂತ್ರವನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಮನೆಯ ಗೃಹಿಣಿಯಾದವಳು ಗಂಡ ತಪ್ಪು ದಾರಿ ಹಿಡಿದರೆ ಅವನನ್ನು ಸರಿದಾರಿಗೆ ತರುವ ಪ್ರಯತ್ನವನ್ನು ಮಾಡುತ್ತಿದ್ದಳು. ಆದರೆ ಇಂದು ಆಕೆಯೇ ತಪ್ಪುದಾರಿಯನ್ನು ಹಿಡಿಯುತ್ತಿದ್ದಾಳೆ.

'ನಳಿನಿಯ ತಂದೆ' ಎಂಬ ಕಥೆಯು ಒಂದು ಸಾಮಾಜಿಕ ಕಥೆಯಾಗಿದೆ. ರಾಮನಾಥ ಅಯ್ಯರ್‌ರವರು ತಮ್ಮ ಒಬ್ಬಳೇ ಮಗಳು ಲಕ್ಷ್ಮಿಯನ್ನು ವಿಶ್ವನಾಥನಿಗೆ ಕೊಟ್ಟು ಮದುವೆ ಮಾಡಿದರು. "ಲಕ್ಷ್ಮಿ ಮದುವೆಯಾದ ದಿನದಿಂದ ಸರಳ ಸ್ವಭಾವದ ಹುಡುಗಿ ಆಗಿದ್ದಳು. ಇವನಿಗೆ ಅವಳ ಒಳ್ಳೆತನವನ್ನು ಬಳಸುವುದು, ಅನುಭವಿಸಿ ಸುಖಿಸುವುದು ಅಸಾಧ್ಯವಾಗಿದ್ದಿತು. ಇನ್ನು ಅವಳ ಮನಸ್ಸು ನಿರಾಶೆಯ ಮಟ್ಟಕ್ಕೆ ಬಂದು ಇವನ ವಿಷಯದಲ್ಲಿ ತಣ್ಣನೆ ಕಲ್ಲಾಗಿ ಇರುವಾಗ, ಇವರ ಸಂಬಂಧದಲ್ಲಿ ಯಾವ ಸುಖ ಮೂಡಬಹುದು? ಅವನು ಅತಿ ವಿದಗ; ಇವಳು ಆಲಕಲ್ಲು ತಂದೆ ತಾಯಿ ಮಾಡಿದ ಏರ್ಪಾಡಿಗೆ ಲಕ್ಷ್ಮಿ ತಲೆ ಬಾಗಿದಳು; ಗಂಡನಿಗೆ ತಕ್ಕಂತೆ ನಡೆದು ಕೊಂಡಳು. ಮಾರನೆಯ ವರ್ಷ ಗರ್ಭಿಣಿಯಾಗಿ ಒಂದು ಹೆಣ್ಣು ಮಗುವನ್ನು ಹೆತ್ತಳು. ಆ ಮಗುವೇ ನಳಿನಿ."೧೧

ವಿಶ್ವನಾಥ ಮಾವನ ಆಸ್ತಿಯನ್ನು ಸಿಕ್ಕಿದಂತೆ ಪೋಲು ಮಾಡಿದನು. ಲಕ್ಷ್ಮಿ ಸಂಸಾರದಲ್ಲಿ ಯಾವ ಸುಖವನ್ನಾಗಲಿ ನಿರೀಕ್ಷಿಸುವುದನ್ನು ಬಿಟ್ಟುಬಿಟ್ಟಿದ್ದಳು. ತನ್ನ ಗಂಡನ ಎಲ್ಲ ಅನ್ಯಾಯವನ್ನು ಸಹಿಸಿಕೊಂಡಳು. ಮಗುವಿಗೆ ಸ್ವಲ್ಪ ಆಸ್ತಿ ಉಳಿದರೆ ಸಾಕು ಎಂದು ಯೋಚಿಸಿ ಗಂಡನನ್ನು ತೊರೆಯಲು ನಿಶ್ಚಯಿಸಿಕೊಂಡಳು. ಒಂಟಿಯಾಗಿ ಇದ್ದುಕೊಂಡೆ ತನ್ನ ಮಗಳನ್ನು ಸಾಕಿ ಬೆಳೆಸಿದಳು. ಇಲ್ಲಿ ಲಕ್ಷ್ಮಿ ಎಷ್ಟೆ ಒಳ್ಳೆಯವಳಾದರೂ ಕೂಡ ಗಂಡನ ಅನ್ಯಾಯವನ್ನು ಸಹಿಸಿಕೊಳ್ಳಲಾಗದೇ, ತನ್ನ ಮಗಳ ಭವಿಷ್ಯವನ್ನು ಉತ್ತಮವಾಗಿ ರೂಪಿಸುವ ಸಲುವಾಗಿ ಅವನನ್ನು ತಿರಸ್ಕರಿಸಿ, ಸಮಾಜದಲ್ಲಿ ಒಳ್ಳೆಯ ಸ್ತ್ರೀಯಾಗಿ ಬದುಕಿದಳು.

ಈ ಕಥೆಯಲ್ಲಿ ಗಂಡನನ್ನು ಬಿಟ್ಟು ಬದುಕುತ್ತೇನೆ ಎನ್ನುವ ಸ್ವತಂತ್ರ ಆಶಯವನ್ನು ಹೆಣ್ಣು ವ್ಯಕ್ತ ಪಡಿಸುತ್ತಾಳೆ. ಇದು ಭಾರತೀಯ ಪರಂಪರಾಗತ ಸಂವೇದನೆಗೆ ವಿರೋಧವಾಗಿದೆ. ಮಾಸ್ತಿಯವರು ಬದುಕು ಸುಂದರವಾಗಿರಲಿ ಎಂದು ಭಾರತೀಯ ಸನಾತನ ಸಂದರ್ಭವನ್ನು ಗೌರವಿಸುತ್ತಾರೆ ಆದರೆ ಅದು ಸಾಧ್ಯವಾಗದಿದ್ದಾಗ ಅದರಿಂದ ಹೊರಗೆ ಬಂದು ಬದುಕಲಿ ಎಂದು ಹೇಳಿದ್ದಾರೆ.

'ರಂಗಸಾಮಿಯ ಅವಿವೇಕ' ಎಂಬ ಕಥೆಯಲ್ಲಿ ಬರುವ "ರಂಗ ಸ್ವಾಮಿ ಸ್ಫುರ ದ್ರೂಪಿ ಪುಣ್ಯವಂತರ ಮಗ. ದೇವರು ಅವನನ್ನು ಎಲ್ಲಾ ವಿಷಯದಲ್ಲೂ ಸರಿಯಾಗಿಟ್ಟಿದ್ದ. ಅವನ ರೂಪಿಗೆ ತಕ್ಕಂತೆ ಚೆಲುವೆಯಾದ ಹುಡುಗಿಯನ್ನು ಮದುವೆಯಾಗಿದ್ದನು."[೧೨] ಸೀತೆಯು ಗಂಡನನ್ನು ತುಂಬ ಪ್ರೀತಿಯಿಂದ ನೋಡಿಕೊಂಡರೂ ಸಹ, ಅವನು ಅವಳಲ್ಲಿ ಕೆಲವೊಂದು ದೋಷಗಳನ್ನು ಗುರುತಿಸಿ, ಸೀತೆಯ ಸ್ನೇಹಿತೆಯಾದ ಇಂದಿರ ದೇವಿಯನ್ನು ಪ್ರೀತಿಸುತ್ತಿರುತ್ತಾನೆ. ಈ ವಿಚಾರ ತಿಳಿದಾಗ ಇಂದಿರ ದೇವಿ ರಂಗಸ್ವಾಮಿಯನ್ನು ತಿರಸ್ಕರಿಸುತ್ತಾಳೆ. ಆಗ ರಂಗಸ್ವಾಮಿಗೆ, ತನ್ನ ತಪ್ಪಿನ ಅರಿವಾಗಿ ತನ್ನ ತಪ್ಪು ಹೆಂಡತಿಗೆ ಗೊತ್ತಾಗದಂತೆ ನೋಡಿಕೊಂಡು ಅವಳ ಜೊತೆ ಸಂತೋಷದಿಂದ ಸಂಸಾರವನ್ನು ಮಾಡುತ್ತಾನೆ.

'ಗೌತಮಿ ಹೇಳಿದ ಕತೆ' ಇದೊಂದು ಪೌರಾಣಿಕ ಕಥೆಯಾಗಿದೆ. ಕಾಳಿದಾಸನ ನಾಟಕದ ಆಧಾರದ ಮೇಲೆ ಈ ಕಥೆಯನ್ನು ತುಂಬ ಸುಂದರವೂ, ಔಚಿತ್ಯ ಪೂರ್ಣವೂ ಆಗಿ ರಚಿಸಿದ್ದಾರೆ. ಈ ಕಥೆಯು ಗಂಡು ಹೆಣ್ಣಿನ ಶಾರೀರಿಕ ಬಯಕೆಯ ನಿಯಂತ್ರಣವನ್ನು ಕೇಂದ್ರ ವಸ್ತುವನ್ನಾಗಿ ಹೊಂದಿದೆ. ಮಾಸ್ತಿಯವರು ಕಾಳಿದಾಸನ ಶಕುಂತಲದಲ್ಲಿ ಕಣ್ವ ಮತ್ತು ಗೌತಮಿಯರ ಬದುಕಿನ ಬಗೆಗಿರುವ ಸೂಚನೆಗಳನ್ನು ಗ್ರಹಿಸಿ, ಅದನ್ನು ತನ್ನದೇ ಆದ ಒಳನೋಟದಿಂದ ನೋಡಿ, ಅವರ ಬದುಕನ್ನು ವಿವರಗಳಿಂದ ತುಂಬಿ ಅನನ್ಯ ದರ್ಶನವನ್ನೇ ಹೊರಡಿಸುತ್ತಾರೆ.

ಗೌತಮಿಯು ಈ ಕಥೆಯ ನಾಯಕಿ ಇವಳು ತನ್ನ ಕಥೆಯನ್ನು ಮಾಲಿನಿ ದತ್ತಕಾಶ್ಯಪರ ಕತೆಯಾಗಿ ಶಕುಂತಲೆ ಮತ್ತು ಗೆಳತಿಯರಿಗೆ ಹೇಳುತ್ತಿದ್ದಾಳೆ. ಮಾಲಿನಿ ಭರದ್ವಾಜನನ್ನು ಒಲಿದಿದ್ದವಳು; ಇದ್ದಕ್ಕಿದ್ದಂತೆ ಭರದ್ವಾಜ ಪ್ರವಾಹಕ್ಕೆ ಸಿಕ್ಕಿ ಸತ್ತು ಹೋಗುತ್ತಾನೆ. ಇತ್ತ ಮಾಲನೀ ತುಂಬ ಬಯಕೆಯಿಂದ ತನ್ನನ್ನು ಸಂಯಮಿಸಿ ಕೊಳ್ಳಲಾರದಾದಳು. ದತ್ತಕಾಶ್ಯಪನಿಗೆ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಳ್ಳುವ ಹಂಬಲ ಹುಚ್ಚೆದ್ದು ಕುಣಿಯಿತು. ಆಗ ಕಾಶ್ಯಪ ನೀವು ನನಗೆ ಅತ್ತಿಗೆ ಸಮಾನ, ನಾನು ಧರ್ಮವನ್ನು ಮೀರಿ ನಡೆದುಕೊಳ್ಳುವುದಿಲ್ಲ ಎಂದನು. "ಮಾಲಿನಿಯ ಬಯಕೆಯ ಪ್ರವಾಹವನ್ನೂ ಗೆಲ್ಲುತ್ತಾನೆ. ಗೆದ್ದು ಮಹರ್ಷಿ ಕಣ್ವನಾಗಿದ್ದಾನೆ. ಮಾಲಿನಿಯ ಒಳ ಶಕ್ತಿಯನ್ನು ಎಚ್ಚರಿಸಿ ಅವಳನ್ನು ಗೌತಮಿಯನ್ನಾಗಿ, ಶಕುಂತಲೆಯನ್ನು ನೋಡಿಕೊಳ್ಳುವ ತಾಯಿಯಾಗಿ ಬೆಳೆಸಿದ್ದಾನೆ."[೧೩]

ಮಾಸ್ತಿ ಅವರು ಅದಮ್ಯವಾದ ಮನುಷ್ಯಪ್ರವೃತ್ತಿ ಮತ್ತು ನಿಗ್ರಹದ ಈ ಸಂಘರ್ಷದಲ್ಲಿ ಕೊನೆಗೂ ಮನುಷ್ಯ ವಿಜಯಿಯಾಗಿ ತನ್ನ ಘನತೆಯನ್ನೇ ಮೆರೆಯುವುದನ್ನು ಅತ್ಯಂತ ಅನನ್ಯವಾಗಿ ಚಿತ್ರಿಸಿದ್ದಾರೆ. ಮಾಸ್ತಿಯವರ ಸಾಮಾಜಿಕ ಮತ್ತು ಐತಿಹಾಸಿಕ ಕಥೆಗಳಲ್ಲಿ ವ್ಯಕ್ತಿಗಳ ಜೀವನ ಸಂದರ್ಭಗಳಲ್ಲಿ ಮೂಡಿಬರುವ ದರ್ಶನ ಅವರ ಪೌರಾಣಿಕ ಕಥೆಗಳಲ್ಲಿ ನೇರವಾಗಿ ವಾಚ್ಯವಾಗಿಯೇ ಮೂಡಿ ಬಂದಿದೆ.

'ಬಿಳಿಗಿರಿ ರಂಗ' ಎಂಬ ಕಥೆಯಲ್ಲಿ ರಂಗನ ತಾಯಿಗೆ ರಂಗನಾಥ ಸ್ವಾಮಿಯ ಉತ್ಸವಕ್ಕೆ ಹೋಗಲು ಆಗಲಿಲ್ಲ ಆಗ ಅವಳು ತನ್ನ ಮಗನನ್ನು ಕುರಿತು "ಅಪ್ಪ ನಿಮ್ಮ ತಂದೆ ಈ ಉತ್ಸವವನ್ನುನೋಡಿ ಸಂತೋಷ ಪಡುವ ಪುಣ್ಯ ಕೇಳ ಬರಲಿಲ್ಲ. ಅವನಿಗಿಲ್ಲದ ಪುಣ್ಯ ನಿನಗೇಕೆ ಎಂದು ದೇವರು ನನಗೂ ಅದನ್ನು ತಪ್ಪಿಸುತ್ತಿದ್ದಾನೆ. ಅವನಿಚ್ಛೆ ಮೀರಿ ಒಂದು ತೃಣ ನಡೆಯುವುದಿಲ್ಲ. ನಾನು ಬೆಟ್ಟದ ಮೇಲಕ್ಕೆ ಬರುವುದಿಲ್ಲ. ಇಲ್ಲಿಯೇ ಇರುತ್ತೇನೆ."ಗಳ ನೀನು ಹೋಗಿ ಉತ್ಸವವನ್ನು ಭಕ್ತಿಯಿಂದ ನಡಸು ಎಂದು ಹೇಳುತ್ತಾಳೆ.

ಮಾಸ್ತಿ ಅವರು ತಮ್ಮ ಕತೆಯ ಮೂಲಕ ಗಂಡ – ಹೆಂಡತಿಯಾದವರು ಯಾವುದೇ ಒಳ್ಳೆಯ ಕಾರ್ಯವನ್ನು ಮಾಡಿದರೂ, ಇಬ್ಬರು ಜೊತೆಯಾಗಿಯೇ ಮಾಡಬೇಕು. ಆಗ ಮಾತ್ರ ಉತ್ತಮ ಫಲಸಿಕ್ಕಲು ಸಾಧ್ಯವೆಂದು ಹೇಳುತ್ತಾರೆ.

ಮಾಸ್ತಿಯವರು ಸಮಾಜದಲ್ಲಿ ನಡೆಯುವ ಸತ್ಯ ಘಟನೆಗಳನ್ನು ಹೇಳುತ್ತ, ಅವರು ಗಂಡ – ಹೆಂಡತಿ ಇಬ್ಬರೂ ತುಂಬ ಅನ್ಯೂನ್ಯವಾಗಿ ಬದುಕುವುದು ಅಪರೂಪ. ಗಂಡ ಸರಿಯಿದ್ದರೆ ಹೆಂಡತಿ ಸರಿ ಇರುವುದಿಲ್ಲ. ಅದೇ ರೀತಿ ಹೆಂಡತಿ ಸರಿಯಿದ್ದರೆ ಗಂಡ ಸರಿ ಇರುವುದಿಲ್ಲ. ಹೆಂಡತಿಯಾದವಳು ತನ್ನ ಗಂಡ ತಪ್ಪುದಾರಿ ಹಿಡಿದರೆ ಅವನನ್ನು ತೊರೆದು ಬೇರೆಯವರನ್ನು ಮದುವೆಯಾಗುತ್ತಾಳೆ. ಇಲ್ಲವೆ ಸ್ವತಂತ್ರ ಬದುಕನ್ನು ನಡೆಸುತ್ತಿರುವುದನ್ನು ನಾವು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಕಾಣಬಹುದು.

ಗಂಡ – ಹೆಂಡತಿ ಇಬ್ಬರು ಸಂಸಾರವೆಂಬ ರಥದ ಎರಡು ಚಕ್ರಗಳು ಎಂದೇ ಹೇಳುತ್ತಾರೆ. ಹಿಂದೆ ನಮ್ಮ ಸಮಾಜದಲ್ಲಿ ಗಂಡು ಹೆಣ್ಣಿನ ನಡುವೆ ಯಾವುದೇ ಸಮಾನತೆ ಇರಲಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಈ ಸಮಾನತೆಯನ್ನು ಕಾಣಬಹುದು. ಗಂಡು ಹೆಣ್ಣನ್ನು ಶೋಷಣೆ

ಮಾಡುತ್ತಿದ್ದ. ಆದರೆ ಇಂದು ಅದು ಸ್ವಲ್ಪ ಮಟ್ಟಿಗೆ ಬದಲಾಗಿದೆ. ಹೆಣ್ಣು ಕೂಡ ಗಂಡಿನಷ್ಟೆ ಸರಿಸಮಾನವಾಗಿ ಎಲ್ಲ ಕ್ಷೇತ್ರಗಳಲ್ಲೂ ಕಾರ್ಯಗಳನ್ನು ಮಾಡಬಲ್ಲಳು ಎಂದು ತೋರಿಸುವುದರ ಜೊತೆಗೆ ತನ್ನ ನಡತೆಯನ್ನು ಕೂಡ ಸ್ತ್ರೀ ಬದಲಾಯಿಸಿ ಕೊಂಡಿರುವುದನ್ನು ಗಮನಿಸಬಹುದು.

೪. ಆಚರಣೆಗಳು

ಯಾವೊಂದು ಆಚರಣೆಗಳೂ ಕೂಡ ಒಂದು ನಿರ್ದಿಷ್ಟ ಪ್ರದೇಶಕ್ಕೆ ಮಾತ್ರ ಸೀಮಿತವಾಗಿರುತ್ತವೆ. ಈ ಆಚರಣೆಗಳು ಹಬ್ಬಗಳ ರೀತಿ ಎಲ್ಲ ಊರುಗಳಲ್ಲೂ, ದೇಶಗಳಲ್ಲೂ ನಡೆಯುವುದಿಲ್ಲ. ಒಂದು ಪ್ರದೇಶದಲ್ಲಿ ಯಾವುದೋ ಹಿನ್ನೆಲೆಯನ್ನು ಒಳಗೊಂಡಂತೆ ಆ ಸ್ಥಳದಲ್ಲಿ ಮಾತ್ರ ಅಲ್ಲಿನ ಆಚರಣೆಗಳು ಕಂಡು ಬರುತ್ತವೆ. ಈ ಆಚರಣೆಗಳು ತುಂಬ ಭಯಾನಕವಾಗಿರುತ್ತವೆ. ಮಾಸ್ತಿಯವರು ತಮ್ಮ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಆಗುತ್ತ ಇರುವಂತಹ ಘೋರ ಆಚರಣೆಗಳನ್ನು ತಮ್ಮ ಕಥೆಗಳ ಮೂಲಕ ಓದುಗರಿಗೆ ತಿಳಿಸುವ ಪ್ರಯತ್ನವನ್ನು ಮಾಡಿದ್ದಾರೆ.

'ಕಾಮನ ಹಬ್ಬದ ಒಂದು ಕತೆ' ಇದು ಒಂದು ಆಚರಣೆಗೆ ಸಂಬಂಧಿಸಿದ ಕಥೆಯಾಗಿದೆ. ಸಾವಿತ್ರಮ್ಮ ಚಿಕ್ಕ ವಯಸ್ಸಿನಲ್ಲಿಯೇ ಗಂಡನನ್ನು ಕಳೆದುಕೊಂಡು ವಿಧವೆಯಾಗಿದ್ದಳು. ಇವಳು ಇರುವ ಊರಿನಲ್ಲಿ ಕಾಮನ ಹಬ್ಬದ ದಿನ ಹುಡುಗರು ಮನೆಮನೆಗೆ ಹೋಗಿ ಮನೆ ಮುಂದೆ ಬಾಯಿ ಬಡಿದುಕೊಂಡು ಸೌದೆಯ ಭಿಕ್ಷೆ ಕೇಳುವುದು ವಾಡಿಕೆ. ಈ ಹಬ್ಬದ ದಿನ ಮನೆಯ ಮುಂದೆ ಬಾಯಿ ಬಡಿದುಕೊಂಡರೆ ವರ್ಷ ಪೂರ್ತಿ ನಗುತ್ತ ಇರಬಹುದು ಎಂಬುವುದು ಅಲ್ಲಿನ ಜನರ ನಂಬಿಕೆ. ಹುಡುಗರು ತಾವು ತಂದ ಸೌದೆಯನ್ನು ಬಯಲಿನಲ್ಲಿ ಹಾಕಿ ಆ ರಾಶಿಗೆ ಬೆಂಕಿಯನ್ನು ಹಚ್ಚುತ್ತಿದ್ದರು. ಮಾರನೆಯ ದಿನ "ಬೂದಿಯನ್ನು ಕಲೆಸುವಾಗ ವಿಧವೆಯರು ಯಾರಾದರೂ ಬಂದು ಮೇಲೆ ಬೂದಿ ಸುರಿಸಿಕೊಂಡು ಹುಡುಗರು ತನ್ನ ಸುತ್ತ ಬಾಯಿ ಬಡಿದುಕೊಳ್ಳುವುದಕ್ಕೆ ಸಮ್ಮತಿಸಿದರೆ ಅಂಥಾ ಆಕೆಗೆ ಮುಂದಿನ ಜನ್ಮದಲ್ಲಿ ಹೋದ ಗಂಡನೊಂದಿಗೆ ಸಂಸಾರ ಸುಖ ಲಭಿಸುವುದಂತೆ ಆ ಜನ್ಮದಲ್ಲಿ ಸುಮಂಗಲಿಯ ಸಾವಂತೆ."[೧೫] ಜನರಿಗೆ ಈ ನಂಬಿಕೆ ಇರುವುದಾದರೂ ಯಾವ ವಿಧವೆಯು ಹೀಗೆ ಮಾಡಿಸಿಕೊಳ್ಳಲು ಮುಂದಾಗಲಿಲ್ಲ. ಆದರೆ ಸಾವಿತ್ರಮ್ಮನವರು ತಮ್ಮ ಮೇಲೆ ಬೂದಿ ಹಾಕಿಸಿ ಕೊಳ್ಳಲು ಒಪ್ಪಿದರು. ಇವರ ಮೇಲೆ ಬೂದಿಯನ್ನು ಹಾಕಿ ಬಾಯಿ ಬಡಿದು ಕೊಳ್ಳುತ್ತಿದ್ದರು. ಸಾವಿತ್ರಮ್ಮನವರಿಗೆ ಈ ರೀತಿ ಮಾಡಿಸಿಕೊಳ್ಳುವುದರಿಂದ ಮುಂದಿನ ಜನ್ಮದಲ್ಲಾದರೂ ಸುಮಂಗಲಿಯಾಗಿ ಇರಬಹುದು ಎಂಬ ನಂಬಿಕೆ. ಮಾಸ್ತಿಯವರು ಈ ಕಥೆಯಲ್ಲಿ ಸ್ತ್ರೀಯ ಅಮಾಯಕತೆಯನ್ನು, ತ್ಯಾಗ ಪರವಾದ ನಿಷ್ಠೆಯನ್ನು ಚಿತ್ರಿಸುತ್ತಾರೆ. ಈ ಕಥೆಯಲ್ಲಿ ಸ್ತ್ರೀ ನೋವಿನ ಸಂಕೇತವಾಗಿ, ತ್ಯಾಗದ ಸಂಕೇತವಾಗಿ ಕಂಡು ಬರುತ್ತಾಳೆ.

'ಕಲ್ಮಾಡಿಯ ಕೋಣ' ಕತೆಯಲ್ಲಿ ಕಲ್ಮಾಡಿ ಎಂದರೆ ಕಲ್ಲು ಮಾರಿ ಎನ್ನುವುದು ಕಲ್ಲುಮಾಡಿ, ಕಲ್ಮಾಡಿ ಆಯಿತು. ಈ ಊರಿನ ವಿಶೇಷವಿಂದರೆ ಮಾರಿಕಾದೇವತೆ. ಆದ ಕಾರಣ ಆ ಊರಿನ ಜನರು ಯಾವುದೇ ಒಳ್ಳೆಯ ಕೆಲಸವಾದರೂ ಅದನ್ನು ಮಾರಿಯ ಮಹಿಮೆಯಿಂದ ಆದದ್ದು ಎಂದು ಹೇಳುತ್ತಾರೆ. ಅಲ್ಲಿ ಮಾರಿಯ ಹಬ್ಬಕ್ಕೆ ಬೇರೆ ಊರುಗಳಗಿಂತ ವಿಜೃಂಭಣೆ ಹೆಚ್ಚು. "ನಮ್ಮ ಊರುಗಳಲ್ಲಿ ಗ್ರಾಮದೇವತೆ ಒಂದು ಕೋಳಿಯಿಂದಲೋ, ಒಂದು ಕುರಿಯಿಂದಲೋ, ಒಂದು ಆಡಿನಿಂದಲೋ ತೃಪ್ತಳಾಗುತ್ತಾಳೆ. ಆದರೆ ಕಲ್ಮಾಡಿಯಲ್ಲಿ ಜನರಿಗೆ ಜ್ಞಾಪಕವಿರುವ ಕಾಲದಿಂದಲೂ ಮಾರಿಗೆ ವರ್ಷಕ್ಕೆ ಒಂದು ಬಲಿತ ಕೋಣ ಹೊರತಾಗಿ ಇನ್ನು ಯಾವುದು ಸಾಕಾಗುವುದಿಲ್ಲ. ಬಲಿಯಾಗುವ ಜೀವ ಊರ ಪಾಪದ ಮೊತ್ತ. ಅದರ ಜನದ ಪ್ರತಿನಿಧಿ. ದೊಡ್ಡ ಊರಿನಲ್ಲಿ ದೊಡ್ಡ ಜೀವ ಬಲಿ. ಊರು ದೊಡ್ಡದಾಗಿರುವುದರಿಂದ ಗ್ರಾಮಸ್ಥರು ಒಂದು ಕೋಣವನ್ನು ಕೊಡುವಷ್ಟರ ಶಕ್ತಿಯನ್ನು ಪಡೆದಿದ್ದಾರೆಂದೂ ಇದರ ಕಾರಣವನ್ನು ಊಹಿಸಬಹುದು. ಆದರೆ ಇದರ ಜೊತೆಗೆ ಉಳಿದ ಊರುಗಳ ಮಾರಿಗಿಂತ ಕಲ್ಮಾಡಿಯ ಮಾರಿ ಹೆಚ್ಚು ಪ್ರತ್ಯಕ್ಷ."[೧೬]

ಕಲ್ಮಾಡಿಯ ಕೋಣನಿಗೆ ಮಾಡುವ ಅಲಂಕಾರದಲ್ಲೂ ಸ್ವಲ್ಪ ಮಟ್ಟಿಗೆ ವಿಶೇಷತೆ ಇದೆ. ಈ ಅಲಂಕಾರದಲ್ಲಿ ಬಹುಭಾಗ ಹೂವಿನದು; ಅದೂ ತೀರ ಎರಡೇ ತರದ ಹೂವಿನದು; ಚೆಂಡು ಮಲ್ಲಿಗೆ ಮತ್ತು ಸೇವಂತಿಗೆ. ಸುಮಂಗಲಿಯರು ಬಂದು ಸೇಸೆಹಾಕಿ ದೃಷ್ಟಿ ತೆಗೆದು, ಆರತಿ ಎತ್ತಿ ಸೋಬಾನೆ ಹಾಡಿದ ಮೇಲೆ ತೋಟಿ ಬಂದು ಆ ಕೋಣವನ್ನು ಕಡಿಯುತ್ತಿದ್ದನು.

ಕಥೆಗಾರರು ಮನುಷ್ಯ ತನ್ನ ಉಳಿವಿಗಾಗಿ ಬೇರೊಂದರ ಜೀವವನ್ನು ಬಲಿಕೊಡಬೇಕೆಂಬ ಆಶಯವು ಪ್ರಧಾನವಾಗಿ ವೈದಿಕ ಪರಂಪರೆಯವರ ಕೊಡುಗೆಯಾಗಿದ್ದರೂ ಕೂಡ ಅದನ್ನು ವಿರೋಧಿಸುತ್ತಾರೆ. ಜನ ಸಾಮಾನ್ಯರಿಗೆ ತಮ್ಮ ನೆಮ್ಮದಿ ಸುಖ ಹೇಗೆ ಪ್ರಧಾನವಾಗುತ್ತದೆಯೋ ಅದೇ ರೀತಿ ಬಲಿಯಾಗ ಬೇಕಾಗಿರುವ ಕೋಣ ತನ್ನ ಆವರಣದಿಂದ ತಪ್ಪಿಸಿಕೊಂಡು ಜೀವವನ್ನು ಉಳಿಸಿಕೊಳ್ಳಲು ಪ್ರಯತ್ನಿಸಿ ಕೊನೆಗೆ ಸಾವನ್ನಪ್ಪಿದ ಹಿನ್ನೆಲೆಯಲ್ಲಿ ಪೂಜನೀಯಗೊಳ್ಳುವ ದುರಂತಕ್ಕೇ ಒಳಗಾಗುತ್ತದೆ.

ಮಾಸ್ತಿ ಅವರು ಜೀವವೇ ಪ್ರಧಾನವಾಗಿರುವ ಸಂಧರ್ಭದಲ್ಲಿ ಮಾನವೇತರ ವರ್ಗದಲ್ಲೂ ಕೂಡ ತಮ್ಮ ಆಶಯವನ್ನು ವ್ಯಕ್ತಪಡಿಸುತ್ತಾರೆ.

ಒಟ್ಟಿನಲ್ಲಿ ಮಾಸ್ತಿಯವರು ಅನಕ್ಷರಸ್ಥ ಪರಂಪರೆಯ ಸಮೂಹವು ಬದುಕಿನ ಅನನ್ಯತೆಯನ್ನು ಗುರುತಿಸಿಕೊಳ್ಳಲು ಹಿಡಿದಿರುವ ಮಾರ್ಗವನ್ನು ವಿರೋಧಿಸುತ್ತಾರೆ. ವೈದಿಕ ಸಂಪದಾಯದವರಾಗಿರುವ ಮಾಸ್ತಿಯವರು ತಮ್ಮ ಕಥೆಯಲ್ಲಿ ಬರುವ ಈ ಆಚರಣೆಗಳೂ ಎಲ್ಲ ವೈದಿಕ ಪರಂಪರೆಯ ಪ್ರಭಾವದಿಂದ ಆಗುತ್ತಿರುವುದು ಎಂದು ಗೊತ್ತಿದ್ದರೂ ಕೂಡ ಈ ಎಲ್ಲ ಆಚರಣೆಗಳನ್ನು ಬೆಂಬಲಿಸದೇ ವಿರೋಧಿಸುತ್ತಾರೆ.

೫. ನ್ಯಾಯ ತೀರ್ಮಾನ

ಒಂದು ಊರು ಅಂದ ಮೇಲೆ ಎಲ್ಲ ತರಹದ ವ್ಯಕ್ತಿಗಳು ಇರುತ್ತಾರೆ. ಅಂದರೆ ಒಳ್ಳೆಯವರು ಕೆಟ್ಟವರು. ಪುರಾಣಗಳಲ್ಲಿ ಜನ ಸಾಮಾನ್ಯರು ತಪ್ಪು ಮಾಡಿದರೆ ಅವರಿಗೇ ಶಿಕ್ಷೆಯನ್ನು ಕೊಡುವ ಅಧಿಕಾರ ರಾಜರಿಗೆ ಇರುತ್ತಿತ್ತು. ಆದೇ ರೀತಿ ರಾಜನು ಜನ ಸಾಮಾನ್ಯರಿಗೆ ಬೇಕಾದ ಸಕಲ ಸೌಲಭ್ಯಗಳ ವ್ಯವಸ್ಥೆಯನ್ನು ಮಾಡುವುದರ ಜೊತೆಗೆ ವೈರಿಗಳಿಂದ ತನ್ನ ರಾಜ್ಯವನ್ನು ಕಾಪಾಡಿಕೊಳುತ್ತಿದ್ದನು. ಕಾಲಬದಲಾದಂತೆ ಈ ಅಧಿಕಾರ ಊರುಗಳಲ್ಲಿ ಪಟೇಲರಿಗೆ ಬಂದಿತ್ತು. ಆ ಊರುಗಳ ಪಟೇಲರು ಯಾರ ಪರವಾಗಿಯು ನಿಲ್ಲದೇ, ಅವನು ಸರಿಯಾದ ರೀತಿಯಲ್ಲಿ ನ್ಯಾಯ ತೀರ್ಮಾನ ಮಾಡುತ್ತಿದ್ದನು. ಅನ್ಯಾಯ ಮಾಡಿದವರಿಗೆ ಶಿಕ್ಷೆಯನ್ನು ವಿಧಿಸುತ್ತಿದ್ದನು. ಆದರೆ ಇತ್ತೀಚಿನ ದಿನಗಳಲ್ಲಿ ಕೋರ್ಟ್‌ಗಳು ಇರುವುದರಿಂದ ಜನ ಸಾಮಾನ್ಯರು ತಮಗೆ ನ್ಯಾಯ ಆಧಾರಗಳನ್ನು ತೋರಿಸುವುದರ ಮೂಲಕ ಒಳ್ಳೆಯ ತೀರ್ಪನ್ನು ಪಡೆಯುತ್ತಿದ್ದಾರೆ.

ಮಾಸ್ತಿಯವರಲ್ಲಿ ನಾವು ಹೆಚ್ಚಾಗಿ ಈ ನ್ಯಾಯ ತೀರ್ಮಾನಕ್ಕೆ ಸಂಬಂಧ ಪಟ್ಟ ಕಥೆಗಳನ್ನು ಕಾಣಬಹುದು. ವಾಸ್ತವವಾಗಿ ಜನ ಸಾಮಾನ್ಯರಿಗೆ ಎಷ್ಟರ ಮಟ್ಟಿಗೆ ಒಳ್ಳೆಯ ರೀತಿಯಲ್ಲಿ ನ್ಯಾಯ ದೊರಕುತ್ತಿದೆ ಎಂಬುವುದನ್ನು ಹೇಳುತ್ತಾ ಸಮಾಜದ ವ್ಯವಸ್ಥೆಯನ್ನು ಕುರಿತು ಪ್ರಸ್ತಾಪ ಮಾಡಿದ್ದಾರೆ.

'ಜೋಗ್ಯೋರ ಅಂಜಪ್ಪನ ಕೋಳಿ ಕತೆ'ಯು ನ್ಯಾಯ ತೀರ್ಮಾನಕ್ಕೆ ಸಂಬಂಧ ಪಟ್ಟ ಕಥೆಯಾಗಿದೆ. ಅಂಜಪ್ಪ ಮೂಲತಃ ಜೋಗಿ. ಇವನು ತನ್ನ ತಾತನಿಂದ ಬಳುವಳಿಯಾಗಿ ಬಂದಿದ್ದ ಪದಗಳನ್ನು ಹೇಳುತ್ತ ಊರುಗಳಿಗೆ ಹೋಗಿ ಭಿಕ್ಷೆಯನ್ನು ಬೇಡಿ ತನ್ನ ಜೀವನವನ್ನು ಸಾಗಿಸುತ್ತಿದ್ದನು. ಹೀಗೆ ಇರಬೇಕಾದರೆ ಒಂದು ದಿನ ಇವನ ಪದವನ್ನು ಮೆಚ್ಚಿ ಒಬ್ಬಳು ಹೆಂಗಸು ಒಂದು ಕೋಳಿಯನ್ನು ಕೊಟ್ಟು ಯಾರಿಗೂ ಹೇಳಬೇಡ ಎಂದು ಹೇಳಿ ಕಳುಹಿಸಿದ್ದಳು. ಈ ವಿಚಾರ ಅವಳ ಅತ್ತೆಗೆ ಹೇಗೋ ಗೊತ್ತಾಗಿ ಅವನನ್ನು ಸಾಕ್ಷಿ ಸಮೇತ ಹಿಡಿದು ಗೌಡರ ಬಳಿಗೆ ಕರೆದುಕೊಂಡು ಹೋದಳು. ಗೌಡರು ಅಪರಾಧಿಯನ್ನು ದಾಗೀನಾ ಸಮೇತ ರಿಪೋರ್ಟಿನೊಂದಿಗೆ ಪೋಲಿಸ್ ಸ್ಟೇಷನ್‌ಗೆ ಕಳುಹಿಸಿಕೊಟ್ಟರು. ಅಲ್ಲಿ ಅಂಜಪ್ಪ ವಿಚಾರಣೆ ದಿನ ಕೋರ್ಟಿಗೆ ಹಾಜರಾದನು. "ವಿಚಾರಣೆ ಆಯಿತು. ವಿಚಾರಣೆ ಏನಿದೆ? ಮುದುಕಿ ಮನೆಯಿಂದ ಕೋಳಿ ಹೋದದ್ದು ನಿಜ. ಆ ಕೋಳಿಯನ್ನು ಅವಳು ಗುರುತಿಸಿದ್ದಳು. ಅದು ಜೋಗ್ಯಪ್ಪನ ಹತ್ತಿರ ಇದ್ದದ್ದು ನಿಜ. ಅದನ್ನು ಮೂರು

ಜನ ನೋಡಿದ್ದರು. ಮ್ಯಾಜಿಸ್ಟ್ರೇಟರು ಅಂಜಪ್ಪನನ್ನು, "ನೀನು ಏನು ಹೇಳುತೀಯ?" ಎಂತ ಕೇಳಿದರು.

ಅಂಜಪ್ಪ: ಎಲ್ಲೋ ಬುದ್ಧಿ ನಾನು ಪದಾ ಹೇಳ್ತಾ ಇರಬೇಕಾದ್ರೆ ಕೋಳಿ ಬಂದು ಬೆಜ್ಜಗೆ ಅದೆ ಅಂತ ಜೋಳಿಗೆ ಒಳಗೆ ಸೇರಿಕೊಂಡಿರಬೇಕು. ನನಗೆ ತಿಳೀಲಿಲ್ಲ. ನಾನು ತಂದು ಬಿಟ್ಟೆ.

ಮ್ಯಾಜಿಸ್ಟ್ರೇಟರು: 'ಏನು ಪುರಾಣ ಹೇಳ್ತೀ. ಕೋಳಿ ಬಂದು ನಿನ್ನ ಜೋಳಿಗೆ ಒಳಗೆ ಕುಳಿತು ಕೊಳ್ಳುತ್ತದೆಯಾ? ಸತ್ಯಾ ಹೇಳು.'

ಜೋಗಪ್ಪ: 'ಮಹಾ ಸ್ವಾಮಿ ಸತ್ಯ ಹೇಳ್ತೀನಿ. ನೀವು ಹೇಳಿದ ದೇವರ ಮೇಲೆ ಆಣೆ ಮಾಡ್ತೀನಿ. ನಾನು ಕೋಳಿ ಕದೀಲಿಲ್ಲ'.

ಮ್ಯಾಜಿಸ್ಟ್ರೇಟರು: 'ನೀನು ಕೋಳಿ ಕದೀಲಿಲ್ಲ ಅನ್ನು ಕೋಳಿ ಏನೋ ಜೋಳಿಗೆಗೆ ತಾನೇ ಬರಲಿಲ್ಲ. ಯಾರಾದರೂ ಕೊಟ್ರೇನೋ?.'

ಅಂಜಪ್ಪನಿಗೆ ಆ ಹುಡುಗಿ ಕೊಟ್ಟಳು ಎಂತ ಹೇಳಿಬಿಡಬೇಕು ಅಂತ ನಾಲಗೆಯ ಕೊನೆಗೆ ಬಂದಿತ್ತು. ಆದರೆ ಅವಳು ಯಾರಿಗೂ ಹೇಳಬೇಡ ಎಂತ ಹೇಳಿದ್ದದ್ದು ಆ ಮೇಲೆ ತನಗೆ ಸನ್ನೆ ಮಾಡಿದ್ದದ್ದು, ಎಲ್ಲಾ ಜ್ಞಾಪಕ ಬಂತು. ಏನೋ ಪಾಪ, ಭ್ರಮೆಯಿಂದ ಒಂದು ಕೋಳಿ ಕೊಟ್ಟಳು, ಅವಳನ್ನು ಯಾಕೆ ಬಿಟ್ಟು ಕೊಡಬೇಕು, ಎಂತ ಯೋಚನೆ ಬಂದು ಆ ಮಾತು ತಡೆಯಿತು. ಏನೂ ಹೇಳದೆ ಸುಮ್ಮನೆ ಇದ್ದನು. 'ಏನು ಹೇಳ್ತೀಯಾ' ಎಂತ ಮ್ಯಾಜಿಸ್ಟ್ರೇಟರು ಪುನಃ ಕೇಳಿದರು.

ಅಂಜಪ್ಪ: ಏನು ಹೇಳ್ಲೀ ಬುದ್ಧಿ ಧರ್ಮದ ದಣಿ ನಿಜ ಏನು ಅಂತ ನಿಮಗೆ ದೇವರು ತಿಳಿಸಬೇಕು. ನಾನು ಕದಿಯಲಿಲ್ಲ."೧೭

ಮ್ಯಾಜಿಸ್ಟ್ರೇಟರು ಇವನ ಮೇಲೆ ಚಾರ್ಜು ಬರೆದು ನಿನ್ನ ಕಡೆ ಸಾಕ್ಷಿಗಳಿದ್ದಾರೆಯೇ? ಅಂತ ಕೇಳಿದರು. ಅದಕ್ಕೇ ಅಂಜಪ್ಪ ನನಗೆ ದೇವರೇ ಸಾಕ್ಷಿ ಎಂದನು. ಮ್ಯಾಜಿಸ್ಟ್ರೇಟರು ಇಪ್ಪತ್ತು ರೂಪಾಯಿ ಜುಲ್ಮಾನೆ, ತಪ್ಪಿದರೆ ಹದಿನೈದು ದಿನ ಸಜಾ ಎಂದು ಶಿಕ್ಷೆ ವಿಧಿಸಿದರು.

ಅಂಜಪ್ಪ ಆ ಹುಡುಗಿಗೆ ಒಳ್ಳೆಯದನ್ನು ಮಾಡಲು ಹೋಗಿ ಕಳ್ಳ ಎಂಬ ಬಿರುದನ್ನು ಪಡೆದುಕೊಂಡನು. ಇಲ್ಲಿ ಮ್ಯಾಜಿಸ್ಟ್ರೇಟರಿಗೆ ಸಾಕ್ಷಿ ಮುಖ್ಯವೇ ವಿನಃ ಯಾರು ಅನ್ಯಾಯವನ್ನು ಮಾಡಿದ್ದಾರೆ ಎಂಬ ಬಗ್ಗೆ ಯೋಚಿಸುವ ವ್ಯವಧಾನವಿಲ್ಲ. ಅಂಜಪ್ಪನ ವ್ಯಕ್ತಿತ್ವ ಮೊದಲನಿಂದ ಕೊನೆಯವರೆಗೆ ಒಂದೇ ರೀತಿಯಾಗಿದೆ. ಮಾಸ್ತಿಯವರು ಜನ ಸಾಮಾನ್ಯರುಗಳಿಗೆ ಸರಿಯಾದ ನ್ಯಾಯ ದೊರಕುತ್ತಿಲ್ಲವೆಂಬುವುದನ್ನು, ಅದನ್ನ ತಿದ್ದುವ ಪ್ರಯತ್ನವನ್ನು ಮಾಡಬೇಕು ಎಂದು ಅಭಿಪ್ರಾಯ ಪಡುತ್ತಾರೆ.

'ಬೈಚೇಗೌಡ' ಎಂಬ ಕಥೆಯಲ್ಲಿ ಮಾಸ್ತಿಯವರು ಬೈಚೇಗೌಡನ ಸುತ್ತ ಆ ಪರಿಸರವನ್ನು ಸೃಷ್ಟಿಸುತ್ತಾರೆ. ಆದ್ದರಿಂದ ಅವನು ಮುಖಾಮುಖಿಯಾಗಲೇ ಬೇಕಾಗಿರುವ ಸಂಧರ್ಭದಿಂದ ತಪ್ಪಿಸಿಕೊಂಡು, ತನ್ನ ನೋವಿನ ಸಾಧ್ಯತೆಯನ್ನು ಹಿಡಿತದಲ್ಲಿರಿಸಿಕೊಳ್ಳುವ ಕಾರಣಕ್ಕಾಗಿ ಆವರಣದಿಂದ ಪಲಾಯನ ಮಾಡಿಬಿಡುತ್ತಾನೆ.

ಬೈಚೇಗೌಡ ಒಬ್ಬ ರೈತ, ಕಂದಾಯದ ದೃಷ್ಟಿಯಿಂದ ಬಹು ಸಣ್ಣ ಕುಳ. ಶಾನುಬೋಗ ಸೀತಪ್ಪ ಊರಿನಲ್ಲಿ ರೈತರು ಕಂದಾಯವನ್ನು ಕಟ್ಟಿದ್ದರೂ ಕೂಡ ಕಟ್ಟಿಲ್ಲವೆಂದು ಅವರಿಗೆಲ್ಲ ಮೋಸವನ್ನು ಮಾಡುತ್ತಿದ್ದನು. ಅದೇ ರೀತಿ ಬೈಚೇಗೌಡ ಕಂದಾಯ ಕಟ್ಟಿದ್ದರೂ ಕಟ್ಟಿಲ್ಲವೆಂದು ವಾದ ಮಾಡುತ್ತಿದ್ದನು. "ಬೈಚೇಗೌಡ ತಾನು ಕಂದಾಯ ಕಟ್ಟಿರುವ ರಸೀತಿಯನ್ನು ಏನು ಮಾಡಿರಲಿಲ್ಲ. ಭದ್ರವಾಗಿ ಇಟ್ಟಿದ್ದನು. ರಸೀತಿ ಕಳೆದು ಹೋದರೆ ಹಣ ಕೊಟ್ಟದ್ದನ್ನು ಸುಳ್ಳು ಎನ್ನುವುದು ಅವನಿಗೆ ಒಪ್ಪಿಗೆ ಇಲ್ಲ. ಈ ಶಾನುಭೋಗ ತಂದೆಯ ದಾರಿಯನ್ನು ಬಿಟ್ಟು ಹಾಳಾಗುತ್ತಿದ್ದಾನೆ. ಇವನಿಗೆ ಬುದ್ಧಿ ಕಲಿಸಬೇಕು ಎಂದು ಅವನು ರಸೀತಿ ಇದೆ ಎನ್ನುವುದನ್ನು ಹೇಳದೆ ವ್ಯವಹಾರವನ್ನು ಇಷ್ಟು ದೂರ ತಂದಿದ್ದನು. 'ಅಮಲ್ದಾರರು ಬರಲಿ ಅವರಿಗೆ ರಸೀತಿ ತೋರಿಸಿ ಚೆನ್ನಾಗಿ ಛೀಗುಟ್ಟಿಸುತ್ತೇನೆ' ಎಂದು ಅವನು ಯೋಚನೆಮಾಡಿದ."[೧೮] ಈ ವಿಷಯವನ್ನು ತಿಳಿದ ಸೀತಪ್ಪನ ತಾಯಿ ಅಮಲ್ದಾರರಿಗೆ ನನ್ನ ಮಗನನ್ನು ಹಿಡಿದು ಕೊಡಬೇಕು ಎಂದು ಬೇಡಿಕೊಂಡರು. ಅದಕ್ಕೆ ಆ ಅನ್ಯಾಯವನ್ನು ಒಪ್ಪಿ ತನಗೆ ತೊಂದರೆಯನ್ನು ತಂದುಕೊಂಡು ಆ ಊರಿನಲ್ಲಿ ಇರಲು ಇಷ್ಟವಿಲ್ಲದೇ ಪಟ್ಟಣವನ್ನು ಸೇರಿದನು.

ಬೈಚೇಗೌಡನ ಸಂದರ್ಭದಲ್ಲಿ ಉಳಿದುಕೊಳ್ಳುವ ಸೀತಪ್ಪ ಬೇರೆವೊಂದು ಸಮಯದಲ್ಲಿ ಅಮಲ್ದಾರರಿಗೆ ಸಿಕ್ಕಿ ಬಿದ್ದು ಜೈಲಿನಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿದ್ದ. ಅಲ್ಲಿ ಬೈಚೇಗೌಡ ಮತ್ತೆ

ಸೀತಪ್ಪನಿಗೆ ಸಹಾಯವನ್ನು ಮಾಡುತ್ತಾನೆ. "ನೋಡಪ್ಪ ಈಸು ದಿನ ಸತ್ಯವಂತಾ ಅಂತ ಇದ್ದನಿ. ಆ ಮೊಗ ನಿನ್ನ ನೋಡಲಿ ಅಂತ ಒಂದು ತಪ್ಪು ಮಾಡಿದೀನಿ. ತಪ್ಪು ಮಾಡೋನೂ ಅಂತ ನಾಲ್ಕು ಜನಕ್ಕೆ ತಿಳೀತು."[೧೯] ಇನ್ನು ಇಲ್ಲಿದ್ದರೆ ನಾನು ಮತ್ತೆ ಅನ್ಯಾಯವನ್ನು ಮಾಡಬೇಕಾಗುತ್ತದೆ. ಅದಕ್ಕೇ ನಾನು ಈ ಜೈಲನ್ನು ಬಿಟ್ಟು ಹೋಗುತ್ತೇನೆ ಎಂದು ಹೇಳಿ ಹೊರಟನು.

ಒಟ್ಟಾರೆ ಬೈಚೇಗೌಡ ಅಶಿಕ್ಷಿತ ಸಮಾಜದ ಕೆಳವರ್ಗಕ್ಕೆ ಸೇರಿದವನು. ಆದರೆ ಆತನಲ್ಲಿರುವ ಮಾನವೀಯತೆ, ನ್ಯಾಯಪ್ರಜ್ಞೆಗಳು ಶಿಕ್ಷಿತ ವರ್ಗಕ್ಕೂ ಹಾಗೂ ಮೇಲುಜಾತಿಗೆ ಸೇರಿದವರೆನ್ನಲಾದ ಶಾನುಭೋಗರು ಮತ್ತಿತರರ ಮಾನವೀಯತೆಗಿಂತ ಮಹತ್ವದೆಂದು ಮಾಸ್ತಿಯವರು ಗುರುತಿಸುತ್ತಾರೆ. ಮಾಸ್ತಿ ಅಧಿಕಾರ ವಲಯದಲ್ಲಿ ಸಹಜವಾಗಿ ಸಾರ್ವತ್ರಿಕಗೊಳ್ಳುವ ಪ್ರಕ್ರಿಯೆಗಳನ್ನು ಶಿಕ್ಷೆಗೆ ಗುರಿಪಡಿಸುವುದರ ಮೂಲಕ ವಿರೋಧಿಸುತ್ತಾರೆ. ವ್ಯಕ್ತಿಯು ಮಾಡುವ ತಪ್ಪಿಗೆ ಶಿಕ್ಷೆಯನ್ನು ಸೀಮಿತಗೊಳಿಸುವ ಮಾಸ್ತಿ, ಆ ಅಪರಾಧವನ್ನು ಪ್ರತಿನಿಧಿಸುವ ವ್ಯಕ್ತಿಯ ಭಾವ ಪ್ರಪಂಚವನ್ನು ಶುದ್ಧ ಅಂತಃಕರಣದಿಂದ ಗೌರವಿಸುತ್ತಾರೆ. ಮಾಸ್ತಿ ಅವರು ಬದುಕು ಯಾವಾಗಲೂ ಚಲನ ಶೀಲವಾಗಿರಬೇಕು ಎಂದು ಬಯಸುತ್ತಾರೆ.

'ಇನ್ನೊಂದು ಹಳೆಯ ಕತೆ'ಯಲ್ಲಿ ಭಕ್ತನಾದವನು ಭಗವಂತ ಸಂಬಂಧವನ್ನು ಹೇಗೆ ಪಡೆದುಕೊಳ್ಳಬೇಕು ಎಂದು ಹೇಳುತ್ತಾ ನ್ಯಾಯ ತೀರ್ಮಾನದ ಬಗ್ಗೆ ಈ ಕಥೆಯಲ್ಲಿ ಹೇಳಲಾಗಿದೆ.

ಭಟ್ಟರು ತುಂಬ ದೈವ ಭಕ್ತರು. ದೇವರು ಎಲ್ಲೆಲ್ಲಿಯೂ ಇದ್ದಾನೆ ಅಂತ ತಿಳಿದು ಇವರು ಯಾವ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದರೂ ಅಲ್ಲಿಯೇ ದೇವರನ್ನು ನೆನೆಯುತ್ತಿದ್ದರು. ಆದರೆ ಇವರ ಪರಿಚಾರಕ ಭಟ್ಟರಷ್ಟು ದೈವ ಭಕ್ತನಲ್ಲ. ಇವನು ಬರೀ ತೋರಿಕೆಯ ಪೂಜೆ ಮಾಡುತ್ತಿದ್ದನು. ಇದನ್ನು ನೋಡಿ ಭಟ್ಟರು ಇಷ್ಟು ಬೇಗ ಪೂಜೆ ಮುಗಿಸಿದಿರಾ ಎಂದು ಕೇಳುತ್ತಿದ್ದನು. ಆಗ ಪರಿಚಾರಕನಿಗೆ ತುಂಬ ದುಃಖವಾಯಿತು. ಭಟ್ಟರು ನನಗಿಂತ ಬೇಗ ಪೂಜೆ ಮುಗಿಸುತ್ತಾರೆ ಒಂದೊಂದು ಸಲ ಒಂದು ಸ್ತೋತ್ರವನ್ನೂ ಸಹ ಹೇಳುವುದಿಲ್ಲ. ನಾನು ಒಂದು ಘಂಟೆ ಪೂಜೆ ಮಾಡಿದರು, ನನ್ನನ್ನು ಬೇಗ ಪೂಜೆಮಾಡಿದಿರಿ ಅಂತ ಕೇಳುತ್ತಾರಲ್ಲ ಅಂದುಕೊಂಡನು. ಆಗ ಭಟ್ಟರ ತಾಯಿ 'ಪರಿಚಾರಕನಿಗೆ ಇದರ ಮರ್ಮ ತಿಳಿಯಬೇಕು ಇಲ್ಲದಿದ್ದರೆ ಇವನು ಉದ್ಧಾರವಾಗುವುದಿಲ್ಲ' ಎಂದು ತಿಳಿದು ಭಟ್ಟರು ಮತ್ತು ಪರಿಚಾರಕ ಇಬ್ಬರನ್ನು ಒಟ್ಟಿಗೆ ಊಟಕ್ಕೆ ಕೂರಿಸಿ ಊಟಬಡಿಸುತ್ತ

ಪರಿಚಾರಕನನ್ನು ಕುರಿತು ತುಪ್ಪ ನೀನು ಸಾಕಾದಷ್ಟು ತೆಗೆದಿಡಲಿಲ್ಲ ಆಗಿ ಹೋಯಿತು, ತರುತ್ತೇನೆ ಎಂದು ಹೇಳಿ ಹೋಗಿ ತುಪ್ಪವನ್ನು ತಂದು ಬಡಿಸುತ್ತಾಳೆ.

"ಪರಿಚಾರಕ ಅನ್ನವನ್ನು ಕಲೆಸಿ ಆಹುತಿಯ ನಾಲ್ಕು ಅಗುಳನ್ನು ಬಾಯಿಗೆ ಇಟ್ಟುಕೊಂಡನು. ಅದನ್ನು ಉಗಿಯಬೇಕೆನ್ನಿಸಿತು. ಆ ನಾಲ್ಕು ಅಗುಳೂ ವಿಷದಂತೆ ಕಹಿ. ಒಂದು ಕ್ಷಣ ತಡೆದನು; ಇತರರು ಏನು ಮಾಡುತ್ತಿರುವರೋ ಎಂದು ಎರಡು ಕಡೆಯೂ ನೋಡಿದನು. ಅತಿಥಿಗಳೆಲ್ಲಾ ಸುಖವಾಗಿ ಊಟ ಮಾಡುತ್ತಿದ್ದಾರೆ. ಪಕ್ಕದಲ್ಲಿ ಭಟ್ಟರು ಆಹುತಿಗಳನ್ನೆಲ್ಲ ಮುಗಿಸಿದ್ದಾರೆ. ಅನ್ನವನ್ನು ಕಲೆಸಿ ಕೈಗೆ ಒಂದು ತುತ್ತು ತೆಗೆದುಕೊಂಡಿದ್ದಾರೆ. ಏಕೆ ಕಹಿ ಆಯಿತು ಎಂದು ಪರಿಚಾರಕನು ಯೋಚಿಸಿದನು."೨೦ ತಾಯಿಯನ್ನು ಕರೆದು ನೀವು ತುಪ್ಪದ ಬದಲು ಬೇವಿನ ಎಣ್ಣೆ ಆಕಿದ್ದಿರ ಎಂದು ಹೇಳಿದನು. ಆಗ ಅವಳು ತನ್ನ ಮಗನನ್ನು ಕುರಿತು 'ಅಪ್ಪಾ ನಿನಗೂ ಇದನ್ನೇ ಬಡಿಸಿದೆನಲ್ಲಾ ಕಹಿಯಿಲ್ಲವೇ?' ಎಂದು ಕೇಳಿದರು. ಭಟ್ಟರು ಆಗ ಬಾಯಿಗೆ ಅನ್ನವನ್ನು ಹಾಕಿ ಹೌದು ಕಹಿ ಎಂದನು. ಪರಿಚಾರಕ ಯಾವಾಗಲೂ ತನಗೆ ಅನ್ಯಾಯವನ್ನು ಮಾಡುತ್ತಿದ್ದಾರೆ ಎಂದು ಬಾವಿಸುತ್ತಿದ್ದನು. ಈ ಘಟನೆಯಿಂದ ಅವನಿಗೆ ಗೊತ್ತಾಯಿತು ತನಗೆ ಯಾರು ಅನ್ಯಾಯವನ್ನು ಮಾಡುತ್ತಿಲ್ಲವೆಂದು. ತನ್ನ ಮನಸ್ಸು ಸರಿ ಇಲ್ಲದಿರುವುದೇ ಇದಕ್ಕೆಲ್ಲ ಕಾರಣ ಎಂದು ತಿಳಿಯಿತು.

ಮನುಷ್ಯರು ಯಾರು ಮೂಲತಹ ಕೆಟ್ಟವರಲ್ಲ. ಬೇರೆಯವರನ್ನು ನಾವು ಯಾವ ರೀತಿಯಲ್ಲಿ ಕಾಣುತ್ತೇವೆ ಅದೇ ರೀತಿಯಲ್ಲಿ ಅವರು ನಮ್ಮನ್ನು ನಡೆಸಿಕೊಳ್ಳುತ್ತಾರೆ. 'ಕಾಮಾಲೆ ಕಣ್ಣಿಗೆ ಲೋಕವೆಲ್ಲ ಹಳದಿ ಎನ್ನುವಂತೆ' ನಮ್ಮ ನಡವಳಿಕೆ, ಮಾತು, ಮನಸ್ಸು ಸರಿಯಿಲ್ಲದೆ ಯಾರನ್ನೇ ಮಾತನಾಡಿಸಿದರೂ ಅವರೆಲ್ಲ ಕೆಟ್ಟವರ ರೀತಿಯಲ್ಲಿಯೇ ಅನ್ಯಾಯವನ್ನು ಮಾಡುತ್ತಿರುವ ರೀತಿಯಲ್ಲಿಯೇ ಕಾಣುತ್ತಾರೆ. ಅದಕ್ಕೇ ಮೊದಲು ವ್ಯಕ್ತಿಗಳು ತಮ್ಮ ಮನಸ್ಸನ್ನು ಶುದ್ಧಿ ಮಾಡಿಕೊಳ್ಳಬೇಕು ಎಂದು ಮಾಸ್ತಿಯವರು ಅಭಿಪ್ರಾಯ ಪಡುತ್ತಾರೆ.

'ಸುಬೇದಾರರಿಗೆ ಪ್ಯಾದೇ ಮಾತು' ಈ ಕಥೆಯೂ ಕೂಡ ನ್ಯಾಯ ತೀರ್ಮಾನಕ್ಕೆ ಸಂಬಂಧ ಪಟ್ಟದಾಗಿದೆ. ಸುಬೇದಾರರಿಗೆ ಎಲ್ಲ ಕೆಲಸದಲ್ಲೂ ತುಂಬ ಸಹಾಯಕನಾದವನು ಒಬ್ಬ ಅಡಿಗೆಯವನು. ಇವನು ಮದುವೆಯಾಗಿರಲಿಲ್ಲ. ಆದರೆ ಸೂಳೆಯ ಹತ್ತಿರ ಅನೈತಿಕ ಸಂಬಂಧವನ್ನು ಇಟ್ಟು ಕೊಂಡಿದ್ದನು. ಇದನ್ನು ತಿಳಿದ ಗೌಡ ಅವಳ ಮೇಲೆ ಜನರನ್ನು ಬಿಟ್ಟು ಗಲಾಟೆ ಮಾಡಿಸಿದ. ಆದಕ್ಕೆ

ಅಡಿಗೆಯವನು ಸಾಹುಕಾರನೂ ಒಬ್ಬ ಅಪರಾಧಿ. ಅದಕ್ಕೆ ಅವನು "ನ್ಯಾಯ ಆದರೆ ತನಗೆ ಶಿಕ್ಷೆ ತಪ್ಪಿದ್ದಲ್ಲ. ಈ ಕೋರ್ಟಿನಲ್ಲಾದರೂ, ಇನ್ನೊಂದು ಕೋರ್ಟಿನಲ್ಲಾದರೂ ಅನ್ಯಾಯ ಆದರೇನೆ ತಾನು ಬದುಕಿಕೊಳ್ಳಬೇಕು. ಯಾವುದೋ ಕೋರ್ಟಿಗೆ ಹೋಗಿ ಇನ್ಯಾರೋ ಮ್ಯಾಜಿಸ್ಟ್ರೇಟರ ಹತ್ತಿರ ಸಿಕ್ಕಿಕೊಂಡು ಒದ್ದಾಡುವುದಕ್ಕಿಂತ ಇಲ್ಲಿಯೇ ಏನಾದರೂ ಮಾಡಿಕೊಂಡು ಬದುಕಿಕೊಳ್ಳಬೇಕು"[೨೧] ಅಂತ ಅವನಿಗೆ ತಿಳಿದು ಸಾಹುಕಾರ ಸುಬೇದಾರರಿಗೆ ಸ್ವಲ್ಪ ಹಣ ಕೊಟ್ಟು ತನಗೆ ನ್ಯಾಯ ದೊರಕಿಸಿಕೊಡುವಂತೆ ಹೇಳುತ್ತಾನೆ.

ಅಡುಗೆಯವನಿಗೆ ಸುಬೇದಾರ ಹಣ ತೆಗೆದುಕೊಂಡಿರುವ ವಿಚಾರ ತಿಳಿದು ಅವನನ್ನ ಹೆದುರಿಸಿ ಸೂಳೆಗೆ ನ್ಯಾಯ ದೊರಕಿಸಿ ಕೊಡುವಂತೆ ಹೇಳ ಅವಳಗೆ ನ್ಯಾಯವನ್ನು ದೊರಕಿಸಿ ಕೊಡುತ್ತಾನೆ.

ಮಾಸ್ತಿಯವರು ಲಂಚವನ್ನು ವಿರೋಧಿಸುತ್ತಾರೆ, ನ್ಯಾಯಕ್ಕೇ ಯಾವತ್ತಿದ್ದರೂ ಜಯ ಇದ್ದೇ ಇದೆ. ಈ ಕಥೆಯಲ್ಲಿ ಮಾಸ್ತಿಯವರು ನ್ಯಾಯವನ್ನು ಪಡೆದುಕೊಳ್ಳಬೇಕಾದರೇ ಮನುಷ್ಯರು ಹೆದರಿಸಿಯಾದರೂ ಸರಿಯೇ ತಮಗೆ ನ್ಯಾಯವನ್ನು ದೊರಕಿಸಿಕೊಳ್ಳಬೇಕು ಎಂದು ಅಭಿಪ್ರಾಯ ಪಡುತ್ತಾರೆ.

ಒಟ್ಟಿನಲ್ಲಿ ಕಥೆಗಾರರು ನ್ಯಾಯ ವಿತರಣೆಯಲ್ಲಿ ಕಾನೂನಿನ ಚೌಕಟ್ಟಿಗಿಂತ ಮುಖ್ಯವಾಗಬೇಕಾದುದು 'ಮಾನವೀಯತೆ' ಎಂದು ಹೇಳಿದ್ದಾರೆ. ಕಥೆಗಳು ಮಾನವ ನಿರ್ಮಿಸಿಕೊಳ್ಳುವ ಕಟ್ಟುಪಾಡುಗಳ ಮಿತಿಗಳನ್ನು ಸೂಚಿಸುತ್ತವೆ. ಈ ಮಾತು ಕೇವಲ ನ್ಯಾಯ ತೀರ್ಮಾನಕ್ಕಷ್ಟೇ ಅಲ್ಲ ಆಡಳತಕ್ಕೂ ಸಂಬಂಧಿಸಿದ್ದು.

೬. ಭಕ್ತ – ಭಗವಂತನ ಸಂಬಂಧ

ಬ್ರಾಹ್ಮಣರು ಕಟ್ಟಾ ಸಂಪ್ರದಾಯವಾದಿಗಳು. ಇವರು ವೈಷ್ಣವ ದೇವರುಗಳನ್ನು ಮಾತ್ರ ಪೂಜಿಸುತ್ತಾರೆ. ಉಳಿದ ಜಾತಿಯವರಿಗೆ ಯಾವ ಕಟ್ಟುಪಾಡಿಲ್ಲ. ಇವರು ಎಲ್ಲ ದೇವರಿಗೂ ಕೈ ಮುಗಿಯುತ್ತಾರೆ. ಜೊತೆಗೆ ಮಾರಮ್ಮನನ್ನು, ಮಧ್ವಾಚಾರಿಯನ್ನು ಪೂಜಿಸುತ್ತಾರೆ. ಅದರಲ್ಲೂ ಒಕ್ಕಲಿಗರಿಗೆ ನಿರ್ದಿಷ್ಟ ದೇವರಿಲ್ಲ. ಇವರಿಗೆ ಮನೆ ದೇವರನ್ನು ಕಂಡರೆ ವಿಶಿಷ್ಟವಾದ ಗೌರವ. ಎಂತಹ ಸಂದರ್ಭ ಬಂದರೂ, ಇವರು ಮನೆ ದೇವರನ್ನು ಬಿಡುವುದಿಲ್ಲ. ಆ ದೇವರನ್ನು ಕಂಡರೆ ತುಂಬ ಭಕ್ತಿ. ಆ ದೇವರಿಗೆ ವಿರುದ್ಧವಾಗಿ ಯಾವತ್ತು ನಡೆದುಕೊಳ್ಳುವುದಿಲ್ಲ. ಗ್ರಾಮಗಳಲ್ಲಿ ದೇವರ ಆಚರಣೆ, ಉತ್ಸವಗಳು ನಡೆದರೆ ಅಲ್ಲಿ ಬರೀ ಆ ಜಾತಿಯ ಜನ ಮಾತ್ರ ಸೇರದೆ, ಉಳಿದ ಎಲ್ಲ ಜಾತಿಯ ಜನ ಸೇರಿ ತಮ್ಮ ದೇವರ ಉತ್ಸವವೇನೋ ಎನ್ನುವಷ್ಟು ಸಂಭ್ರಮದಿಂದ ಇರುವುದರ ಜೊತೆಗೆ ಆ ದೇವರನ್ನು ಪೂಜಿಸುತ್ತಾರೆ.

ಭಕ್ತನು ತನಗೆ ಯಾವ ಕಷ್ಟ ಬಂದರು ಅವನು ಮೊದಲು ಭಗವಂತನಲ್ಲಿ ಮೊರೆಯನ್ನು ಇಡುತ್ತಾನೆ. ಆಗ ಭಗವಂತನಿಗೆ ಭಕ್ತನ ಪ್ರೀತಿಯ ಮೇಲೆ ನಂಬಿಕೆ ಉಂಟಾದರೇ ಅವನು ಭಕ್ತನಿಗೆ ಅನುಗ್ರಹವನ್ನು ನೀಡುತ್ತಾನೆ. ಭಗವಂತನನ್ನು ಪೂಜಿಸುವುದು, ಅಂದರೆ ಆಡಂಬರದ ತೋರಿಕೆಯಾಗಿರದೆ ದೃಡ ಮನಸ್ಸಿನಿಂದ ಯಾವುದೇ ತೋರಿಕೆಯ ಅಡಂಬರವಿಲ್ಲದೇ ಇದ್ದರೂ ಭಗವಂತ ತೃಪತನಾಗುತ್ತಾನೆ. ಇಲ್ಲಿ ಭಕ್ತ ಭಗವಂತನ ನಡುವೆ ಅವಿನಾಭಾವ ಸಂಬಂಧವಿದೆ.

ಒಂದು ಕಾಲದಲ್ಲಿ ಆದ್ದೂರಿಯಿಂದ ದೇವರನ್ನು ಪೂಜಿಸುತ್ತಿದ್ದರು. ಭಯ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು. ಆದರೆ ಕಾಲ ಬದಲಾದಂತೆ ಆ ವೈಭವಗಳು ಆ ಪಾವಿತ್ರ್ಯ ಮರೆಯಾಗುತ್ತಿವೆ. ಅಲ್ಲದೇ ದೇವರನ್ನು ಗುತ್ತಿಗೆಯಾಗಿ ಮಾಡಿಕೊಂಡಿದ್ದ ಒಂದು ವರ್ಗ ಕ್ರಮೇಣವಾಗಿ ದೇವರನ್ನು ಹಂಚಿಕೆ ಮಾಡತ್ತಿದೆ. ಕೆಳವರ್ಗದವರು ಯಾವಾಗ ತಮ್ಮ ಅಸ್ಥಿತ್ವವನ್ನು ಸ್ಥಾಪಿಸಿಕೊಳ್ಳಲು ದೇವಸ್ಥಾನಗಳಿಗೆ ನುಗ್ಗಿ ಕ್ರಾಂತಿಯನ್ನು ಮಾಡಲು ಪ್ರಾರಂಭಿಸಿದರೋ ಆಗ ಸ್ವಲ್ಪ ಮಟ್ಟಿಗೆ ಬದಲಾವಣೆಯಾದುದನ್ನು ಕಾಣಬಹುದು.

ಭಗವಂತನ ಅನಿವಾರ್ಯವಾದ ಅಂಗ ಪೂಜಾರಿ. ಪೂಜಾರಿ ಒಂದು ಪರಂಪರೆಗೆ ಹಾಗೂ ಮೌಢ್ಯತೆಗೆ ಸಂಕೇತ. ದೇವರು ಮತ್ತು ಭಕ್ತರ ನಡುವೆ ಸಂಪರ್ಕ ಕಲ್ಪಿಸುವ ಸೇತುವೆ. ಜೊತೆಗೆ

ಉಚ್ಚ-ನೀಚ ಎರಡು ವರ್ಗಗಳನ್ನು ಸೃಷ್ಟಿಸಿ ಬಿಡುವುದರಿಂದ, ಆಧುನಿಕ ಜಗತ್ತಿನಲ್ಲಿ ಆತ ಮಹಾಪರಾಧವನ್ನು ಮಾಡುತ್ತಿದ್ದಾನೆಂತಲೇ ಅರ್ಥ. ಆಧುನಿಕ ವಿಚಾರಧಾರೆಯುಳ್ಳ ಮಾಸ್ತಿಯವರು ತಮ್ಮ ಕಥೆಗಳಲ್ಲಿ ಎಲ್ಲಿಯೂ ಪೂಜಾರಿಯನ್ನು ತರುವ ಪ್ರಯತ್ನ ಮಾಡಿಲ್ಲ. ಭಗವಂತನನ್ನು ತುಂಬ ಭಕ್ತಿಯಿಂದ ಬೇಡಿದರೆ ಅವನು ಎಲ್ಲ ಜಾತಿಯ ಭಕ್ತರಿಗೂ ಅನುಗ್ರಹವನ್ನು ಕೊಡುತ್ತಾನೆ ಎಂದು ಅಭಿಪ್ರಾಯ ಪಡುತ್ತಾರೆ.

'ಇನ್ನೊಂದು ಹಳೆಯ ಕತೆ'ಯಲ್ಲಿ ಮಾಸ್ತಿಯವರು ಭಕ್ತ-ಭಗವಂತನ ಸಂಬಂಧದ ಬಗ್ಗೆ ಹೇಳುತ್ತಾರೆ. ಪರಾಶರ ಭಟ್ಟರ ತಾಯಿ ಇವನಿಗೆ ಯಾವಾಗಲೂ ಸನ್ಮಾರ್ಗದ ಬಗ್ಗೆ ಉಪದೇಶವನ್ನು ಮಾಡುತ್ತಿದ್ದರು. ಜೊತೆಗೆ "ಯಾವುದೊಂದು ಮಾತು ಬಂದರೂ ಆಕೆ, ದೇವರನ್ನು ನಂಬಬೇಕು ಎಂಬ ಮುಖ್ಯ ವಿಷಯವನ್ನು ಹೇಳುತ್ತಲೇ ಇರುವರು. ನೋಡಹೋದರೆ ಇದಕ್ಕಿಂತ ಹೆಚ್ಚಾದ ತತ್ವವಿಲ್ಲ. ಆದರೆ ಇದು ಬಾಯಲ್ಲಿ ಬರುವುದೇ ನೂರರಲ್ಲಿ ಒಬ್ಬರಿಗೆ; ಮನಸ್ಸಿನಲ್ಲಿ ನೆಟ್ಟಿರುವುದು ಎಷ್ಟರಲ್ಲಿ ಒಬ್ಬರಿಗೆ? ಸೇವೆಗೆ ಹೂವು ಹೆಚ್ಚಾಗಿ ಸಿಕ್ಕಲಿಲ್ಲ ಎಂದರೆ ಆಕೆ ಭಗವಂತನಿಗೆ ಎಷ್ಟು ಬೇಕು? ಹೂವು ತುಂಬ ಇದ್ದರೆ ತುಂಬ ಕೊಡು ಕೊಂಚ ಇದ್ದರೆ ಕೊಂಚ ಕೊಡು. ಹೂವು ಇಲ್ಲದಿದ್ದರೆ ಎಲೆಯನ್ನು ಸಮರ್ಪಿಸು ಎನ್ನುವರು. ಯಾರಾದರೂ ಈ ದಿನ ದೇವಸ್ಥಾನಕ್ಕೆ ಹೋಗಲಾಗಲಿಲ್ಲ, ಅನ್ಯಾಯವಾಯಿತು. ಎಂದರೆ ಆಕೆ ಮನಸ್ಸಿನಲ್ಲಿ ಬೇನೆಯಿರಲಿ, ನೀನು ದೇವಸ್ಥಾನಕ್ಕೆ ಹೋಗದಿದ್ದರೆ ದೇವರು ನೀನಿರುವಲ್ಲಿಗೆ ಬರುವರು."೨೨ ಎಂದು ಹೇಳುತ್ತಾರೆ.

ಭಟ್ಟರು ಭಗವಂತನು ಪ್ರತಿಯೊಬ್ಬ ವ್ಯಕ್ತಿಯ ದೇಹದಲ್ಲಿಯೂ ಇರುತ್ತಾನೆ ಎಂದು ಹೇಳುತ್ತಾರೆ. ಅವನು ತನ್ನ ಹೊಟ್ಟೆಯಲ್ಲಿ ಬ್ರಹ್ಮ, ರುದ್ರ, ಇಂದ್ರಾದಿ ಸಮಸ್ತ ದೇವತೆಗಳನ್ನು ಅಖಿಲ ಬ್ರಹ್ಮಾಂಡವನ್ನೂ ಧರಿಸಿ ಭಗವಂತ ಕುಳಿತಿದ್ದಾನೆ ಎಂದು ಹೇಳಿದನು.

ಭಕ್ತಿಯಿಂದ ಭಗವಂತನನ್ನು ಭಕ್ತರು ಎಲ್ಲಿ ಇರುವರೋ ಅಲ್ಲಿಯೇ ನೆನೆದರೇ ಆ ಭಗವಂತನು ಭಕ್ತನ ಭಕ್ತಿಗೆ ಮೆಚ್ಚಿ ಅವನು ದರ್ಶನವನ್ನು ಕೊಡುತ್ತಾನೆ. ಭಗವಂತನು ಪ್ರತಿಯೊಂದು ವಸ್ತುವಿನಲ್ಲೂ, ವ್ಯಕ್ತಿಯಲ್ಲೂ ಇರುತ್ತಾನೆ. ಆದರೆ ಅದನ್ನು ಗುರುತಿಸಿ ಅವನ ಜೊತೆ ಭಕ್ತ ಉತ್ತಮ ಬಾಂಧವ್ಯವನ್ನು ವೃದ್ಧಿಸಿಕೊಳ್ಳಬೇಕು ಎಂದು ಮಾಸ್ತಿ ತಮ್ಮ ಕಥೆಗಳ ಮೂಲಕ ಹೇಳುತ್ತಾರೆ. ಭಗವಂತನಿಗೆ ಭಕ್ತಿ ಮುಖ್ಯವೇ ಹೊರತು, ತೋರಿಕೆಯ ಪೂಜೆ ಮುಖ್ಯವಲ್ಲವೆಂಬುವುದನ್ನು ಗಮನಿಸಬೇಕು.

'ನಿಜಗಲ್ಲಿನ ರಾಣಿ' ಕತೆಯು ಒಂದು ಐತಿಹಾಸಿಕ ಕತೆಯಾಗಿದೆ. ಈ ಕಥೆಯಲ್ಲಿ ಬರುವ ರಾಮರಸನಾಯಕನು ತನಗೆ ಮಕ್ಕಳಾಗಲಿಲ್ಲವೆಂದು "ಬಾವಿಗಳನ್ನು ತೋಡಿಸಿ ತೋಪುಗಳನ್ನು ಹಾಕಿಸಿ ಮಂಟಪಗಳನ್ನು ಕಟ್ಟಿಸಿ ದೇವರ ಸೇವೆಯನ್ನು ನಡೆಯಿಸಿದನು. ಊರಿನಲ್ಲಿ ಪೂರ್ವದಿಂದ ಇದ್ದ ಶ್ರೀರಾಮ ದೇವರ ದೇವಾಲಯವನ್ನು ಭದ್ರಪಡಿಸಿ ಅಲ್ಲಿ ಚೆನ್ನಾಗಿ ಪೂಜೆ ನಡೆಯುವುದಕ್ಕೇ ಏರ್ಪಾಡುಮಾಡಿದನು."೨೩ ಆದರೆ ಭಗವಂತನು ಮಕ್ಕಳನ್ನು ಅನುಗ್ರಹಿಸಲಿಲ್ಲ.

ದೇವರ ಕೆಲಸ ಕಾರ್ಯಗಳನ್ನು ಮಾಡಲಾಯಿತು. ಆದರೆ ಭಗವಂತನಲ್ಲಿ ಭಕ್ತನು ತನ್ನ ಮೊರೆಯನ್ನು ಇಡಲಿಲ್ಲ. ಮೊದಲು ಭಗವಂತ ಮತ್ತು ಭಕ್ತನ ನಡುವೆ ಉತ್ತಮ ಬಾಂಧವ್ಯ ಇರಬೇಕು. ಆಗ ಮಾತ್ರ ದೇವರು ಅನುಗ್ರಹವನ್ನು ಕೊಡಲು ಸಾಧ್ಯ. ಅದನ್ನು ಬಿಟ್ಟು ದೇವರ ಎಲ್ಲ ಕೆಲಸ ಕಾರ್ಯಗಳನ್ನು ನಾನು ಮಾಡಿದ್ದೇನೆ ಎಂದು ಭಕ್ತನು ಭಗವಂತನಲ್ಲಿ ಬಾಂಧವ್ಯವನ್ನು ಬೆಳೆಸಿಕೊಳ್ಳದೇ ಹೋದರೆ ಅವನಿಗೆ ಯಾವ ಫಲವೂ ದೊರಕುವುದಿಲ್ಲ ಎಂದು ಮಾಸ್ತಿಯವರು ಹೇಳಿದ್ದಾರೆ.

'ಪಂಡಿತನ ಮರಣ ಶಾಸನ' ಕಥೆಯಲ್ಲಿ ವಿಶಾಲಾಕ್ಷ ಪಂಡಿತನು ತನ್ನ ರಾಜ ಚಿಕ್ಕದೇವರಾಜ ಒಡೆಯರನ್ನೇ ದೇವರು ಅಂದು ಕೊಂಡಿದ್ದನು. ಆ ಒಡೆಯರು ಇವನನ್ನು ತುಂಬ ಆತ್ಮೀಯತೆ, ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ವಿಶಾಲಾಕ್ಷನು ರಾಜನು ಹೇಳಿದ ಎಲ್ಲ ಕೆಲಸಗಳನ್ನು ಮಾಡುವುದರ ಮೂಲಕ ಅವರಿಗೆ ಯಶಸ್ಸನ್ನು ತಂದು ಕೊಡುತ್ತಿದ್ದನು. ಇದನ್ನು ಸಹಿಸದ ಕೆಲವು ಜನ ಪಂಡಿತನ ಮೇಲೆ ಬಿದ್ದು ತಲೆಗೆ ಬೆನ್ನಿಗೆ ಚೆನ್ನಾಗಿ ಹೊಡೆದು ಬಿಟ್ಟಿದ್ದರು.

ಅರಸನಿಗೆ ಪಂಡಿತನ ಬಗ್ಗೆ ಗೌರವ, ಬಹು ಪ್ರೇಮ. ಪಂಡಿತನಿಗೆ ಯಾರೋ ಹೊಡೆದಿದ್ದಾರೆ ಎಂಬ ವಿಷಯ ತಿಳಿದು ಅರಸನು ಪಂಡಿತನನ್ನು ನೋಡಲು ಹೋಗುತ್ತಾನೆ. ಅಲ್ಲಿ ಪಂಡಿತ ಏಳಲು ಆಗದ ಸ್ಥಿತಿಯಲ್ಲಿ ಇದ್ದರೂ, ಅವನು ತನ್ನ ಒಡೆಯನನ್ನು ನೋಡಿ ತುಂಬ ಗೌರವದಿಂದ ಬರಮಾಡಿಕೊಂಡು ತನ್ನ ಇಹಲೋಕದ ಯಾತ್ರೆ ಮುಗಿಯುತ್ತ ಬಂದಿದೆ ಎಂದು ಹೇಳುತ್ತಾ "ನಿಮ್ಮ ಬಾಲ್ಯದಾರಭ್ಯ ನಿಮ್ಮ ಏಳ್ಗೆಯನ್ನು ಬಯಸಿದೆ. ಸೇವೆ ಮಾಡಿದೆ. ನೀವು ನನ್ನನ್ನು ನೋಡಿಕೊಂಡಿರಿ. ರಾಜ್ಯ ಲಕ್ಷ್ಮಿ ನಿಮ್ಮನ್ನು ವರಿಸಿದ್ದಾಳೆ. ನೀವು ಅವಳನ್ನು ನಡೆಸಿಕೊಳ್ಳುತ್ತಿರಿ. ಆದರೆ ರಾಜರು ಎಲ್ಲಾ ಕೆಲಸವನ್ನು ನೋಡುವುದಕ್ಕಾಗುವುದಿಲ್ಲ ಒಳ್ಳೆಯ ಪ್ರಧಾನನಿರಬೇಕು, ನನ್ನುಸಿರಿದ್ದಿದ್ದರೆ ಈ

ದೊರೆತನವನ್ನು ಇನ್ನೂ ಬೆಳಗಿಸಿಸಬೇಕೆಂದು ಆಸೆಯಿತ್ತು. ಆದರೆ ನನ್ನ ಸೇವಾ ಪ್ರಾಪ್ತಿ ಇಷ್ಟೆ ಇದ್ದದ್ದು."೨೮ ಆದ್ದರಿಂದ ನೀವು ದಯವಿಟ್ಟು ತಿರುಮಲಾರ್ಯನನ್ನು ಪ್ರಧಾನನನ್ನಾಗಿ ಮಾಡಿಕೊಳ್ಳಿ ಎಂದು ಹೇಳುತ್ತಾನೆ.

ಪಂಡಿತನು ರಾಜನನ್ನೇ ದೇವರು ಅಂತ ಅಂದು ಕೊಂಡು ಅವನನ್ನು ತುಂಬ ಗೌರವ, ಪ್ರೀತಿಯಿಂದ ಕಾಣುತ್ತಿದ್ದನು. ಯಾವಾಗಲು ರಾಜನ ಶ್ರೇಯಸ್ಸನ್ನು ಬಯಸುತ್ತಿದ್ದನು. ಪಂಡಿತನು ತಾನು ಸಾಯುತ್ತೇನೆ ಎಂದು ತಿಳಿದಾಗ ಅವನಿಗೆ ತನ್ನ ಸಾವಿನ ಬಗ್ಗೆ ಯಾವ ಚಿಂತೆಯು ಇಲ್ಲ. ಬದಲಿಗೆ ಅವನಿಗೆ ತಾನು ಸತ್ತು ಹೋದ ಮೇಲೆ ರಾಜನಿಗೆ ತೊಂದರೆಯಾಗ ಬಹುದು ಅಂತ ತಿಳಿದು ಪಂಡಿತನೆ ತಿರುಮಲಾರ್ಯ ಎಂಬ ವ್ಯಕ್ತಿಯನ್ನು ಪ್ರಧಾನವನ್ನಾಗಿ ಆಯ್ಕೆ ಮಾಡುವುದರ ಮೂಲಕ ರಾಜನ ಏಳಿಗೆಯನ್ನು ಬಯಸುತ್ತಿದ್ದನು.

ವಿಶಾಲಾಕ್ಷ ಪಂಡಿತರು ತನ್ನ ಜೀವನದುದ್ದಕ್ಕೂ ಅರಸನನ್ನು ಭಗವಂತನೆಂದು ಭಾವಿಸಿದ್ದರು. "ಇವರು ಮಾತಿನಲ್ಲಿ ನಾಸ್ತಿಕರಂತೆ ಇದ್ದರೂ ಅವರ ಬಾಳೆಲ್ಲ ದೇವರಿದ್ದಾನೆಂದು ಹೇಳುತ್ತಿತ್ತು. ಅವರಂತಹ ಆಸ್ತಿಕರು ಇನ್ನೆಲ್ಲಿ."೨೯ ಎಂದು ತಿರುಮಲಾರ್ಯನು ಹೇಳಿದನು.

ಮನುಷ್ಯರುಗಳಲ್ಲೇ ಉತ್ತಮವಾದ ವ್ಯಕ್ತಿಯನ್ನು ದೇವರು ಎಂದುಕೊಂಡರು ಸಹ ಅವನನ್ನು ಮೀರಿದ ಒಂದು ದೈವ ಶಕ್ತಿ ಇದೆ. ಅದು ನಮ್ಮನ್ನೆಲ್ಲ ಕಾಯುತ್ತಿದೆ ಎಂದು ಪ್ರೀತಿಯಿಂದ ಕಂಡರೂ ಕೂಡ, ಮನುಷ್ಯನಿಗೆ ದೇವರ ಬಗ್ಗೆ ಒಲವು ಹೆಚ್ಚು.

'ಕಲ್ಮಾಡಿಯ ಕೋಣ'ದಲ್ಲಿ ಭಕ್ತರು ತಮ್ಮ ಭಕ್ತಿಯನ್ನು ದೇವರಿಗೆ ತೋರಿಸಲು ಕೋಣವನ್ನು ಬಲಿಕೊಡುತ್ತಾರೆ. ಭಕ್ತರಿಗೆ ಭಗವಂತನಲ್ಲಿ ನಂಬಿಕೆ ಗೌರವ ಇದೆ ಜೊತೆಗೆ ಭಯವೂ ಕೂಡ ಇದೆ. ಆದ್ದರಿಂದ ಅಲ್ಲಿನ ಜನ ದೇವರು ಕೋಪದಿಂದ ನಮಗೇನಾದರು ತೊಂದರೆ ಮಾಡಬಹುದು ಅಂತ ತಿಳಿದು ಭಗವಂತನನ್ನು ತೃಪ್ತಿಪಡಿಸಲು, ಶಾಂತವಾಗಿಸಲು ಕೋಣವನ್ನು ಬಲಿಕೊಡುವ ಪದ್ಧತಿಯನ್ನು ಜಾರಿಗೆ ತಂದರು. ಇಲ್ಲಿ ಭಕ್ತರಿಗೆ ದೇವರಲ್ಲಿ ಭಕ್ತಿಗಿಂತ ಭಯವೇ ಹೆಚ್ಚಾಗಿ ಇರುವುದನ್ನು ಗಮನಿಸಬಹುದು.

ಬಲಿಯಾಗುತ್ತಿದ್ದ ಕೋಣ ತನ್ನ ಜೀವವನ್ನು ಉಳಿಸಿಕೊಳ್ಳಲು ಆ ಆವರಣದಿಂದ ಹೊರಗೆ ಹೋಗುತ್ತದೆ. ಆದರೆ ಅದು ಬಂಡೆಯ ಮೇಲಿಂದ ಬಿದ್ದು ಸಾಯುತ್ತದೆ. ಅದನ್ನು ನೋಡಿದಂತಹ ಭಕ್ತರು ಇದು ಮಾರಿಯ ಅನುಗ್ರಹದಿಂದಲೇ ಆಗಿರುವಂತಹದ್ದು ಎಂದು ತಿಳಿದು, ಆ ಬಂಡೆಯ ಮೇಲೆಯೇ ತಾಯ ಮೂರ್ತಿಯನ್ನು ಕೆತ್ತಿಸಲಾಯಿತು. ಆ ದೇವಿಯನ್ನು ಭಕ್ತರು 'ಕಾಡಮ್ಮ' ಅಂತ ಕರೆದರು. ಇಲ್ಲಿ ಜನಸಾಮಾನ್ಯರು ತಮ್ಮ ಭಕ್ತಿಯನ್ನು ದೇವರಿಗೆ ಕೋಣವನ್ನು ಬಲಿ ಕೊಡುವುದರ ಮೂಲಕ ಅರ್ಪಿಸುತ್ತಾರೆ.

'ಆಚಾರ್ಯರ ಪತ್ನಿ' ಕಥೆಯಲ್ಲಿ ಬರುವ ರಾಮಚಂದ್ರನು ಮತ್ತು ಶ್ಯಾಮಲಾಂಬಿಯು ತನ್ನ ಗುರುಗಳಾದ ರಾಮಾನುಜಾಚಾರ್ಯರನ್ನು ಭಗವಂತನೆಂದೇ ಭಾವಿಸಿದ್ದರು. ಒಂದು ದಿನ ಆಚಾರ್ಯರಿಗೆ ಜ್ವರ ಬಂದಿತು. ಆಗ ರಾಮಚಂದ್ರನೂ ಶ್ಯಾಮಲಾಂಬಿಯೂ ಕ್ಷಣ ಬಿಡದೆ ಗುರುವಿನ ಬಳಿ ಕುಳಿತು ಶುಶ್ರೂಷೆಯನ್ನು ಮಾಡಿದರು. ಜ್ವರದ ಬಾಧೆಯಲ್ಲಿ ಮೈಕೈ ಕಾಲಿನ ಚಳುಕು. ಆಚಾರ್ಯರು ಕಾಲು ಚಳುಕ ಎಂದಾಗ ಶ್ಯಾಮಲಾಂಬಿ ಕಾಲನ್ನು ಹಿಡಿದು ಔಕಿದಳು. ಗುರು 'ಬೇಡ ತಾಯಿ' ಎಂದು ಹೇಳಿದರು. ಅದಕ್ಕೇ "ಭಕ್ತನು ನಿಮ್ಮ ಮಗಳು ನಿಮ್ಮ ಅಳಿಯ ನಿಮ್ಮ ಕೈ ಕಾಲು ನೋವಾದಾಗ ಹಿಸುಕಿದರೆ ತಪ್ಪಾಯಿತೆ? ನಮ್ಮ ಜನ್ಮ ಸಾರ್ಥಕ ಆಗಲಿ, ಇದನ್ನು ಅನುಗ್ರಹಿಸಬೇಕು, ಎಂದನು. ಅಂದೆಲ್ಲ ಭಕ್ತನೊ, ಶ್ಯಾಮಲಾಂಬಿಯೊ, ರಾಮಚಂದ್ರನೊ ಅವರ ಕಾಲನ್ನು ಆಗಾಗ ಔಕುತ್ತಲೇ ಇದ್ದರು.

"ಮಾರನೆಯ ದಿನ ಜ್ವರ ಹಾಗೆಯೇ ಇತ್ತು. ಚಳುಕು ಇನ್ನೂ ಹೆಚ್ಚು. ಮನೆಗೆ ಹೋಗಿ ಅಡಿಗೆ ಮಾಡಿ ಬರುವಷ್ಟು ಹೊತ್ತಲ್ಲದೆ, ಉಳಿದ ವೇಳೆಯನ್ನೆಲ್ಲಾ ಶ್ಯಾಮಲಾಂಬಿ ದೇವಾಲಯದಲ್ಲಿ ಕಳೆದಳು. ಅವಳ ಗಂಡನು ಗುರುಗಳಿಗೆ ಸ್ವಲ್ಪ ಹಾಲು ಕಾಯಿಸುವುದಕ್ಕಾಗಿ, ತನ್ನ ಸ್ನಾನ ಊಟಕ್ಕಾಗಿ ಹೊರಗೆ ಹೋದದ್ದೆಷ್ಟೊ ಅಷ್ಟು ಹೊರತು ಬೇರೆಲ್ಲ ಸಮಯದಲ್ಲಿ ಸೇವೆಗಳನ್ನು ಮಾಡಿ ಅವರನ್ನು ತೃಪ್ತಿ ಪಡಿಸುತ್ತಿದ್ದನು."[೨೬] ಕಣ್ಣಿಗೆ ಕಾಣದ ಭಗವಂತನಿಗಿಂತ ಕಣ್ಣಿಗೆ ಕಾಣುವ ಗುರುಗಳೇ ಭಗವಂತನಿಗಿಂತ ಶ್ರೇಷ್ಠ ಎಂದು ರಾಮಚಂದ್ರನು ಭಾವಿಸಿದ್ದನು.

ಮಾಸ್ತಿಯವರು ಕಥೆಯಲ್ಲಿ ಗುರುವು ಭಗವಂತನಷ್ಟೆ ಶ್ರೇಷ್ಠನಾದವನು. ಗುರುವಿನ ಸೇವೆ ಮಾಡಿದರೇ ಅದು ಭಗವಂತನ ಸೇವೆ ಮಾಡಿದ ಆಗೆ. ಗುರು ಸೇವೆಯಿಂದ ತೃಪ್ತನಾದರೇ ಅದು

ಭಗವಂತನ ತೃಪ್ತನಾದಂತೆ. ಮಾಸ್ತಿಯವರು ಗುರುಗಳನ್ನು ಪೂಜ್ಯಾತಾ ಭಾವನೆಯಿಂದ ಕಾಣಬೇಕು ಎಂದು ಅಭಿಪ್ರಾಯ ಪಡುತ್ತಾರೆ.

'ಬಿಳಿಗಿರಿ ರಂಗ' ಕಥೆಯಲ್ಲಿ ರಂಗಪ್ಪ ಪೆರಿಯ ಅವರ ತಾಯಿ ತಂದೆಗೆ ಒಬ್ಬನೇ ಮಗ. ಇವರು ಬಿಳಿಗಿರಿ ರಂಗನ ಒಕ್ಕಲಿಗರು. ಇವರಿಗೆ ರಂಗನಾಥನಲ್ಲಿ ಬಹು ಭಕ್ತಿ. ಅಪ್ಪ ರಂಗನಾಥನಿಗೆ ಒಂದು ಸಲ ಆನೆ ವಾಹನದ ಉತ್ಸವವನ್ನು ಮಾಡಿಸು ಎಂದು ರಂಗನಿಗೆ ಹೇಳಿದ್ದನು. ರಂಗ ತಂದೆಯ ಆಸೆಯನ್ನು ಪೂರೈಸುವ ಸಲುವಾಗಿ ಇಪ್ಪತ್ತು ವರ್ಷಗಳ ಕಾಲ ಕಾಸನ್ನು ಸಂಗ್ರಹಿಸಿ ರಂಗನಾಥನ ಉತ್ಸವವನ್ನು ಮಾಡಿಸಲು ಸಕಲ ಸಿದ್ಧತೆಗಳನ್ನು ಮಾಡಿಕೊಂಡನು.

ರಂಗಪ್ಪನ ತಾಯಿಗೆ ರಂಗನಾಥನಲ್ಲಿ ವಿಶೇಷವಾದ ಭಕ್ತಿ. ಇವಳು ಉತ್ಸವಕ್ಕೆ ಹೋಗಲಾಗಲಿಲ್ಲ. ತಾನು ಕುಳಿತಲ್ಲೇ ದೇವರನ್ನು ಪ್ರಾರ್ಥಿಸುತ್ತ ನಾನು ನಿನ್ನ ಉತ್ಸವವನ್ನು ನೋಡಲು ಆಗಲಿಲ್ಲವಲ್ಲ ಎಂದು ಹೇಳುತ್ತಿರಬೇಕಾದರೆ, ಅದೇನೋ ಬೆಳಕು ಮಿಂಚಿದಂತಾಯಿತು. ಪೆರಿಯನಿಗೆ ಈ ಮಿಂಚು ಏತರದು ಎಂದು ಆಶ್ಚರ್ಯ ಅವನ ತಾಯಿ ಓ ನನ್ನಪ್ಪ! ದರ್ಶನ ಕೊಟ್ಟೆಯಾ? ಇದಕ್ಕಾಗಿ ಬಂದೆಯಾ ಓ ನನ್ನ ತಂದೆ ಎಂದು ಕೂಗಿದರು, ಆನೆ, ಮೇಲೆ ಕುಳಿತ ಸೋಲಿಗ, ಆ ಒಟ್ಟು ಮೂರ್ತಿಯನ್ನು ಎವೆಯಿಕ್ಕದೆ ನೋಡಿದರು; ಪ್ರಜ್ಞೆ ತಪ್ಪಿ ಪಕ್ಕಕ್ಕೆ ಉರುಳಿದರು. ಸ್ವಲ್ಪ ಹೊತ್ತಿನ ಮೇಲೆ ಮುದುಕಿ ಕಣ್ದೆರೆದರು; ಏನಾಯಿತು ಎಂದು ಕೇಳಿದ್ದಕ್ಕೆ, "ಆನೆಯ ಕೊರಳ ಮೇಲೆ ಮಿಂಚಿನಲ್ಲಿ ಮಾಡಿದ ಮಂಟಪವೊಂದು, ಅದರ ಮಧ್ಯದಲ್ಲಿ ಸೋಲಿಗರ ಚೆಲುವೆಯ ವೇಷದಲ್ಲಿ ಲಕ್ಷ್ಮಿಯ ಸಮೇತ ಈ ಜೊತೆಗೆ ಬಂದ ರಂಗ ಬೆಳಗುತ್ತ ಕುಳಿತ್ತಿದ್ದದ್ದು ಕಂಡಿತು. ಇತ್ತ ಗರುಡ, ಇತ್ತ ಹನುಮ ಕೈ ಮುಗಿದು ನಿಂತಿದ್ದರು."೨೭ ಆನೆಯ ವಾಹನದಲ್ಲಿ ದೇವರನ್ನು ಕಂಡಳು. ಹೀಗೆ ಭಗವಂತನು ಆ ತಾಯಿ ಭಕ್ತಿಗೆ ಮೆಚ್ಚಿ ತಾನೇ ಬಂದು ದರ್ಶನ ಕೊಟ್ಟನು.

ರಂಗಪ್ಪ ತುಂಬ ಹಣ ಖರ್ಚು ಮಾಡಿ ರಂಗನಾಥನ ಉತ್ಸವವನ್ನು ಮಾಡಿಸುತ್ತಿದ್ದನು. ಅದರೆ ಅವನಿಗೆ ಭಗವಂತ ದರ್ಶನ ಕೊಡಲಿಲ್ಲ. ಬದಲಿಗೆ ಭಕ್ತಿ, ಪ್ರೀತಿಯಿಂದ ತಾನು ಕುಳಿತಲ್ಲೇ ಪ್ರಾರ್ಥಿಸಿದ ಆ ಮುದುಕಿಗೆ ಬಂದು ದರ್ಶನವನ್ನು ಕೊಟ್ಟನು. ಮಾಸ್ತಿಯವರು ಇಲ್ಲಿ ಭಕ್ತಿ ಮುಖ್ಯವೇ ಹೊರತು ಒಣ ಅಡಂಬರ ಮುಖ್ಯವಲ್ಲ ಎಂದು ಅಭಿಪ್ರಾಯ ಪಡುತ್ತಾರೆ.

ಒಟ್ಟಾರೆಯಾಗಿ ಮಾಸ್ತಿಯವರು ತಮ್ಮ ಕತೆಯಲ್ಲಿ ಭಕ್ತ ಮತ್ತು ಭಗವಂತನ ಬಗ್ಗೆ ಪ್ರಸ್ತಾಪಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಜನರಲ್ಲಿ ಭಗವಂತನ ಬಗ್ಗೆ ಭಕ್ತಿ ಕಮ್ಮಿಯಾಗುತ್ತಿದೆ. ಈ ಪ್ರಪಂಚ ನಿಂತಿರುವುದೇ ಭಗವಂತನ ಅನುಗ್ರಹದಿಂದ. ಭಗವಂತ ಭಕ್ತನಿಂದ ಬರೀ ಭಕ್ತಿಯನ್ನು ಮಾತ್ರ ಬಯಸುತ್ತಾನೆ ವಿನಃ ಬೇರೆ ಏನನ್ನು ಅವನು ಅಪೇಕ್ಷಿಸುವುದಿಲ್ಲ. ಭಕ್ತನಾದವನು ಭಗವಂತನನ್ನು ತುಂಬ ಪ್ರೀತಿಯಿಂದ, ಕರೆದರೆ ಅವನು ಬಂದು ದರ್ಶನವನ್ನು ಕೊಡುವುದಲ್ಲದೆ ನಮ್ಮ ಕಷ್ಟಗಳನ್ನು ದೂರ ಮಾಡುತ್ತಾನೆ ಎಂದು ಹೇಳುತ್ತಾ, ಮಾಸ್ತಿಯವರು ದೇವರ ಬಗ್ಗೆ ಒಲವನ್ನು ಹೊಂದಲು ಈ ಕಥೆಯಲ್ಲಿ ಹೇಳಿದ್ದಾರೆ.

೨. ಜನ ಜೀವನ

ಮಾಸ್ತಿಯವರು ತಮ್ಮ ಬರಹಕ್ಕೆ ಗ್ರಾಮ ಜೀವನವನ್ನೇ ನೆಲೆ ಗಟ್ಟಾಗಿ ಮಾಡಿಕೊಂಡಿದ್ದಾರೆ. ಹಳ್ಳಿಯ ಸಹಜ ಬದುಕನ್ನು ಚಿತ್ರಿಸುತ್ತ ಹಳ್ಳಿಯಲ್ಲಿ ಎಷ್ಟೆ ಸಣ್ಣತನ ಕ್ರೌರ್ಯ, ದ್ವೇಷ ಆಷಾಡ ಭೂತಿತನ, ಜಾತಿಯ ಮನೋಭಾವನೆ ಇದ್ದರೂ ಕೂಡ ಊರೊಟ್ಟಿನ ಕೆಲಸಗಳಲ್ಲಿ ಅಂದರೆ ಮದುವೆ, ಜಾತ್ರೆ, ಬಯಲಾಟ ಮುಂತಾದ ಸಂದರ್ಭಗಳಲ್ಲಿ ಒಂದಾಗಿ ಸೇರಿ ಎಲ್ಲ ಕೆಲಸಗಳನ್ನು ಮಾಡುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ಮೊದಲು ಅತಿ ಹೆಚ್ಚು ಅವಿದ್ಯಾವಂತರು ಇರುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಎಲ್ಲರೂ ಸ್ವಲ್ಪ ಮಟ್ಟಿಗೆ ವಿದ್ಯಾವಂತರಾಗುತ್ತಿದ್ದಾರೆ. ಗ್ರಾಮದಲ್ಲಿ ಇರುವ ಜನಗಳಲ್ಲಿ ಒಂದು ಉತ್ತಮವಾದ ಬಾಂಧವ್ಯ ಇರುತ್ತದೆ. ಕಷ್ಟ-ಸುಖ ಎಂದರೇ ಒಬ್ಬರಿಗೆ ಒಬ್ಬರು ಸ್ಪಂದಿಸುವ ಮನೋಭಾವ ಇರುತ್ತದೆ. ಆದರೆ ಪಟ್ಟಣಗಳಲ್ಲಿ ಈ ಮನೋಭಾವದ ವ್ಯಕ್ತಿಗಳನ್ನು ಅಷ್ಟಾಗಿ ಕಾಣಲಾಗುವುದಿಲ್ಲ.

ಹಳ್ಳಿಗಳಲ್ಲಿ ಹಿಂದೆ ಬಾಲ್ಯ ವಿವಾಹ ಪದ್ಧತಿ, ಬಹುಪತ್ನಿತ್ವ ಪದ್ಧತಿ ಜಾರಿಯಲ್ಲಿತ್ತು. ಗಂಡಿಗಿರುವಷ್ಟು ಸ್ವತಂತ್ರ ಹೆಣ್ಣಿಗೆ ಇರಲಿಲ್ಲ. ಗಂಡ ತೀರಿ ಹೋದ ಮೇಲೆ ಆ ಹೆಣ್ಣು ಮತ್ತೆ ಮದುವೆಯಾಗುವಂತಿರಲಿಲ್ಲ. ಅವಳು ವಿಧವೆಯಾಗಿಯೇ ತನ್ನ ಜೀವನವನ್ನು ನಡೆಸಬೇಕಾಗಿತ್ತು. ಈ ಎಲ್ಲ ಅಂಶಗಳು ಇಂದಿಗೂ ಸ್ವಲ್ಪ ಮಟ್ಟಿಗೆ ಗ್ರಾಮಗಳಲ್ಲಿ ಕಾಣಸಿಗುತ್ತವೆ. ಗ್ರಾಮಗಳಲ್ಲಿ ಹೆಚ್ಚಾಗಿ ಒಳ್ಳೆಯ ವ್ಯಕ್ತಿತ್ವದ ವ್ಯಕ್ತಿಗಳನ್ನು ಕಾಣಬಹುದು. ಅಂದರೆ ಬೇರೆಯಾರಾದರು ಕಷ್ಟದಲ್ಲಿ ಇದ್ದರೆ ಅವರ ಕಷ್ಟವನ್ನು ವಿಚಾರಿಸಿ ಅವರಿಗೆ ಸಮಾಧಾನ ಮಾಡುವುದನ್ನು, ಸಹಾಯ ಮಾಡುವುದನ್ನು ಕಾಣಬಹುದು. ಮಾಸ್ತಿಯವರು ತಮ್ಮ ಸುತ್ತ ಮುತ್ತಲಿನ ಪ್ರದೇಶದ ಜನ ಜೀವನವನ್ನು ತಮ್ಮ ಕಥೆಯಲ್ಲಿ ಕಟ್ಟಿಕೊಡುವ ಮೂಲಕ ವಾಸ್ತವ ಚಿತ್ರಣಗಳನ್ನು ಚಿತ್ರಿಸಿದ್ದಾರೆ.

ಗ್ರಾಮಗಳಲ್ಲಿ ಇದ್ದಂತಹ ಜನಗಳು ಎಲ್ಲರೂ ಒಂದೇ ರೀತಿಯ ಕೆಲಸಗಳನ್ನು ಮಾಡುತ್ತಿರಲಿಲ್ಲ. ಅವರೆಲ್ಲ ತಮ್ಮಗೆ ವಂಶಪಾರಂಪರ್ಯವಾಗಿ ಬಂದಿರುವ ವೃತ್ತಿಗಳನ್ನು ಮಾಡಿಕೊಂಡು ಜೀವನವನ್ನು ಸಾಗಿಸುತ್ತಿರುವವರೆ ಹೆಚ್ಚು ಜನ. ಹಿಂದೆ ಇಲ್ಲಯ ಜನ ವಿದ್ಯಾವಂತರಾಗುತ್ತಿದ್ದರೇ ಹೊರತು ಅವರು ತಮ್ಮ ಊರನ್ನು ಬಿಟ್ಟು ಹೋಗಲು ಇಚ್ಛಿಸುತ್ತಿರಲಿಲ್ಲ. ಇತ್ತೀಚಿನ ದಿನಗಳಲ್ಲಿ ಅಷ್ಟಾಗಿ ಯಾರು ತಮಗೆ ವಂಶಪಾರಂಪರ್ಯವಾಗಿ ಬಂದಿರುವ ವೃತ್ತಿಯನ್ನು ಮಾಡಿಕೊಂಡು ಇರುವುದಿಲ್ಲ. ಬದಲಿಗೆ ವಿದ್ಯಾವಂತರಾಗಿ ಪಟ್ಟಣಗಳಲ್ಲಿ ಕೆಲಸಕ್ಕೆ ಸೇರಿಕೊಳ್ಳುತ್ತಾರೆ.

ಮಾಸ್ತಿಯವರು ಕಥೆಗಳಲ್ಲಿ ವಂಶಪಾರಂಪರ್ಯವಾಗಿ ಬಂದಿರುವ ವೃತ್ತಿಗಳನ್ನು ಹೆಚ್ಚು ಪ್ರೋತ್ಸಾಹಿಸುತ್ತಾರೆ. ವೆಂಕಟಶಾಮಿಯ ಪ್ರಣಯದಲ್ಲಿ ವೆಂಕಟಿಗನ ತಂದೆ ತನ್ನ ಮಗನನ್ನು ವಿದ್ಯಾವಂತನನ್ನಾಗಿ ಉನ್ನತ ಕೆಲಸಕ್ಕೇ ಸೇರಿಕೊಳ್ಳಬೇಕು ಎಂದು ಬಯಸಿದರೇ, ಅವನ ಮಗ ತನ್ನ ತಂದೆ ಮಾಡುತ್ತಿದ್ದ ಕ್ಷೌರಿಕ ವೃತ್ತಿಯನ್ನೇ ಮುಂದುವರಿಸುವುದಾಗಿ ಹೇಳಿ ಆ ವೃತ್ತಿಯಲ್ಲೇ ತನ್ನ ಯಶಸ್ಸನ್ನು ಪಡೆದುಕೊಳ್ಳುತ್ತಾನೆ. ಈ ರೀತಿಯಾಗಿ ಹಳ್ಳಿಗಳಲ್ಲಿ ಕುಲ ಕಸುಬುಗಳನ್ನು ಮಾಡಿಕೊಂಡಿರುವವರನ್ನು ಕಾಣಬಹುದು.

ಹಳ್ಳಿಗಳಲ್ಲಿ ಜೋಗಿಗಳು ಭಿಕ್ಷೆಯನ್ನು ಬೇಡಿ ತಮ್ಮ ಜೀವನವನ್ನು ಸಾಗಿಸುತ್ತಿದ್ದರು. ಭಿಕ್ಷೆ ಬೇಡುವ ವೃತ್ತಿ ಇವರಿಗೆ ತಲೆ ತಲಾಂತರದಿಂದ ಬಂದಿರುವಂತಹದ್ದು. ಜೋಗಿ ಪದವನ್ನು ಹೇಳುತ್ತ ಊರು ಊರುಗಳಿಗೆ ಹೋಗುತ್ತಿದ್ದುದ್ದನ್ನು. ಅಲ್ಲಿನ ಜನಗಳು ಇವನ ಪದವನ್ನು ಮೆಚ್ಚಿ ಸಂತೋಷಪಟ್ಟು ಭಿಕ್ಷೆ ಹಾಕುತ್ತಿದ್ದರು. ಅಂಜಪ್ಪ ಈ ರೀತಿಯ ಜೋಗಿಯ ವೃತ್ತಿಯನ್ನು ಮಾಡುತ್ತಿದ್ದನು. ಪಟ್ಟಣಗಳಲ್ಲಿ ಇಂತಹ ಜೋಗಿಗಳನ್ನು ಕಾಣಲು ಸಾಧ್ಯವಿಲ್ಲ. ಇವರು ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ತಮ್ಮ ಜೀವನವನ್ನು ನಡೆಸುತ್ತಿದ್ದಾರೆ.

ಗ್ರಾಮಗಳಲ್ಲಿ ಮೇಲ್ವರ್ಗದವರು, ಕೆಳವರ್ಗದವರನ್ನು ಮದುವೆಯಾಗುವಂತೀರಲಿಲ್ಲ. ಈ ಮದುವೆಗೆ ಊರಿನ ಯಜಮಾನರು ಒಪ್ಪುತ್ತಿರಲಿಲ್ಲ. ಏಕೆಂದರೇ ಅವನಿಗೆ ತನ್ನ ಊರಿನ ಮರ್ಯಾದಿ ಮುಖ್ಯವೇ ವಿನಃ, ಅವರ ಪ್ರೀತಿಗೆ ಒಪ್ಪಿ ಮದುವೆ ಮಾಡುವ ಮನಸ್ಸು ಅವರಿಗೆ ಇರಲಿಲ್ಲ. ಏಕೆಂದರೆ ಈ ರೀತಿಯ ಮದುವೆಗಳಿಗೆ ಒಪ್ಪಿದರೇ ಆ ಊರಿನಲ್ಲಿ ಮೇಲ್ವರ್ಗ-ಕೆಳವರ್ಗದವರ ನಡುವೆ ಸಂಘರ್ಷ ಉಂಟಾಗಿ ಊರಿಗೆ ತೊಂದರೆಯಾಗಬಹುದು ಎಂದು. ಈ ಸ್ಥಿತಿಯನ್ನು ಮಾಸ್ತಿ ವೆಂಕಟಶಾಮಿಯ ಪ್ರಣಯ ಕಥೆಯಲ್ಲಿ ವೆಂಕಟಿಗ ಕೆಳವರ್ಗದ ದೊಂಬರ ಹುಡುಗಿಯನ್ನು ಮದುವೆಯಾಗಲು ಮನಸ್ಸು ಮಾಡುತ್ತಾನೆ. ಇಂತಹ ಚಿತ್ರಣಗಳನ್ನು ನಾವು ಇಂದಿಗೂ ನಮ್ಮ ಸಮಾಜದಲ್ಲಿ ಕಾಣಬಹುದು. ಆದರೆ ಹೆಚ್ಚು ಗ್ರಾಮಗಳಲ್ಲಿ ಕಂಡು ಬರುತ್ತಿವೆ.

ನಗರಗಳಲ್ಲಿ ಮತ್ತು ಹಳ್ಳಿಗಳಲ್ಲಿ ಇರುವ ಹಿರಿಯರು ಕಿರಿಯರಿಗೆ ತಮ್ಮ ಅನುಭವಗಳನ್ನು ಹೇಳಿ ಮಾರ್ಗದರ್ಶನವನ್ನು ಮಾಡುತ್ತಿದ್ದರು. ಹೀಗಲೂ ಇದನ್ನು ಕಾಣಬಹುದು. ಜೋಗ್ಯೋರ ಅಂಜಪ್ಪನು ತಾನು ತಪ್ಪು ಮಾಡದಿದ್ದರೂ ಶಿಕ್ಷೆಯನ್ನು ಅನುಭವಿಸಿದ ಪರಿಯನ್ನು ಕುರಿತು ಮ್ಯಾಜಿಸ್ಟ್ರೇಟು ರಂಗಪ್ಪನಿಗೆ ಹೇಳುತ್ತ. ನ್ಯಾಯವನ್ನು ತೀರ್ಮಾನ ಮಾಡುವಾಗ ಬಹಳ ಎಚ್ಚರಿಕೆಯಿಂದ ಸಾಕ್ಷಿಗಳನ್ನು

ಪರಿಶೀಲಿಸಿ ನಂತರ ಶಿಕ್ಷೆಯನ್ನು ಕೊಡು ಇಲ್ಲದಿದ್ದರೆ ನನ್ನಂತಹ ಅಮಾಯಕರುಗಳಿಗೆ ಶಿಕ್ಷೆಯಾಗುತ್ತದೆ ಎಂದು ಬುದ್ಧಿಮಾತನ್ನು ಹೇಳುವುದರ ಮೂಲಕ ಅವನಿಗೆ ಕರ್ತವ್ಯದಲ್ಲಿ ಅರಿವನ್ನು ಮೂಡಿಸಿದನು.

ಯಾರಿಗಾದರೂ ಒಳ್ಳೆಯ ಕೆಲಸ ಸಿಕ್ಕಿದಾಗ ಹಳ್ಳಿಯ ಜನ ಆ ಕೆಲಸ ತಮ್ಮಗೆ, ತಮ್ಮ ಮನೆಯವರಿಗೆ ಸಿಕ್ಕಿದಷ್ಟು ಸಂಭ್ರಮ ಸಡಗರ ಪಡೆತ್ತಾರೆ. ಈ ಸಂಭ್ರಮವನ್ನು ಮಾಸ್ತಿ ತಮ್ಮ ಕಥೆಯಲ್ಲಿ ರಂಗಪ್ಪನಿಗೆ ಬೆಂಚು ಮ್ಯಾಜಿಸ್ಟ್ರೇಟು ಕೆಲಸ ಸಿಕ್ಕಿತು, ಅದಕ್ಕೆ ಆ ಊರಿನ ಜನಕ್ಕೆಲ್ಲಾ ತುಂಬ ಸಂತೋಷ. ನಮ್ಮ ಶ್ಯಾನುಭೋಗರು ಸಜಾಕೊಡುವ ಅಧಿಕಾರನ ಪಡೆದಿದ್ದಾರೆ ಅಂತ ಬಹಳ ತೃಪ್ತಿ ಪಟ್ಟರು ಎಂದು ಹೇಳುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಇದು ಸ್ವಲ್ಪ ಮಟ್ಟಿಗೆ ಕಡಿಮೆಯಾಗುತ್ತ ಬಂದಿದೆ. ಯಾರಿಗಾದರೂ ಉನ್ನತ ಕೆಲಸ ದೊರಕಿದರೇ ಹೊಟ್ಟೆ ಕಿಚ್ಚು ಪಡುವವರೇ ಹೆಚ್ಚಾಗಿ ಕಂಡುಬರುತ್ತಿದ್ದಾರೆ.

ಹಳ್ಳಿಗಳಲ್ಲಿ ಹಿಂದೆ ಕಂದಾಯವನ್ನು ಶಾನುಭೋಗನು ವಸೂಲಿ ಮಾಡುತ್ತಿದ್ದನು. ಇವನು ಕಂದಾಯವನ್ನು ಪಡೆದಿದ್ದರೂ ಸಹ ಇಲ್ಲ ಅಂತ ಹೇಳುವುದರ ಮೂಲಕ ಅಲ್ಲಿನ ರೈತರಿಗೆ ಮೋಸ ಮಾಡುತ್ತಿದ್ದನು. ಕಂದಾಯವನ್ನು ಕಟ್ಟದಿದ್ದ ರೈತನಿಗೆ ಅಮಲ್ದಾರ ಶಿಕ್ಷೆಯನ್ನು ವಿಧಿಸುತ್ತಿದ್ದನು. ಈ ರೀತಿಯ ಶಿಕ್ಷೆಗೆ ಗುರಿಯಾದವನು ಬೈಚೇಗೌಡ. ಇವನು ಕಂದಾಯವನ್ನು ಕಟ್ಟಿದ್ದರೂ ಅಲ್ಲಿನ ಶಾನುಭೋಗ ಕಟ್ಟಿಲ್ಲವೆಂದು ಮೋಸ ಮಾಡಲು ಯತ್ನಿಸುತ್ತಾನೆ. ಇಂತಹ ವ್ಯವಸ್ಥೆ ಈ ಆಧುನಿಕ ಯುಗದಲ್ಲೂ ಹೆಚ್ಚಾಗಿ ಕಾಣಸಿಗುತ್ತಿವೆ. ಒಟ್ಟಿನಲ್ಲಿ ಮಾಸ್ತಿಯವರು ಸರ್ಕಾರದ, ಕೆಲಸಗಳನ್ನು ನಿರ್ವಹಿಸುತ್ತಿರುವ ಅಧಿಕಾರಿಗಳ ವಿರುದ್ಧ ಆಕ್ರೋಶವನ್ನು ವ್ಯಕ್ತಪಡಿಸುತ್ತಾರೆ.

ಗ್ರಾಮಗಳಲ್ಲಿರುವ ಜನರು ತಮ್ಮ ಮನರಂಜನೆಗಾಗಿ ನಾಟಕ, ಬಯಲಾಟಗಳನ್ನು ಆಡುತ್ತಿದ್ದರು. ಜೊತೆಗೆ ಗೌಡರು ಬೇರೆ ಊರುಗಳಿಂದ ದೊಂಬರವರನ್ನು ಕರೆಸಿ ಪ್ರದರ್ಶವನ್ನು ಕೊಡಿಸುತ್ತಿದ್ದರು. ದೊಂಬರವರು ಹಳ್ಳಿಗೆ ಬಂದಾಗ ಹಳ್ಳಿಯ ಜನರಿಗೆ ವಿಶೇಷವಾದ ಸಂಭ್ರಮ, ಮಾಸ್ತಿಯವರು ಈ ದೊಂಬರಾಟದ ಬಗ್ಗೆ ತಮ್ಮ ಕಥೆಯಲ್ಲಿ ಹೇಳುತ್ತಾರೆ.

ಮಾಸ್ತಿ ಅವರು ಗ್ರಾಮಗಳಲ್ಲಿ ತುಂಬ ತಾಳ್ಮೆಯಿಂದ ಜನ ಇರುತ್ತಾರೆ. ಇವರು ಬೇರೆಯವರ ವಿಚಾರಗಳನ್ನು ಅಥವಾ ಸಮಸ್ಯೆಗಳನ್ನು ಕುರಿತು ವಿಚಾರಿಸಿ ಅವರಿಗೆ ಸರಿಯಾದ ಮಾರ್ಗದರ್ಶನ

ನೀಡುವುದರ ಜೊತೆಗೆ ಅವರು ಆ ಸಮಸ್ಯೆಯಿಂದ ಹೊರಬರುವುದಕ್ಕೆ ಸ್ವಲ್ಪ ಮಟ್ಟಿಗೆ ಸಹಾಯಕರಾಗಿರುತ್ತಾರೆ. ಮೊಸರಿನ ಮಂಗಮ್ಮನು ತನ್ನ ಮಗ-ಸೊಸೆಯಿಂದ ತಿರಸ್ಕೃತಳಾಗಿ ಒಂಟಿಯಾಗಿ ಜೀವನವನ್ನು ಮಾಡುತ್ತಿದ್ದಳು. ಇವಳು ತನ್ನ ಯಜಮಾನಿಗೆ ಮನೆಯ ವಿಚಾರಗಳನ್ನು ಹೇಳುತ್ತಿದ್ದಳು. ಅದನ್ನೆಲ್ಲ ತುಂಬ ತಾಳ್ಮೆಯಿಂದ ಆ ಯಜಮಾನಿ ಕೇಳಿ ಅದಕ್ಕೆ ಸರಿಯಾದ ದಾರಿಯನ್ನು ತೋರಿಸುತ್ತಿದ್ದಳು. ಇದರಿಂದಾಗಿ ಮಂಗಮ್ಮಳು ತನ್ನ ಕುಟುಂಬದಲ್ಲಿ ಸಿಕ್ಕದ ನೆಮ್ಮದಿ ಅವಳಿಗೆ ಆ ಯಜಮಾನಿಯ ಮಾತುಗಳಿಂದ ಸಿಕ್ಕುತ್ತಿತ್ತು. ಅವಳ ಮಾತುಗಳನ್ನು ಕೇಳಿ ಮಂಗಮ್ಮ ತೃಪ್ತಿಪಟ್ಟು ಕೊಳ್ಳುತ್ತಿದ್ದಳು.

ಈ ರೀತಿ ತಾಳ್ಮೆಯಿಂದ ಕುಳಿತು ವಿಚಾರಿಸುವ ವ್ಯವಧಾನ, ನಮ್ಮ ಆಧುನಿಕ ಜಗತ್ತಿನ ಜನಗಳಿಗೆ ತುಂಬ ಕಮ್ಮಿ ಎಂದೇ ಹೇಳಬಹುದು.

ಗ್ರಾಮಗಳಲ್ಲಿ ಇರುವ ಜನರು ಬರೀ ಮನುಷ್ಯರ ಜೊತೆ ಮಾತ್ರ ತಮ್ಮ ಬಾಂಧವ್ಯವನ್ನು ಇಟ್ಟುಕೊಂಡಿರಲಿಲ್ಲ. ಅವರು ತಾವು ಸಾಕುವ ಪ್ರಾಣಿಯ ಬಗ್ಗೆಯು ತುಂಬ ಪ್ರೀತಿಯನ್ನು ಇಟ್ಟುಕೊಂಡಿರುತ್ತಾರೆ. ಈ ರೀತಿ ಬಾಂಧವ್ಯವಿರುವ ಚಿತ್ರಣವನ್ನು ಮಾಸ್ತಿ 'ಕಲ್ಮಾಡಿಯ ಕೋಣ' ಎಂಬ ಕಥೆಯಲ್ಲಿ ತಂದಿದ್ದಾರೆ. ಮುನಿಯನ ಕೋಣವನ್ನು ಮಾರಿಗೆ ಬಲಿಕೊಡಲು ಅಲ್ಲಿನ ಗೌಡ ತೀರ್ಮಾನಿಸುತ್ತಾರೆ. ಅದಕ್ಕೆ ಊರಿನ ಜನ ಎಲ್ಲ ಒಪ್ಪಿ ಆ ಕೋಣವನ್ನು ಸಿದ್ಧಪಡಿಸುತ್ತಾರೆ. ಆಗ ಮುನಿಯ "ಮನೆಯ ಮುಂದೆ ಕೋಣವನ್ನು ನಿಲ್ಲಿಸಿ ಅದರ ಮೈ ಕೈ ಕಾಲನ್ನೆಲ್ಲ ತಿಕ್ಕಿದನು. ಅವನ ಹೆಂಡತಿ ಅಳುತ್ತ ಬಂದು ಅದರ ಗೊರಸಿಗೆ ನೀರು ಹೊಯ್ದಳು; ಅದರ ಮೈಯನ್ನೆಲ್ಲ ತಡವಿದಳು; ಅದರ ಮುಸುಡಿಯನ್ನು ತನ್ನ ಮೈಗೆ ಮುಟ್ಟಿಸಿಕೊಂಡು ಅಪ್ಪಿದಳು; ಅದು ತನ್ನ ಮಗುವಿಗೆ ಸಮನೋ ಎಂಬಂತೆ ಅದರ ಮುಖಕ್ಕೆ ಒಂದು ಮುತ್ತನ್ನು ಕೊಟ್ಟಳು. ಇದು ಸರಿ ಎಂಬುದು ಧೈರ್ಯವಾಗಿ ಮುನಿಯ ತಾನೂ ಅದಕ್ಕೆ ಒಂದು ಮುತ್ತನ್ನು ಕೊಟ್ಟನು."೨೮ ಮನುಷ್ಯರಿಗೆ ಪ್ರಾಣಿಯ ನಡುವೆ ಇರುವ ಪ್ರೀತಿಯನ್ನು ಮಾಸ್ತಿ ಚಿತ್ರಿಸಿದ್ದಾರೆ.

ಊರಿನ ಗೌಡ ಮುನಿಯ ಕೋಣದ ಬಗ್ಗೆ ಇಟ್ಟಿದ ಪ್ರೀತಿಯನ್ನು ನೋಡಿ ಮರುಕಪಡುತ್ತಾನೆ. ಆದರೆ ಅವನಿಗೆ ಭಯ. ಏಕೆಂದರೆ ಕೋಣವನ್ನು ಬಲಿಕೊಡದೆ ಹೋದರೆ ಮಾರಿಕಾದೇವಿ ಕೋಪ ಮಾಡಿಕೊಂಡು ಊರಿಗೆ ತೊಂದರೆ ಮಾಡಬಹುದು ಎಂದು. ಇಲ್ಲಿ ಮುನಿಯನೊಬ್ಬನ ದುಃಖಕ್ಕೆ

ಮರುಗಿದರೆ ಮುಂದೆ ಊರಿಗೆ ತೊಂದರೆಯಾಗುತ್ತದೆ ಎಂದು ತಿಳಿದನು. ಗೌಡನಿಗೆ ತನ್ನ ಊರಿನ ಬಗ್ಗೆ ಇರುವ ಕಾಳಜಿಯನ್ನು ಗಮನಿಸಬಹುದು.

ಹಳ್ಳಿಗಾಡಿನ ಜನರು ತುಂಬ ಸುಸಂಸ್ಕೃತರು. ಕಲ್ಮಾಡಿಗೆ ನಿರೂಪಕರು ಹೋಗಿರುತ್ತಾರೆ ಆಗ ಅಲ್ಲಿನ ಜನತೆ ಕೋಣವನ್ನು ಅಟ್ಟಿಸಿಕೊಂಡು ಹೋಗುತ್ತಿರುತ್ತಾರೆ. ಏನು ವಿಷಯ ಎಂದು ತಿಳಿಯಬೇಕು ಅಂತ ನಿರೂಪಕರಿಗೆ ಅನಿಸುತ್ತದೆ. ಆದರೆ ಎತ್ತುಗಳು ಬಿಸಿಲಿನಲ್ಲಿ ಬಳಲುತ್ತವೆ ಎಂದು ಯೋಚಿಸಿ ಮನೆಗೆ ಹೋಗಲು ನಿರ್ಧರಿಸುತ್ತಾರೆ. ಇಲ್ಲಿ ಬಿಸಿಲಿನಲ್ಲಿ ಸ್ವಲ್ಪ ಒತ್ತು ನಿಂತು ಕೊಂಡರೆ ಎತ್ತು ದಣಿಯುತ್ತದೆ ಎಂದು ಅದರ ಬಗ್ಗೆ ಮರುಕಪಡುವ ವ್ಯಕ್ತಿ ಒಂದು ಕಡೆಯಾದರೆ. ಕೋಣವನ್ನು ಬಲಿಕೊಡಲೇ ಬೇಕು ಎಂದು ಅದನ್ನು ಓಡಿಸಿಕೊಂಡು ಬರುತ್ತಿರುವ ವ್ಯಕ್ತಿಗಳು ಮತ್ತೊಂದೆಡೆ. ಇಲ್ಲಿ ನಿರೂಪಕರು ಸುಸಂಸ್ಕೃತರು ಅಂತ, ಕಲ್ಮಾಡಿಯ ಜನತೆಯನ್ನು ಸುಸಂಸ್ಕೃತರಲ್ಲ ಅಂತ ಹೇಳಲು ಸಾಧ್ಯವಾಗುವುದಿಲ್ಲ. ಏಕೆಂದರೆ ಅವರಿಗೆ ಮಾರಿಕಾದೇವಿ ಕೋಪದಿಂದ ನಮಗೇನಾದರೂ ತೊಂದರೆ ಮಾಡಬಹುದೇನೋ ಎಂಬ ಭಯ ಅಷ್ಟೆ.

ಊರುಗಳಲ್ಲಿ ಇರುವ ವಿದ್ಯಾವಂತರು ಅಲ್ಲಿನ ಜನತೆ ಏನಾದರೂ ಹೊಸ ವಸ್ತುಗಳನ್ನು ಕೊಂಡುಕೊಂಡರೆ ಅಥವಾ ಹೊಸ ಬಟ್ಟೆಯನ್ನು ತೊಟ್ಟರೆ ಅಪಹಾಸ್ಯವನ್ನು ಮಾಡುತ್ತಿದ್ದರು. ಏಕೆಂದರೆ ಆ ಹೊಸ ವಸ್ತುವನ್ನು ಉಪಯೋಗಿಸುವ ಅರ್ಹತೆ ಇರುವುದು ವಿದ್ಯಾವಂತರುಗಳಿಗೆ ಮಾತ್ರ. ಅವಿದ್ಯಾವಂತರುಗಳು ಹಿಂದೆ ಹೇಗೆ ಇದ್ದರೋ ಹಾಗೆಯೇ ಇರಬೇಕು ಎಂದು ಇವರು ಬಯಸುತ್ತಾರೆ. ಮಂಗಮ್ಮ ಹೊಸ ಕುಪ್ಪಸವನ್ನು ತೊಟ್ಟಾಗ ಅಲ್ಲಿನ ಜನತೆ ಹಾಸ್ಯ ಮಾಡುತ್ತಾರೆ.

ಒಟ್ಟಾರೆ ಮಾಸ್ತಿ ಹಳ್ಳಿಗಳ ಜನಸಾಮಾನ್ಯರ ಬದುಕು, ಅಲ್ಲಿ ಪರಸ್ಪರ ಅವಲಂಬನೆಯ ಬದುಕು. ನಂಬಿಕೆ ಇವುಗಳ ಬಗ್ಗೆ ವಿಶೇಷವಾದ ಆಧಾರವಿದೆ. ಹಳ್ಳಿಯ ಬದುಕಿನಲ್ಲಿ ಕಮ್ಮಾರನಿಗೆ, ಒಕ್ಕಲಿಗನಿಗೆ, ಬಡಗಿಗೆ, ಕುಂಬಾರನಿಗೆ ಹೀಗೆ ಸ್ಥಾನಮಾನವಿದೆ, ಎಂದು ಹೇಳುತ್ತ ಇವರು ಅಷ್ಟಾಗಿ ಪಟ್ಟಣ ಜೀವನದ ಬಗ್ಗೆ ಹೇಳಿಲ್ಲ. ಅಂದ ಮಾತ್ರಕ್ಕೇ ಅವರಿಗೆ ಅಲ್ಲಿನ ಜೀವನದ ಬಗ್ಗೆ ತಿಳಿದೇ ಇಲ್ಲ ಎಂದು ಹೇಳಲಾಗದು. ಗ್ರಾಮದ ಜೀವನ ಎಲ್ಲ ಜೀವನಕ್ಕಿಂತ ಉತ್ತಮವಾದದ್ದು ಎಂದು ಹೇಳುವುದರ ಜೊತೆಗೆ ತೀರ ಭದ್ರವಾಗಿ ಉಳಿದುಕೊಂಡಿರುವ ಅಂಧಸಂಪ್ರದಾಯಗಳ ಬಗೆಗೆ ವಿಡಂಬನೆಯನ್ನು ಮಾಡುತ್ತಾರೆ.

೮. ಕುಟುಂಬ ವ್ಯವಸ್ಥೆ

ಮನುಷ್ಯ ಸಂಘ ಜೀವಿ. ಇವನು ಒಂಟಿಯಾಗಿ ಬದುಕಲು ಸ್ಯಾಧ್ಯವಿಲ್ಲ; ಅದಕ್ಕೇ ಅವನು ಒಂದು ಕುಟುಂಬದ ವ್ಯವಸ್ಥೆಯ ಒಳಗಡೆಯೇ ತನ್ನ ಬದುಕನ್ನು ರೂಪಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಾನೆ. ಹಿಂದೆ ಅವಿಭಕ್ತ ಕುಟುಂಬ ವ್ಯವಸ್ಥೆ ಇತ್ತು. ಆದರೆ ಅದು ಇತ್ತೀಚಿನ ದಿನಗಳಲ್ಲಿ ಸ್ವಲ್ಪ ಮಟ್ಟಿಗೆ ಹಳ್ಳಿಗಳಲ್ಲಿ ಕಾಣಸಿಗುತ್ತದೆ. ಅವಿಭಕ್ತ ಕುಟುಂಬಗಳಲ್ಲಿ ಹಿರಿಯ ವ್ಯಕ್ತಿ ಹೇಳಿದ ರೀತಿಯಲ್ಲಿಯೇ ಉಳಿದವರು ಕೇಳಬೇಕಾಗುತ್ತಿತ್ತು. ಸ್ತ್ರೀಯರಿಗೆ ಯಾವ ಸ್ವತಂತ್ರವೂ ಇರುತ್ತಿರಲಿಲ್ಲ, ಪುರುಷರು ಹೇಳಿದ ರೀತಿಯಲ್ಲಿಯೇ ಇವರು ನಡೆದು ಕೊಳ್ಳಬೇಕಾಗುತ್ತಿತ್ತು. ಆದರೆ ಇಂದು ಈ ವ್ಯವಸ್ಥೆ ಬದಲಾಗಿ ಎಲ್ಲಾ ಅವಿಭಕ್ತ ಕುಟುಂಬಗಳು ಚಿಕ್ಕ ಚಿಕ್ಕ ಕುಟುಂಬಗಳಾಗಿ ಹೊಡೆದು ಹೋಗುತ್ತಿವೆ.

ಅಜ್ಜಿ-ತಾತಂದಿರ ಮಾರ್ಗದರ್ಶನದಿಂದಾಗಿ ಮೊಮ್ಮಕ್ಕಳು ಒಳ್ಳೆಯ ರೀತಿಯಲ್ಲಿ ರೂಪಗೊಳ್ಳುತ್ತಿದ್ದರು. ಆದರೆ ಇಂದು ಎಷ್ಟೋ ಮೊಮ್ಮಕ್ಕಳಿಗೆ ಅಜ್ಜಿ-ತಾತಂದಿರ ಸಂಪರ್ಕವೇ ಇಲ್ಲದಿರುವುದು ಕಂಡು ಬರುತ್ತದೆ. ಚಿಕ್ಕ ವಯಸ್ಸಿನಿಂದ ಸಾಕಿ ಸಲುಹಿದ ತಾಯಿ-ತಂದೆಯನ್ನು ಮಕ್ಕಳು ನೋಡಿಕೊಳ್ಳಲಾಗದೆ ಇಂದು ವೃದ್ಧಾಶ್ರಮಗಳಿಗೆ ಸೇರಿಸುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಒಂದು ಕುಟುಂಬ ಎಂದರೆ ತಂದೆ, ತಾಯಿ, ಮಗ, ಮಗಳು ಅಷ್ಟೆ ಇರುವುದನ್ನು ಕಾಣಬಹುದು. ಕುಟುಂಬದ ಪರಿಸರ ಸರಿಯಿದ್ದರೆ ಅಲ್ಲಿ ಬೆಳೆಯುವ ವ್ಯಕ್ತಿ ಒಳ್ಳೆಯ ರೀತಿಯಲ್ಲಿ ಬೆಳೆಯುತ್ತಾರೆ. ಇಲ್ಲದಿದ್ದರೇ ಕಳ್ಳ, ದರೋಡೆಕೋರರಾಗಿ ಬೆಳೆಯುವುದನ್ನು ಕಾಣಬಹುದು. ಸಮಾಜಕ್ಕೆ ಉತ್ತಮ ಮನುಷ್ಯನನ್ನು ಕೊಡುವಲ್ಲಿ ಕುಟುಂಬ ಪ್ರಧಾನ ಪಾತ್ರವಹಿಸುತ್ತಿದೆ.

ಕುಟುಂಬಗಳಲ್ಲಿ ಗಂಡ ಹೆಂಡತಿಯ ಸಂಬಂಧವನ್ನು, ತಾಯಿ ಮಗನ ಬಾಂಧವ್ಯವನ್ನು, ತಂದೆ ಮಗಳ ಪ್ರೀತಿಯನ್ನು ಒಟ್ಟಾರೆ ಎಲ್ಲರ ಬಾಂದವ್ಯವನ್ನು ಕಾಣಬಹುದು. ಆದರೆ ಇದು ಸ್ವಲ್ಪ ಮಟ್ಟಿಗೆ ಇತ್ತೀಚಿನ ದಿನಗಳಲ್ಲಿ ಇಂತಹ ಬಾಂಧವ್ಯ ಕಡಿಮೆಯಾಗುತ್ತಿದೆ ಎಂದು ಹೇಳಬಹುದು.

'ಇನ್ನೊಂದು ಹಳೆಯ ಕತೆ'ಯಲ್ಲಿ ಬರುವ ಪರಾಶರಭಟ್ಟರ ತಂದೆ ಯಾವಾಗಲೂ ಆಚಾರ್ಯರ ಸೇವೆಯಲ್ಲಿದುದ್ದರಿಂದ ಮನೆಯಲ್ಲಿ ದೇವರ ಸೇವೆಯನ್ನು ನಡೆಸುವುದು, ಭಾಗವತ ಸೇವೆಯನ್ನು ಮಾಡುವುದು, ಮಗನನ್ನು ಸಾಕುವುದು, ಮೊದಲಾದ ಎಲ್ಲ ಕೆಲಸವನ್ನು ಮಾಡುತ್ತ,

ಗೃಹಿಣಿಯಾದವಳು ಯಾವ ರೀತಿ ಮನೆಯನ್ನು ನಿರ್ವಹಿಸುತ್ತಿದಳೋ ಆ ರೀತಿಯಾಗಿ ಪರಾಶರ ಭಟ್ಟರ ತಾಯಿ ತನ್ನ ಕುಟುಂಬವನ್ನ ವ್ಯವಸ್ಥಿತವಾಗಿ ನಡೆಸುವುದರ ಜೊತೆಗೆ ತನ್ನ ಮಗನಿಗೆ ಗುರುವಾಗಿ ವಿದ್ಯೆಯನ್ನು ಕಲಿಸುತ್ತಿದ್ದಳು. ಈ ವ್ಯವಸ್ಥೆಯನ್ನು ನಾವು ಇಂದಿಗೂ ಹಳ್ಳಿಗಳಲ್ಲಿಯೂ ಪಟ್ಟಣಗಳಲ್ಲಿಯೂ ಕಾಣಬಹುದು.

ತಾಯಿಯಾದವಳು ತನ್ನ ಮಗ ತಪ್ಪು ದಾರಿ ಹಿಡಿದರೇ ಯಾವ ರೀತಿ ಅವನನ್ನು ತಿದ್ದುವ ಪ್ರಯತ್ನವನ್ನು ಮಾಡುತ್ತಾಳೋ, ಅದನ್ನು 'ವೆಂಕಟಶಾಮಿಯ ಪ್ರಣಯ'ದ ಕಥೆಯಲ್ಲಿ ಕಾಣಬಹುದು. ವೆಂಕಟಶಾಮಿ ಕೆಳವರ್ಗದ ಹೆಣ್ಣನ್ನು ಪ್ರೀತಿಸಿ ಮದುವೆಯಾಗಲು ಒಪ್ಪಿರುತ್ತಾನೆ. ಆದರೆ ಈ ವಿಷಯ ತಿಳಿದ ವೆಂಕಟಶಾಮಿಯ ತಾಯಿ ಮಗನನ್ನು ಕುರಿತು "ಆ ದೊಂಬರ ಹುಡುಗೀನ ಕಂಡು ಮರುಳಾದ ಅಂತಾರಲ್ಲೋ. ಯಾವಾಗಲೂ ಅವರ ಜೊತೆಯಲ್ಲೇ ಇರುತೀಯಂತಲ್ಲ?, ನೀನು ಹೀಗೆ ಮಾಡಿದರೆ ಹೆತ್ತೋರು ಸಾಕಿದೋರ ಮಾರ್ಯಾದಿ ಏನು ಆಗಬಹುದು, ಜಾತಿಯೋರು ಏನೆಂದಾರು ಅಂತ ಭಯ ಬೇಡವಾ?."೨೮ ನೀನು ಈ ರೀತಿ ಮಾಡುತ್ತಿರುವುದು ಸರಿಯಲ್ಲ.

ಒಳ್ಳೆಯ ರೀತಿಯಲ್ಲಿ ಬದುಕಿ ನಮಗೆ ಒಳ್ಳೆಯ ಹೆಸರನ್ನು ತಂದುಕೊಡು. ನೀನು ಆ ದೊಂಬರ ಹುಡುಗಿಯನ್ನು ಬಿಟ್ಟು ಬಿಡು, ನೀನು ನಮ್ಮ ಕುಲದ ಹೆಣ್ಣನ್ನು ಮದುವೆಯಾಗಿ ನೆಮ್ಮದಿಯಿಂದ ಸಂಸಾರ ಮಾಡಿಕೊಂಡು ಹೋಗು ಎಂದು ಬುದ್ಧಿವಾದವನ್ನು ಹೇಳಿದಳು. ತಾಯಿಯನ್ನು ಮೊದಲ ಗುರು ಅನ್ನುತ್ತಾರೆ, ಅದಕ್ಕೇ ಅವಳು ತಪ್ಪುಮಾಡಿದಾಗ ತಿದ್ದುವುದು. ಸರಿಯಾದ ದಾರಿಯನ್ನು ತೋರಿಸುವುದು ತಾಯಿಯ ಕರ್ತವ್ಯ.

ಮಂಗಮ್ಮ ಮೊಸರನ್ನು ಮಾರಿ ಬಂದ ಹಣದಲ್ಲಿ ತನ್ನ ಕುಟುಂಬವನ್ನು ನಿರ್ವಹಿಸುತ್ತಿದ್ದಳು. ಇವಳಿಗೆ ಒಬ್ಬ ಮಗನೂ ಇದ್ದ. ಮಂಗಮ್ಮ ತನ್ನ ಮಗನಿಗೆ ಮದುವೆ ಮಾಡಿ ಸೊಸೆ ಮನೆಗೆ ಬಂದಳು, ತನ್ನ ಅಧಿಕಾರವನ್ನು ಅವಳಿಗೆ ಬಿಟ್ಟುಕೊಡುವ ಮನಸ್ಸಿಲ್ಲದೇ ತಾನೇ ಆ ಕುಟುಂಬದ ನಿರ್ವಹಣೆಯನ್ನು ಮಾಡುತ್ತಿದ್ದಳು.

ಒಂದು ದಿನ ಮಂಗಮ್ಮ ಯಜಮಾನಿಗೆ ತನ್ನ ವಿಚಾರವನ್ನೆ ಹೇಳುತ್ತ, "ನನ್ನ ಸೊಸೆ ಅರಿಯದ ಕಂದ ಏನೋ ಮಾಡ್ತು ಅಂತ ಅದನ್ನು ಹೊಡೆದಳು. ಅದಕ್ಕೇ ಮಂಗಮ್ಮ "ಯಾಕೆ ಗಯ್ಯಾಳೀ,

ರಕ್ಕಸಿ ಹಂಗೆ ಅರಿಯದ ಕಂದನ್ನ ಹೊಡೀತಾ ಇದ್ದೀಯಾ ಅಂದೆ. ನನಗೆ ಎದುರು ಬಿದ್ಲು. ತಾರು ಮಾರು ನಾನು ಬೈದು, ಇದೇನು ಇದು! ನಿನ್ನ ಗಂಡನ್ನ ಹೆತ್ತ ತಾಯಿ ನಾನು, ನನ್ನ ಇಷ್ಟು ಮಾತು ಅಂತೀಯಾ, ಆಗಲಿ ಅವನೇ ಬರಲಿ ಕೇಳ್ಕೋಣ ಅಂತ ಹೇಳಿದೆ. ಸರದಾರ ಮನೆಗೆ ಬಂದ. 'ನೋಡಪ್ಪಾ ಹುಡುಗನ್ನ ಸುಮ್ಮನೆ ಬಡೀತಾಳೆ ಬ್ಯಾಡ ಅಂದ್ರೆ ನನ್ನ ಬೈತಾಳಲ್ಲೋ. ನೀನು ಹೆಂಡ್ರಿಗೆ ಒಸಿ ಬುದ್ಧಿ ಹೇಳು', ಅಂದೆ ಅವಳು 'ಏನ್ನು ನನಗೆ ಬುದ್ಧಿ ಹೇಳೋದು? ಹೈದ ತಂಟೆ ಮಾಡಿದ್ರೆ ಬ್ಯಾಡ ಅನ್ನೋಕೆ ನನಗೆ ಯದಿಕ್ಯಾರಿ ಇಲ್ಲೋ? ನೀನು ಗಂಡನ್ನ ಹೆತ್ತಂಗೆ ನಾನು ಈ ಮೊಗಾನ್ನೂ ಹೆರಲಿಲ್ಲವೋ? ಯಾತರದದು ಬುದ್ಧಿ ನನಗೆ ಹೇಳ ಬೇಕಾಗಿರೋದು', ಅಂದ್ಲು."೩೦

ಮಾತಿಗೆ ಮಾತು ಬೆಳೆದು ಮಂಗಮ್ಮ ಬಾಯಿ ತಪ್ಪಿ 'ಏನೋ ಇದು? ಹೆಂಡ್ರು ನಿಗ್ಗೆ ಮಂಕು ಬುದೀ ಆಕಿದಾಳೆ. ಅವಳು ಕಂದನ್ನ ಬಡಿದರೂ ಸರಿಯೆ, ನನ್ನ ಬೈದರೂ ಸರಿಯೆ. ನಾಳೆ ಅವಳು ಮನೆ ಬಿಟ್ಟು ಕಳುಹಿಸು ಅನ್ನುತಾಳೆ ಆಗ ನನ್ನನ್ನು ಮನೆ ಬಿಟ್ಟು ಕಳಸುತ್ತೀಯ ಎಂದು ಹೇಳಿದಳು. ಅದಕ್ಕೇ ಮಗ "ಇನ್ನೇನು ಮಾಡೋಕಾಗ್ತದವ್ವ, ಹೆಂಡ್ತಿ ಇದ್ರೆ ನಾನಿರೋದಿಲ್ಲ ನಾನಿದ್ರೆ ಹೆಂಡ್ತಿ ಇರೋದು ಬೇಡ ಅಂದ್ರೆ, ದಿಕ್ಕಿಲ್ಲದ ಹೆಂಗ್ಸು ಅವಳ; ಏನು ಮಾಡೋದು? ಅಂದ, 'ನನಗ್ಯಾರಪ್ಪ ದಿಕ್ಕು' ಅಂದೆ, ನಿನಗೇನವ್ವ ದನ ಅದೆ, ಕರ ಅದೆ, ದುಡ್ಡು ಅದೆ". ಅದಕ್ಕೇ ನಾನು ಬೇರೆ ಅಡುಗೆ ಮಾಡಿಕೊಂಡು ಇದ್ದೀನಿ ಅವ್ವ ಎಂದಳು.

ಕಥೆಗಾರರು ಕುಟುಂಬಗಳಲ್ಲಿ ಇಂದಿಗೂ ನಡೆಯುತ್ತಿರುವ ವಾಸ್ತವ ಅಂಶಗಳನ್ನು ಪ್ರಸ್ತಾಪಿಸಿದ್ದಾರೆ. ಮಂಗಮ್ಮಳನ್ನು ಚಿಕ್ಕ ವಯಸ್ಸಿನಲ್ಲೇ ಅವಳ ಗಂಡ ಬಿಟ್ಟು ಹೋದ. ಆದರೆ ಇವಳು ಬೇರೆ ಮದುವೆಯಾಗಲಿಲ್ಲ. ಆದರೆ ಮಗನಿಗೆ ತಾಯಿಗಿಂತ ಹೆಂಡತಿಯೇ ಮುಖ್ಯ.

ತನ್ನ ಮಗನನ್ನು ಸಾಕಿ ಸಲುಹಿ ಬೆಳೆಸಿದ ತಾಯಿಗೆ ಮುಪ್ಪಿನಲ್ಲಿ ಆಶ್ರಯವಾಗಿರದೆ, ಹೆಂಡತಿಯೇ ಮುಖ್ಯ ಅಂದುಕೊಂಡು ತಾಯಿಯನ್ನು ಮನೆಯಿಂದ ಹೊರ ಹಾಕುತ್ತಾನೆ. ಅದಕ್ಕೆ ಮಂಗಮ್ಮ ಯಾಕೆ ಹೊಡೆಯುತ್ತೀಯ ಅಂತ ಕೇಳಿದಕ್ಕೆ, ಸೊಸೆ ಜಗಳವನ್ನೇ ಮಾಡಿದಳು. ಆಗ ಅಲ್ಲಿ ಮಂಗಮ್ಮಳ ಮಗ ಬಂದು ಹೆಂಡತಿಯನ್ನು ಬೈಯದೇ ತಾಯಿಯನ್ನು ಬೈಯುತ್ತಾನೆ. ಆಗ ಮಂಗಮ್ಮ ಬಾಯಿ ತಪ್ಪಿ ಏನೋ ಇದು? ಹೆಂಡ್ರು ನಿಂಗೆ ಮಂಕು ಬೂದೀ ಆಕಿದಾಳೆ! ಅವಳು ಕಂದನ್ನ ಬಡಿದರೂ ಸರಿಯೆ, ನನ್ನ ಬೈದರೂ ಸರಿಯೇ? ನಾಳೆ ಅವಳು ಮನೆ ಬಿಟ್ಟು ಕಳುಹಿಸು

ಅನ್ನುತ್ತಾಳೆ. ಹಾಗಾದರೆ ನನ್ನನ್ನು ಮನೆ ಬಿಟ್ಟು ಕಳಸುತ್ತೀಯ ಎಂದು ಕೇಳಿದ್ದಕ್ಕೆ, ಹೌದು ಅಂತ ಹೇಳಿ. ಮನೆಯಿಂದ ಹೊರ ಆಕಿದ ಎಂದು ಹೇಳಿದಳು. ಮಗನು ತನ್ನನ್ನು ಸಾಕಿ ಸಲುಹಿ ಬೆಳೆಸಿದ ತಾಯಿಗೆ ಮುಪ್ಪಿನಲ್ಲಿ ಆಶ್ರಯವಾಗಿರದೇ ಹೆಂಡತಿಯೇ ಮುಖ್ಯ ಅಂದ.

ಈ ಸ್ಥಿತಿ ಕುಟುಂಬಗಳಲ್ಲಿ ಇದೆ. ಇಂದು ಅತ್ತೆ ಸೊಸೆಯಂದಿರ ಜಗಳಗಳಿಂದಾಗಿ ಕುಟುಂಬದಲ್ಲಿ ಬಿರುಕುಗಳು ಉಂಟಾಗುತ್ತಿವೆ. ಈ ವ್ಯವಸ್ಥೆ ಪಟ್ಟಣ ಮತ್ತು ಹಳ್ಳಿಯ ಎರಡು ಕುಟುಂಬಗಳಲ್ಲೂ ಕಂಡುಬರುತ್ತಿವೆ.

ತಾಯಂದಿರು ತನ್ನ ಮಕ್ಕಳನ್ನು ಚಿಕ್ಕಂದಿನಿಂದ ತುಂಬ ಪ್ರೀತಿಯಿಂದ ಸಾಕಿ ಸಲುಹಿರುತ್ತಾರೆ. ಆದರೆ ಅವರು ಬೆಳೆದು ದೊಡ್ಡವರಾದ ಮೇಲೆ ಮುಪ್ಪಿನಲ್ಲಿ ತಾಯಿಗೆ ಆಶ್ರಯವಾಗಿಯರದೆ, ಅವಳನ್ನು ಮನೆಯಿಂದ ಹೊರಕ್ಕೆ ಹಾಕುತ್ತಾರೆ. ಇಂತಹ ಸ್ಥಿತಿಯಲ್ಲಿ ಮಂಗಮ್ಮ ಕೂಡ ಇದ್ದಾಳೆ. ಇವಳು ಮಗನಿಂದ ದೂರವಾಗಿ ಒಂಟಿಯಾಗಿ ಜೀವನವನ್ನು ನಡೆಸುತ್ತಿರುತ್ತಾಳೆ. ತನ್ನ ಜೀವನವನ್ನು ಸಾಗಿಸಲು ಅವಳು ಎಂದಿನಂತೆ ಮೊಸರನ್ನು ಮಾರಲು ಹೋಗುತ್ತಾಳೆ. ಅಲ್ಲಿ ಮನೆಯ ಯಜಮಾನಿಯ ಮಗುವನ್ನು ನೋಡಿ "ಅವ್ವಾ ಬಂಗಾರದಂತ ಮಗನ್ನ ಹೆತ್ತು ಕೊಂಡಿದೀಯಾ. ನಿನ್ನ ಗುಣ ಹೆಂಗೋ ಆ ಮೊಗಾನೂ ಹಂಗೇ ಐತೆ. ಆದರೆ ಇದೆಲ್ಲಾ ಏನವ್ವ? ಹುಡುಗ ಬೆಳೆಯೋ ತಂಕಾನೆ. ಬೆಳೆದ ಮೇಲೆ ಯಾವಳೋ ಬರ್ತಾಳೆ. ಈಗ ಅಮ್ಮ ಅಮ್ಮ ಅಂತ ಇರೋ ಮಗ ಆಗ ಅಮ್ಮನ್ನ ನೀನು ಇದ್ದೀಯಾ ಸತ್ಯಾ ಅಂತ ಕೇಳೊಲ್ಲ."[೩೦] ಎಂದು ತನ್ನ ಪರಿಸ್ಥಿತಿಯನ್ನು ಹೇಳಿಕೊಳ್ಳುತ್ತಾಳೆ. ಮಾಸ್ತಿ ಅವರು ಹಳ್ಳಿಯ ಜೀವನದ ಚಿತ್ರಣವನ್ನು ಹೇಳುತ್ತ, ಗಂಡು ಮಕ್ಕಳು ಇತ್ತೀಚಿನ ದಿನಗಳಲ್ಲಿ ಮಾಡುತ್ತಿರುವ ವಾಸ್ತವ ಸಂಗತಿಗಳನ್ನು ಹೇಳಿದ್ದಾರೆ.

ಗಂಡನ ಮನೆಯಲ್ಲಿ ಇರುವ ಹೆಣ್ಣು ಮಕ್ಕಳು ತನ್ನ ತವರಿಗೆ ಹೋಗಲು ಹಂಬಲಿಸುವ ಪರಿಯನ್ನು ಮಾಸ್ತಿಯವರು ಕಾಳಿದಾಸ ಬರೆದ ಶಕುಂತನ ನಾಟಕವನ್ನು ತೆಗೆದುಕೊಂಡು ಶಕುಂತಲೆ ದುಶ್ಯಂತನನ್ನು ಮದುವೆಯಾಗಿ ಅವಳು ಅವನನ್ನು ಸೇರಿದ ಮೇಲೆ ಮಾಸ್ತಿ ಅವಳ ಆಸೆಯನ್ನು ಅಂದರೆ ತಾಯಿ ಮನೆಗೆ, ಹೋಗಬೇಕು ಎಂದು ಹಂಬಲಿಸುವುದನ್ನು 'ಹೇಮ ಕೂಟದಿಂದ ಬಂದ ಮೇಲೆ ಕತೆಯಲ್ಲಿ' ಶಕುಂತಲೆ ರಾಜನ ಹೆಂಡತಿಯಾಗಿ ತನ್ನ ತವರಿಗೆ ಹೋಗುತ್ತಾಳೆ. ಅಲ್ಲಿ

ಅವಳನ್ನು ಎಲ್ಲರೂ ಪ್ರೀತಿಯಿಂದ ಸ್ವಾಗತಿಸುತ್ತಾರೆ. ಅಲ್ಲಿ ಅವಳಿಗೆ ತನ್ನ ಬಾಲ್ಯದ ನೆನಪೆಲ್ಲವನ್ನು ಮಾಡಿಕೊಂಡು ತುಂಬ ಸಂತೋಷದಲ್ಲಿ ಕಾಲಕಳೆಯುತ್ತಾಳೆ.

ಶಕುಂತಲೆಯು ತನ್ನ ಮಗ ಭರತನು ಯಾವಾಗಲು ತನ್ನ ಬಳಿಯೇ ಇರಬೇಕು. ಒಂದು ಕ್ಷಣ ಮರೆಯಾದರೂ ಅದನ್ನು ಸಹಿಸಿಕೊಳ್ಳಲು ಅವಳಿಗೆ ಆಗುವುದಿಲ್ಲ. ತಾಯಿಗೆ ತನ್ನ ಮಗನ ಬಗ್ಗೆ ಇರುವ ಮಮತೆಯನ್ನು ಕಾಣಬಹುದು. ಹೌದು ಇದು ವಾಸ್ತವವಾಗಿ ಸತ್ಯ. ತಾಯಿಗೆ ಗೊತ್ತು ತನ್ನ ಮಗು ಬೆಳೆದು ದೊಡ್ಡವನಾದ ಮೇಲೆ ತನ್ನನ್ನು ತಿರಸ್ಕರಿಸಬಹುದು ಎಂದು. ಆದರೂ ಕೂಡ ತಾಯಿ ತನ್ನ ಮಗನಿಗೆ ಪ್ರೀತಿಯನ್ನು ಧಾರೆ ಎರೆದು ಬೆಳೆಸುತ್ತಾಳೆ.

ಮಗನು ತಾಯಿಯ ಮೇಲೆ ಇಟ್ಟಿರುವ ಪ್ರೀತಿಯನ್ನು ಬಿಳಿಗಿರಿ ರಂಗ ಎಂಬ ಕಥೆಯಲ್ಲಿ ಕಾಣಬಹುದು. ರಂಗಪ್ಪ ಪೆರಿಯ ರಂಗನಾಥನ ಉತ್ಸವವನ್ನು ನೋಡಿ ಸಂತೋಷ ಪಡುವುದಕ್ಕೇ ಬದಲು ಅವನು ತನ್ನ ತಾಯಿ ನನ್ನ ಜೊತೆ ಉತ್ಸವವನ್ನು ನೋಡಲು ಬಂದಿರಲಿಲ್ಲ ಅದಕ್ಕೆ ಸ್ವಲ್ಪ ಬೇಜಾರು ಮಾಡಿಕೊಂಡು ರಂಗಪ್ಪ "ಮುದುಕಿ ತನ್ನ ಜೊತೆಗೆ ಇದ್ದಿದ್ದರೆ ಅವಳು ಎಷ್ಟು ಸಂತೋಷ ಪಡುತ್ತಿದ್ದಳು ಆದರೆ ತಾಯಿಗೆ ಇದನ್ನೆಲ್ಲ ನೋಡಲು ಆಗಲಿಲ್ಲವಲ್ಲ ಎಂದು ಅಂದುಕೊಂಡನು. ಬೇಕಾದವರು ಜೊತೆಗಿಲ್ಲದೆ ಹೋದರೆ ಮೃಷ್ಟಾನ್ನ ರುಚಿಸುತ್ತದೆಯೇ ಅದೇ ರೀತಿ ಉತ್ಸವವು ರಂಗಪ್ಪನಿಗೆ ಅರುಚಿಯಾಯಿತು."೩೧ ರಂಗಪ್ಪ ತನ್ನ ತಾಯಿಯ ಬಗ್ಗೆ ತುಂಬ ಪ್ರೀತಿಯನ್ನು ಇಟ್ಟು ಕೊಂಡಿದ್ದನು.

ಕಥೆಗಾರರು ಕಥೆಯಲ್ಲಿ ರಂಗಪ್ಪನ ತರಹದ ವ್ಯಕ್ತಿಗಳು ಕೂಡ ನಮ್ಮ ಸಮಾಜದಲ್ಲಿ ಇದ್ದಾರೆ ಎಂದು ಗುರುತಿಸಿ ಹೇಳುತ್ತ, ಇವರಿಂದಾಗಿ ಎಷ್ಟೋ ಜನ ತಾಯಂದಿರಿಂದ ಒಳ್ಳೆಯ ಬದುಕು, ಕುಟುಂಬ ದೊರಕಿದಂತಾಗುತ್ತದೆ. ಈ ತಾಯಂದಿರಿಂದ ಕಿರಿಯರಿಗೆ ಒಳ್ಳೆಯ ಮಾರ್ಗದರ್ಶನ ದೊರಕುವುದರಿಂದ ಆ ಮಕ್ಕಳ ಜೀವನ ಉತ್ತಮವಾಗುವುದರ ಜೊತೆಗೆ ಅವರ ಭವಿಷ್ಯ ಚೆನ್ನಾಗಿ ರೂಪುಗೊಳ್ಳುತ್ತದೆ ಎಂದು ಆಶೆಯನ್ನು ಪಡುತ್ತಾರೆ.

ಒಟ್ಟಿನಲ್ಲಿ ಮಾಸ್ತಿಯವರ ಕಥೆಯಲ್ಲಿ ಕುಟುಂಬ ವ್ಯವಸ್ಥೆಯ ಬಗ್ಗೆ ಹೇಳುತ್ತ ಅಲ್ಲಿನ ಜನರ ಬಾಂಧವ್ಯ ಯಾವ ರೀತಿ ಇದೆ ಎಂಬುವುದನ್ನು ಹೇಳುತ್ತಾರೆ. ಕುಟುಂಬಗಳು ಒಳ್ಳೆಯ ರೀತಿಯಲ್ಲಿ

ರೂಪುಗೊಳ್ಳಬೇಕು ಎಂದು ಹೇಳುತ್ತ ತಂದೆ ತಾಯಿಯಂದಿರನ್ನು ಮಕ್ಕಳು ತುಂಬ ಅಕ್ಕರೆಯಿಂದ ಪ್ರೀತಿಯಿಂದ ನೋಡಿಕೊಳ್ಳಬೇಕು ಎಂದು ಅಭಿಪ್ರಾಯ ಪಡುತ್ತಾರೆ.

ಅಡಿಟಿಪ್ಪಣಿ

೧. ಶೈಲಜಾ ಉಡಚಣ, ನಾನು ನಾವು ಮತ್ತು ಸಾಹಿತ್ಯ, ಪುಟ-೧೬೭

೨. ಜಿ.ಎಸ್. ಸಿದ್ಧಲಿಂಗಯ್ಯ, ಶ್ರೀನಿವಾಸ, ಪುಟ-೯೧

೩. ಮಾಸ್ತಿ, ಸಣ್ಣ ಕತೆಗಳು ಸಂಪುಟ ೨, ಪುಟ-೬

೪. ಅದೇ, ಪುಟ-೩೧

೫. ಅದೇ, ಪುಟ-೮೫

೬. ಮಾಸ್ತಿ, ಸಣ್ಣ ಕತೆಗಳು ಸಂಪುಟ ೩, ಪುಟ-೪೪

೭. ಮಾಸ್ತಿ, ಸಣ್ಣ ಕತೆಗಳು ಸಂಪುಟ ೨, ಪುಟ-೯೭

೮. ಅದೇ, ಪುಟ-೨೧೯

೯. ಅದೇ, ಪುಟ-೨೧೫

೧೦. ಮಾಸ್ತಿ, ಸಣ್ಣ ಕತೆಗಳು ಸಂಪುಟ ೩, ಪುಟ-೪೧

೧೧. ಅದೇ, ಪುಟ-೨೮೪

೧೨. ಮಾಸ್ತಿ, ಮಾಸ್ತಿ ಕೆಲವು ಕತೆಗಳು, ಪುಟ-೧

೧೩. ಎಲ್.ಎಸ್. ಶೇಷಗಿರಿರಾವ್, ಮಾಸ್ತಿ ಜೀವನ ಮತ್ತು ಸಾಹಿತ್ಯ, ಪುಟ-೧೩೧

೧೪. ಮಾಸ್ತಿ, ಸಣ್ಣ ಕತೆಗಳು ಸಂಪುಟ ೩, ಪುಟ-೨೨೨

೧೫. ಮಾಸ್ತಿ, ಸಣ್ಣ ಕತೆಗಳು ಸಂಪುಟ ೨, ಪುಟ-೨

೧೬. ಅದೇ, ಪುಟ-೧೯೨

೧೭. ಅದೇ, ಪುಟ-೧೧೫

೧೮. ಮಾಸ್ತಿ, ಸಣ್ಣ ಕತೆಗಳು ಸಂಪುಟ ೩, ಪುಟ-೨೫೫

೧೯. ಅದೇ, ಪುಟ-೨೭೮

೨೦. ಮಾಸ್ತಿ, ಸಣ್ಣ ಕತೆಗಳು ಸಂಪುಟ ೨, ಪುಟ-೧೯

೨೧. ಅದೇ, ಪುಟ-೧೫೨

೨೨. ಅದೇ, ಪುಟ-೧೪

೨೩. ಅದೇ, ಪುಟ-೨೩

೨೪. ಅದೇ, ಪುಟ-೧೨೯

೨೫. ಅದೇ, ಪುಟ-೧೩೨

೨೬. ಅದೇ, ಪುಟ-೨೧೫

೨೭. ಮಾಸ್ತಿ, ಸಣ್ಣ ಕತೆಗಳು ಸಂಪುಟ ೩, ಪುಟ-೨೩೦

೨೮. ಮಾಸ್ತಿ, ಸಣ್ಣ ಕತೆಗಳು ಸಂಪುಟ ೨, ಪುಟ-೧೯೮

೨೯. ಅದೇ, ಪುಟ-೮೫

೩೦. ಅದೇ, ಪುಟ-೧೩೮

೩೧. ಮಾಸ್ತಿ, ಸಣ್ಣ ಕತೆಗಳು ಸಂಪುಟ ೩, ಪುಟ-೨೨೪

ಅಧ್ಯಾಯ –೫
ಸಾಂಸ್ಕೃತಿಕ ಅಧ್ಯಯನ.

ಸಂಸ್ಕೃತಿ ಎನ್ನುವುದು ಜನಾಂಗವೊಂದರ ಮೂಲಧಾತು. ಅದು ಮನುಷ್ಯನ ಸಂಬಂಧ ಮತ್ತು ಭಾವನೆಗಳನ್ನು ಆಶ್ರಮಿಸಿ ರೂಪುಗೊಂಡಿರುತ್ತದೆ. "ಯಾವುದಾದರೂ ನಿರ್ದಿಷ್ಟವಾದ ಸಮಾಜದಲ್ಲಿ ಸಮಗ್ರವಾಗಿ ಸಂಚಿತವಾಗಿರುವ ಲೌಕಿಕ ಆಶೋತ್ತರಗಳನ್ನು, ಭಾವನೆಗಳು, ಲಾಂಛನಗಳು, ನಂಬಿಕೆಗಳು, ರಸಭಾವ, ಮನೋಭಾವಗಳು, ಮೌಲ್ಯಗಳು, ಸಾಮಾಜಿಕ ಆಚಾರ ಪದ್ಧತಿಗಳು, ಇವೆಲ್ಲ ತಲೆಮಾರಿನಿಂದ ತಲೆಮಾರಿಗೆ ಹರಿದು ಬರುವುದೇ ಸಂಸ್ಕೃತಿ".

ಸಂಸ್ಕೃತಿಯು ಧರ್ಮದಿಂದ ದೂರ ಉಳಿದರೇ ಅದಕ್ಕೇ ಬೆಳವಣಿಗೆಯೂ ಇಲ್ಲ, ಅಸ್ತಿತ್ವವೂ ಕೂಡ ಇರುವುದಿಲ್ಲ. ಆದ್ದರಿಂದ ಸಂಸ್ಕೃತಿಯು ಧರ್ಮದ ಉತ್ಪನ್ನವಾಗಿರುತ್ತದೆ. ಇಲ್ಲವೇ ಧರ್ಮವೇ ಸಂಸ್ಕೃತಿಯನ್ನು ಉತ್ಪನ್ನವಾಗಿಸುತ್ತದೆ. ಸಂಸ್ಕೃತಿಯು ಮನುಷ್ಯನು ಒಳ್ಳೆಯ ರೀತಿಯಲ್ಲಿ ಬೆಳೆಯಲು ಪ್ರೇರೆಪಿಸುತ್ತದೆ. ಮನುಷ್ಯನು ದಿನನಿತ್ಯ ವ್ಯವಹರಿಸುವ ಭೌತಿಕವೆನಿಸುವ ಎಲ್ಲ ಸಂಗತಿಗಳೂ ಕೂಡ ಸಂಸ್ಕೃತಿಗೆ ಸಂಬಂಧಿಸಿದವು ಎನ್ನಬಹುದು. ಸಂಸ್ಕೃತಿಯು ಮಾನವನ ಜೀವನದ ಒಂದು ಭಾಗವೇ ಆಗಿದೆ.

ಸಂಸ್ಕೃತಿಯನ್ನು "ವ್ಯಕ್ತಿ ಮತ್ತು ಸಮಾಜಗಳ ಎರಡು ನೆಲೆಯಲ್ಲಿ ಅಧ್ಯಯನ ಮಾಡಬೇಕಾಗುತ್ತದೆ. ಯಾಕೆಂದರೆ ಇವೆರಡನ್ನೂ ಬಿಟ್ಟು ಸಂಸ್ಕೃತಿ ತನಗೆ ತಾನೇ ಪೂರ್ಣವಾಗಲು ಸಾಧ್ಯವಿಲ್ಲ. ಈ ಎರಡೂ ಗ್ರಹಿಕೆಗಳು ಒಂದನ್ನೊಂದು ನಿರ್ದೇಶಿಸುತ್ತವೆ."

ಇಂದಿನ ಪೀಳಿಗೆಯ ಜನತೆಯಲ್ಲಿ ಸಂಸ್ಕೃತಿ ಅಥವಾ ಪರಂಪರೆಯ ಬಗ್ಗೆ ಅರಿವು ಮತ್ತು ಕಾಳಜಿಗಳು ಕಡಿಮೆಯಾಗುತ್ತಿವೆ. ಜನಪ್ರಿಯ ಸಂಸ್ಕೃತಿಗೆ ಒಗ್ಗಿ ಹೋಗಿರುವ ಹಾಗೂ ತತ್ಕಾಲದ ಸುಖಾಪೇಕ್ಷೆಗಳನ್ನು ನಿರೀಕ್ಷಿಸುವ ತರುಣ ಜನಾಂಗ ಸಂಪ್ರದಾಯಿಕ ಸಮುದಾಯ ವಿರುದ್ಧ ಬಂಡೆದ್ದು ಸಂಸ್ಕೃತಿಯನ್ನು ತಿರಸ್ಕರಿಸುತ್ತಿರುವಂತೆ ಕಂಡುಬರುತ್ತಿದೆ.

ಕಥೆಗಾರರ ಕಥೆಗಳಲ್ಲಿ ಕಂಡುಬರುವ ಹಬ್ಬ-ಸಂಪ್ರದಾಯ, ದೆವ್ವ, ವೃತ್ತಿಗಳು ಎಂಬ ಸಾಂಸ್ತ್ರತಿಕ ಅಂಶಗಳನ್ನು ಗುರುತಿಸಿ ಹೇಳುವ ಪ್ರಯತ್ನ ಮಾಡಿದ್ದೇನೆ.

೧. ಹಬ್ಬ – ಸಂಪ್ರದಾಯ

ನಾಗರೀಕತೆಯ ಪ್ರಭಾವವಿಲ್ಲದೇ ಇರುವ ಯಾವುದೇ ಸಮಾಜವನ್ನು ಸಂಪ್ರದಾಯಗಳ ತೌರು ಎಂದು ಹೇಳಬಹುದು. ಪ್ರಾಯಶಃ ಯಾವುದೇ ಸಂಪ್ರದಾಯಗಳು ಮೂಲತಃ ಒಳ್ಳೆಯ ಉದ್ದೇಶದಿಂದ ಕೂಡಿದ್ದು ಕ್ರಮೇಣ ಶೋಷಣೆಯನ್ನು ರೂಢಿಸಿಕೊಳ್ಳುತ್ತವೆ. ಮನುಷ್ಯನಾದವನು ತಾನು ಬದುಕಿರುವ ವ್ಯವಸ್ಥೆಯಲ್ಲಿ ನೆಮ್ಮದಿಯ ಜೀವನ ನಡೆಸುವ ಸಲುವಾಗಿ ಗುರು ಹಿರಿಯರಿಗೆ, ದೇವರುದಿಂಡರಿಗೆ, ಅಗೋಚರ ಶಕ್ತಿಗಳಿಗೆ ಹಾಗೂ ಸೂರ್ಯ, ಚಂದ್ರ ನಕ್ಷತ್ರ, ಭೂಮಿಯನ್ನು ತುಂಬ ಗೌರವದಿಂದ ಕಾಣುತ್ತಾನೆ. ಕೆಲವಕ್ಕೆ ಹೆದರಿಕೊಂಡು, ಕೆಲವು ವೈಚಿತ್ರ್ಯಗಳಿಗೆ ಬೆರಗಾಗಿ ಕೃತಜ್ಞತೆಯ ಸಂಕೇತವಾಗಿ ಗೌರವವನ್ನು ಸಲ್ಲಿಸುತ್ತಾನೆ. ಭೂಮಿ ಬಂದಾಗ ಹಬ್ಬವನ್ನು ಆಚರಿಸುತ್ತಾರೆ.

ಹಳ್ಳಿಗಳಲ್ಲಿ ಯಾವುದೇ ಸಾಮೂಹಿಕವಾದ ಹಬ್ಬ ಹರಿದಿನ, ಸಂಪ್ರದಾಯಗಳಲ್ಲಿ ಸಾಮಾನ್ಯವಾಗಿ ಎಲ್ಲರೂ ಭಾಗವಹಿಸುತ್ತಾರೆ. ಇಂತಹ ಸಂದರ್ಭಗಳಲ್ಲಿ ಕೋಪಮಾಡಿಕೊಂಡು ಹಬ್ಬಕ್ಕೆ ಹೋಗದೇ ಇರುವವರು ತುಂಬ ವಿರಳ. ಅಥವಾ ಇಲ್ಲವೇ ಇಲ್ಲ ಎನ್ನಬಹುದು. ಅನೂಚಾನವಾಗಿ ನಡೆದು ಬಂದಿರುವ ಪದ್ಧತಿಯನ್ನು ಚಾಚೂ ತಪ್ಪದೆ ನಡೆಸುತ್ತಾರೆ. ಅದು ಸರಿಯಿರಲಿ ತಪ್ಪಿರಲಿ ಅವರಿಗೆ ಮುಖ್ಯವಲ್ಲ. ಇಂಥದ್ದರಲ್ಲಿ 'ಕಾಮನ ಹಬ್ಬದ' ಪದ್ಧತಿಯು ಒಂದು.

ಕಾಮನ ಹಬ್ಬದ ದಿನ ಮನೆಮನೆಗೂ ಹೋಗಿ ಮನೆಯ ಮುಂದೆ ಬಾಯಿ ಬಡಿದುಕೊಂಡು ಸೌದೆಯ ಭಿಕ್ಷೆ ಕೇಳುವುದು ವಾಡಿಕೆ. ಈ ಹಬ್ಬದ ದಿನ ಮನೆಯ ಮುಂದೆ ಬಾಯಿ ಬಡಿದು ಕೊಂಡರೆ ವರ್ಷವೂ ನಗುತ್ತ ಇರಬಹುದು ಎಂದು ನಮ್ಮ ಜನರಲ್ಲಿ ನಂಬಿಕೆ ಇದೆ. ಹುಡುಗರು ಸೌದೆ ರಾಶಿಯನ್ನು ಊರಿನ ಪಕ್ಕದ ಒಂದು ಬಯಲಿನಲ್ಲಿ ಹಾಕಿ ಕಾಮನನ್ನು ಸುಡಲಾಗುತ್ತಿತ್ತು. ಆಗ ಅದರ "ಬೆಳದಿಂಗಳಲ್ಲಿ ಮಂಕಾಗಿದ್ದ ಮನೆ ಮರ ಎಲ್ಲದರ ಮೇಲೆ ಉರಿದು ಬೆಳಕು ಬಿದ್ದಾಗ ನಮಗೆ ಇದೇನು ಭೂಲೋಕವೋ ಇನ್ನೆಲ್ಲಾದರೂ ಇದ್ದೇವೋ ಎನ್ನುವಂತೆ ತೋರುತ್ತಿತ್ತು. ನಾವು ಹಾಕಿದ್ದ ರಾಶಿಯು ದೊಡ್ಡದಾಗಿತ್ತು. ಯಜ್ಞೇಶ್ವರನು ಆ ರಾತ್ರಿ ಊರ ಕಸವನ್ನೆಲ್ಲಾ ಸುಟ್ಟು ಬಿಟ್ಟನು. ಜ್ಞಾನದಿಂದ ನಿರ್ಮಲವಾದ ಮನಸ್ಸಿನಲ್ಲಿ ಮೋಹ ಜಾಲ ಉರಿಯುವಂತೆ ಊರ ಹಳೆಯ ಮೊರ, ಪರಕೆ ಹಳೆಯ ಮಕ್ಕರಿ ಹಳೆಯ ಕಸವೆಲ್ಲ ಆ ಬೆಳದಿಂಗಳ ರಾತ್ರಿಯಲ್ಲಿ ಉರಿದು ಹೋಯಿತು. ಮಾರನೆ ದಿನ ಊರಲ್ಲೆಲ್ಲ ಹೊಸ ಮೊರ. ಹೊಸ ಪರಕೆ, ಹೊಸ ಮಕ್ಕರಿ; ಅಥವಾ ಹಳೆಯದು ಇದ್ದರೆ ತಿಳಿದೂ

ತಿಳಿದೂ ಕಸವನ್ನು ಬಿಡಲಾರದೆ ಕಟ್ಟಿ ಕೊಂಡವರ ಮನೆಗಳಲ್ಲಿ. ಊರಿನ ಕಸವನ್ನು ಸುಡುವುದಕ್ಕೆ ಯತ್ನ ಮಾಡಿದ್ದಲ್ಲಿ ಊರಿನ ಬದುಕು ಅಂದು ಆ ರಾತ್ರಿಯಂತೆ ಊರೆಲ್ಲ ಸೊಗಸಿನಿಂದ ಕಾಣುತ್ತಿತ್ತು.

ಸುಗ್ಗಿಯು ಕಳೆದ ಮೇಲೆ ರೈತರಿಗೆ ಬಿಡುವಾಗುತ್ತದೆ. ಅವರು ನೆಮ್ಮದಿಯಿಂದ ಉಸಿರಾಡುತ್ತಾರೆ. ಬದುಕಿನ ಎಲ್ಲ ಕಷ್ಟಗಳೂ ತಕ್ಕ ಮಟ್ಟಿಗೆ ಬಗೆ ಹರಿದಿರುತ್ತವೆ. ಅಂಥ ಕಾಲದಲ್ಲಿ ತಮ್ಮ ನೆಂಟರು ಇಷ್ಟರನ್ನು ತುಂಬ ಆತ್ಮೀಯತೆಯಿಂದ ಕಾಣುತ್ತಾರೆ. ದೇವರು ದಿಂಡರುಗಳನ್ನು ಮಾಡುತ್ತಾ ಅವರು ಹೊತ್ತಿದ್ದ ಹರಕೆಗಳನ್ನು ತೀರಿಸುತ್ತಾ ಜೊತೆ ಜೊತೆಗೆ ಹಬ್ಬಗಳನ್ನು ಆಚರಿಸುತ್ತಾರೆ.

ಗಿರಿಜವ್ವೆ ಮತ್ತು ಲಕುಮವ್ವೆ ಇವರು ನಿಜಗಲ್ಲಿನ ರಾಣಿಯರು. ಇವರು ರಾಮರಸ ನಾಯಕನು ತೀರಿ ಹೋದ ಮೇಲೆ ವಿಧವೆಯರಾಗುತ್ತಾರೆ. ಗಿರಿಜವ್ವೆ ಇಷ್ಟೆಲ್ಲ ತೊಂದರೆಗೆ ಕಾರಣನಾದ ಕಸ್ತೂರಿಯನ್ನು ಕೊನೆಗಾಣಿಸುತ್ತಾಳೆ. ಅದಕ್ಕೇ ಊರಿನ ಜನರೆಲ್ಲ "ಕಿರಿಯ ರಾಣಿಯನ್ನು ಪ್ರೀತಿಯಿಂದ ನೆನೆದ ಬಹುವರ್ಷ ಊರ ದೇವಿಯೆಂದು ಪೂಜಿಸಿ ಅವಳ ಹೆಸರಲ್ಲಿ ವರ್ಷ ವರ್ಷವೂ ಹಬ್ಬವನ್ನು ಮಾಡುತ್ತಿದ್ದರು". ಈ ಹಬ್ಬಗಳಿಗೆ ಊರಿನ ಎಲ್ಲ ಜನಗಳು ಭಾಗವಹಿಸುತ್ತಿದ್ದರು.

ಹಳ್ಳಿಗರ ಪಾಲಿಗೆ ಹಬ್ಬಗಳು ಕೇವಲ ಹಬ್ಬವಾಗಿರದೇ ಸ್ವರ್ಗ ಸುಖ ಲಭ್ಯವಾದಂತೆ ತನುಮನಗಳೆರಡರ ಹಬ್ಬವಾಗಿರುತ್ತಿತ್ತು. ಸಾಮನ್ಯವಾಗಿ ಒಕ್ಕಲುತನ ಮಾಡುವವರಿಗೆ ವರ್ಷ ಪೂರ್ತಿ ಕೆಲಸವಿರುತ್ತದೆ. ಅದಕ್ಕೆಂದೇ ಪೂರ್ವಿಕರು ಈ ಬಾಳಿನ ಏಕತಾನತೆಯನ್ನು ನಿವಾರಿಸಲು ಆಗಾಗ್ಗೆ ಹಬ್ಬ ಉತ್ಸವಗಳನ್ನು ಇಟ್ಟು ಕೊಂಡಿರುತ್ತಾರೆ. ಅಡಿಗೆ ಮಾಡಿಕೊಂಡು ಊಟ ಮಾಡುತ್ತಾರೆ. ವರ್ಷ ಪೂರ್ತಿ ಬರೀ ಕೆಲಸದಲ್ಲೇ ಕಾಲ ಕಳೆಯುತ್ತಿದ್ದರು. ಆದ್ದರಿಂದ ಹಬ್ಬದ ದಿನ ಎಣ್ಣೆ ಸ್ನಾನ ಮಾಡಿ ಹೊಸ ಬಟ್ಟೆಯನ್ನು ತೊಟ್ಟು ಸಂಭ್ರಮಿಸುತ್ತಾರೆ.

ಗ್ರಾಮೀಣ ಪ್ರದೇಶದ ಜನಗಳು ತಾವು ಹಬ್ಬವನ್ನು ಏಕೆ ಮಾಡುತ್ತಿದ್ದೇವೆ ಇದು ಸರಿಯೇ, ಅದಕ್ಕೇ ಸರಿಯಾದ ಹಿನ್ನೆಲೇ ಇದೆಯೇ ಎಂಬ ಬಗ್ಗೆ ಯಾವ ಯೋಚನೆಯನ್ನು ಮಾಡದೇ ತಮ್ಮ ಹಿಂದಿನ ತಲೆಮಾರಿನವರು ಹಬ್ಬವನ್ನು ಮಾಡುತ್ತಿದ್ದರೂ ಅದಕ್ಕೇ ನಾವೂ ಮಾಡಬೇಕು ಅಂತ ತಿಳಿದು, ಆ ಹಬ್ಬಗಳನ್ನು ಮುಂದುವರಿಸಿ ಕೊಂಡು ಬರುತ್ತಿದ್ದಾರೆ. ಹಬ್ಬಗಳನ್ನು ಹೆಚ್ಚಾಗಿ ಗ್ರಾಮಗಳಲ್ಲಿ ಆಚರಿಸುತ್ತಾರೆ. ನಗರಗಳಲ್ಲಿ ಹಿಂದೆ ಹಬ್ಬಗಳ ಬಗ್ಗೆ ಇದ್ದ ಸಂಭ್ರಮ, ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗುತ್ತಿದೆ. ಹಳ್ಳಿಯ ಜನಗಳು ಹಬ್ಬಗಳನ್ನು ಹೇಗೆ ಮಾಡುತ್ತಿದ್ದರೋ ಆಗೆಯೇ ಅವರು

ಬೇರೆ – ಬೇರೆ ಊರುಗಳಲ್ಲಿ ನಡೆಯುವ ದೇವರ ಉತ್ಸವಗಳಲ್ಲೂ ಭಾಗವಹಿಸುತ್ತಿದ್ದರು. ಉತ್ಸವಗಳಿಗೆ ಇಂತಹ ಜಾತಿಯವರೇ ಬರಬೇಕು ಎಂಬ ಬಗ್ಗೆ ಯಾವ ನಿರ್ಬಂಧವು ಇರುತ್ತಿರಲಿಲ್ಲ. ಅದಕ್ಕೇ ಎಲ್ಲ ಜಾತಿಯ ಜನ ಭಾಗವಹಿಸುವುದರ ಮೂಲಕ ಆ ಉತ್ಸವಕ್ಕೇ ಮೆರಗನ್ನು ತರುತ್ತಿದ್ದರು. ಬಿಳಿಗಿರಿರಂಗ ಎಂಬ ಕಥೆಯಲ್ಲಿ ಮಾಸ್ತಿಯವರು ರಂಗನಾಥನ ಉತ್ಸವದ ಬಗ್ಗೆ ಹೇಳುತ್ತಾರೆ.

ಕಲ್ಮಾಡಿಯಲ್ಲಿ ಮಾಡುವ ಮಾರಿಯ ಹಬ್ಬ ತುಂಬ ವಿಶೇಷವಾದದ್ದು. ಈ ಹಬ್ಬವನ್ನು ಬೇರೆ ಎಲ್ಲಿಯೂ ನೋಡಲು ಸಾಧ್ಯವಾಗುವುದಿಲ್ಲ. ನೋಡ ಬೇಕೆಂದರೇ ಬರೀ ಕಲ್ಮಾಡಿಯಲ್ಲಿ ಮಾತ್ರ, ಬೇರೆ ಊರುಗಳಲ್ಲಿ ಗ್ರಾಮ ದೇವತೆಯ ಹಬ್ಬವನ್ನು ಮಾಡುವಾಗ "ಗ್ರಾಮ ದೇವತೆ ಒಂದು ಕೋಳಿಯಿಂದಲೋ, ಒಂದು ಕುರಿಯಿಂದಲೋ, ಒಂದು ಆಡಿನಿಂದಲೋ ತೃಪ್ತಳಾಗುತ್ತಾಳೆ. ಆದರೆ ಕಲ್ಮಾಡಿಯಲ್ಲಿ ಜನರಿಗೆ ಜ್ಞಾಪಕವಿರುವ ಕಾಲದಿಂದಲೂ ಮಾರಿಗೆ ವರ್ಷಕ್ಕೆ ಒಂದು ಬಲಿತ ಕೋಣವನ್ನು ಬಲಿ ಕೊಡಬೇಕು. ಬಲಿಯಾಗುವ ಜೀವ ಊರ ಪಾಪದ ಮೊತ್ತ. ಅದರ ಜನದ ಪ್ರತಿನಿಧಿ. ದೊಡ್ಡ ಊರುಗಳಾದರೇ ಅಲ್ಲಿ ದೊಡ್ಡ ಜೀವ ಬಲಿ. ಜೊತೆಗೆ ಉಳಿದ ಊರುಗಳ ಮಾರಿಗಿಂತ ಕಲ್ಮಾಡಿಯ ಮಾರಿ ಹೆಚ್ಚು ಪ್ರತ್ಯಕ್ಷ, ಎಂದರೆ ಕಠಿಣ" ಎಂಬ ನಂಬಿಕೆಯೂ ಇದೆ. ಸಾಲದ್ದಕ್ಕೆ ಆ ಊರಿನಲ್ಲಿ ಮಾರಿಗೆ ಬಿಡುವ ಕೋಣ ಮೂರು ವರ್ಷ ಬೆಳೆಯಬೇಕು ಎಂಬ ಸಂಪ್ರದಾಯವಿದೆ.

"ಕಲ್ಮಾಡಿಯಲ್ಲಿ ಕೋಣನಿಗೆ ಮಾಡುವ ಅಲಂಕಾರವೇ ಸ್ವಲ್ಪ ವಿಶೇಷ," ಈ ಅಲಂಕಾರದಲ್ಲಿ ಬಹು ಭಾಗ ಹೂವಿನದು; ಅದು ತೀರ ಎರಡೇ ತರದ ಹೂವಿನದು;ಚೆಂಡು ಮಲ್ಲಿಗೆ ಮತ್ತು ಸೇವಂತಿಗೆ. ನಮ್ಮ ಪ್ರಾಂತ್ಯದಲ್ಲಿ ಉಳಿದ ಯಾವ ಹೂವು ಇಲ್ಲದಿದ್ದರೂ ಈ ಎರಡು ಹೂ ಬಹು ಚೆನ್ನಾಗಿ ಬೆಳೆಯುತ್ತವೆ. ಆದ್ದರಿಂದಲೇ ಇರಬಹುದು ಕಲ್ಮಾಡಿಯ ಕೋಣನಿಗೆ ವಿಶೇಷವಾಗಿ ಚೆಂಡು ಮಲ್ಲಿಗೆಯ ದಂಡೆ, ಸೇವಂತಿಗೆ ಹಾರದಿಂದಲೇ ಅಲಂಕಾರವಾಗುವುದು.

ಕುತ್ತಿಗೆಗೆ ಒಂದು ದಂಡೆ ಹಾರ; ಕೋಡುಗಳಿಗೆ ಒಂದೊಂದು ದಂಡೆ ಉಂಗುರ; ಮೊಣಕಾಲ ಬಳಿ ದಂಡೆ ಉಂಗುರ; ಹೊಟ್ಟೆಗೆ ಒಂದು ದಂಡೆ ಹಾರ; ಮುಖದ ಮೇಲೆ ಅರಿಸಿನ ಸಿಂಧೂರದಲ್ಲಿ ಒಂದು ರೀತಿಯ ಚಿತ್ರ"೩ ದೇವರ ಗುಡ್ಡ ಇದನ್ನೆಲ್ಲ ಸಾವಧಾನವಾಗಿ ಮಾಡಿದ ಮೇಲೆ ಸುಮಂಗಲಿಯರು ಬಂದು ಪೂಜೆ ಮಾಡಿದರು. ಇದು ಕೂಡ ಒಂದು ಸಂಪ್ರದಾಯ. ಈ ಹಬ್ಬ

ಹುಣ್ಣಿಮೆಯಲ್ಲೆಲ್ಲ ತುಂಬ ವಿಶೇಷವಾದದ್ದು. ಪೂಜೆಯಲ್ಲ ಆದ ಮೇಲೆ ಊರಿನ ಜನ ಎಲ್ಲ ಬಂದು ಸೇರಿರುತ್ತಾರೆ. ಆಗ ತೋಟಿ ಬಂದು ಕಡುಗತ್ತಿಯನ್ನು ತೆಗೆದು ಕೊಂಡು ಕೋಣವನ್ನು ಕತ್ತರಿಸುತ್ತಾನೆ. ಇದರಿಂದ ಜನಗಳೆಲ್ಲ ಮಾರಿಕಾ ದೇವಿ ತೃಪ್ತಳಾದಳು ಎಂದುಕೊಂಡು ತಮ್ಮ ಮನೆಗಳಿಗೆ ಹೋಗಿ ಹಬ್ಬದ ಅಡುಗೆ ಮಾಡಿಕೊಂಡು ಸಂತೋಷದಿಂದ ಊಟಮಾಡುತ್ತಾರೆ.

ಒಟ್ಟಿನಲ್ಲಿ ಕಲ್ಮಾಡಿಯು ತನ್ನ ಮಾರಿ ದೇವತೆಯ ಹಬ್ಬದಿಂದ ಪ್ರಸಿದ್ಧಿಯನ್ನು ಹೊಂದಿತು. ಜೊತೆಗೆ ಊರು ತನ್ನ ಹೆಸರನ್ನು ಅವಳಿಂದಲೇ ಪಡೆದಿರಬಹುದೆಂದು ಹೇಳಿದರೆ ಇರಬಹುದೋ ಏನೋ ಎಂದು ಹೇಳುವಷ್ಟು ಮಟ್ಟಿಗೆ ಅವಳ ಮಹಿಮೆ ಹರಡಿದೆ.

ಕಥೆಗಾರರು ಸಮಾಜದ ಸಾಂಸ್ಕೃತಿಕ ಮೌಲ್ಯಗಳನ್ನು ಹಿಡಿದುಕೊಡುವಲ್ಲಿ ಸಫಲರಾಗಿದ್ದಾರೆ. ಒಂದು ಸಮಾಜ ವ್ಯವಸ್ಥೆಯ, ಒಟ್ಟು ನೋಟವನ್ನು ಗುರುತಿಸಿ ಬೆಲೆ ಕಟ್ಟುವಲ್ಲಿ ಸಾಂಸ್ಕೃತಿಕ ಮೌಲ್ಯಗಳು ಮುಖ್ಯವಾಗುತ್ತವೆ. ಅದರ ಮೂಲಕ ಆ ಜನರ ಬದುಕು ಎಂಥದಿತ್ತು ಎಂಬುದನ್ನು ಸುಲಭವಾಗಿ ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಮಾಸ್ತಿಯವರ ಸೂಕ್ಷ್ಮ ಪ್ರಜ್ಞೆ ಈ ಎಲ್ಲ ಕೆಲಸಗಳನ್ನು ಸಮರ್ಥವಾಗಿ, ಯಶಸ್ವಿಯಾಗಿ ಮಾಡಿಕೊಟ್ಟಿದೆ.

೨. ದೆವ್ವ

ಗ್ರಾಮಗಳಲ್ಲಿ ಇರುವ ಜನರು ಭಕ್ತಿಯಿಂದ ಇಲ್ಲವೇ ಕೃತಜ್ಞತೆಯಿಂದ ದೇವರನ್ನು ಪೂಜಿಸುತ್ತಾರೆ, ಸ್ಮರಿಸುತ್ತಾರೆ. ಅದೇ ರೀತಿ ಮಾಟ - ಮಂತ್ರ, ದೇವರು-ದೆವ್ವಗಳನ್ನು ತುಂಬ ಭಯದಿಂದ ನಂಬುತ್ತಾರೆ. ನಗರ ಪ್ರದೇಶದ ಜನರಿಗೆ ಆಧುನಿಕತೆಯ ಪ್ರಭಾವದಿಂದ ಇವುಗಳ ಬಗ್ಗೆ ಆಸಕ್ತಿ ಇಲ್ಲವೆಂದೇ ಹೇಳಬಹುದು. ಅದರೂ ಕೂಡ ಅವರು ಸ್ವಲ್ಪ ಮಟ್ಟಿಗೆ ಇವುಗಳನ್ನು ನಂಬುತ್ತಾರೆ.

ಹಳ್ಳಿಗಳಲ್ಲಿ ಹೆಚ್ಚಾಗಿ ದೆವ್ವಗಳನ್ನು ನಂಬುವವರು ಇವತ್ತಿಗೂ ಕೂಡ ಇದ್ದಾರೆ. ಮುಗ್ಧ ಜನಗಳು ಯಾವುದೇ ಕಾರ್ಯ ಕಾರಣ ಸಂಬಂಧವನ್ನು ಹುಡುಕದೇ ಆ ದೆವ್ವಗಳ ಬಗ್ಗೆ ಹೇಳುವ ಮಾಹಿತಿಯನ್ನು ನಂಬುತ್ತಾರೆ. ಒಂದು ವೇಳೆ ಇವುಗಳೆಲ್ಲವನ್ನು ನಂಬದ ನಾಸ್ತಿಕನಿದ್ದರೂ ಕೂಡ, ಹಳ್ಳಿಯಲ್ಲಿ ದೆವ್ವ ಬಂತು ಎಂದು ಜನರು ವರ್ತಿಸುವುದನ್ನು ನೋಡಿ ಬೆಕ್ಕಸ ಬೆರಗಾಗುತ್ತಾರೆ. ಸತ್ಯಾ ಸತ್ಯತೆಗಳೇನೇ ಇರಲಿ ಅದನ್ನು ನಂಬುವುದಿಲ್ಲ. ಬದಲಿಗೆ ಅದರಿಂದ ಆಗುವ ಪರಿಣಾಮಗಳನ್ನು ಹೆಚ್ಚು ನಂಬುತ್ತಾರೆ.

ಕರು ಸತ್ತರೆ, ಎಮ್ಮೆ ಹಾಲು ಕೊಡದಿದ್ದರೆ, ಮಗುವಿಗೆ ವಾಂತಿ ಭೇದಿಯಾದರೆ ಇದಕ್ಕೆಲ್ಲ ವೈಜ್ಞಾನಿಕ ಕಾರಣ ಕೊಟ್ಟರೆ ನಂಬುವುದಿಲ್ಲ. ಬದಲಿಗೆ ಇದಕ್ಕೆಲ್ಲ ಮೂಲ ಕಾರಣ ದೆವ್ವದ ಪ್ರಭಾವ ಎಂದು ನಂಬಲಾಗುತ್ತದೆ. ಪಂಡಿತರು ಯಾರಾದರೂ ಬೂದಿಯನ್ನು ಮಂತ್ರಿಸಿ ಕೊಟ್ಟರೆ ತನ್ನ ಎಮ್ಮೆ ಹಾಲು ಕೊಟ್ಟಿತು, ಮಗುವಿನ ಆರೋಗ್ಯ ಸರಿಯಾಯಿತು ಎಂದು ಹಳ್ಳಿಯ ಜನಗಳು ನಂಬುತ್ತಾರೆ.

ಹಳ್ಳಿಯ ಜನರಿಗೆ ಪೂರ್ವ ಜನ್ಮದ ಬಗ್ಗೆ ತೀರ ನಂಬಿಕೆ. ವ್ಯಕ್ತಿಗಳು ಯಾರಾದರು ಆಯುಷ್ಯ ತುಂಬದೆ ಸತ್ತರೆ ಅದರಲ್ಲೂ ನೀರಿಗೋ, ನೇಣಿಗೋ ಬಲಿಯಾಗಿ ಸತ್ತರೇ ಅವರು ದೆವ್ವಗಳಾಗುತ್ತಾರೆ ಎಂದು ಹೇಳುತ್ತಾರೆ. ದೆವ್ವಗಳಲ್ಲಿ ಎರಡು ವಿಧ ಒಳ್ಳೆಯ ದೆವ್ವ, ಕೆಟ್ಟ ದೆವ್ವ ಎಂದು, ದೆವ್ವಗಳು ಎಲ್ಲರ ಕಣ್ಣಿಗೂ ಕಾಣಿಸುವುದಿಲ್ಲ. ಅವು ಹೆಚ್ಚಾಗಿ ಅಮಾವಸ್ಯೆದಿನಗಳಲ್ಲಿ ಮಾತ್ರ ಕಾಣಿಸಿಕೊಳ್ಳುತ್ತವೆ. ಅದು ನಿರ್ದಿಷ್ಟ ಸ್ಥಳಗಳಲ್ಲಿ ಮಾತ್ರ ಹೆಚ್ಚು ಕಾಣಿಸುವುದು. ಅಂದರೆ ನೀರು, ಹುಣಸೆಮರದಲ್ಲಿ ಹೆಚ್ಚು ಇರುತ್ತವೆ. ಮಾಸ್ತಿಯವರು ದೆವ್ವಗಳನ್ನು ನಂಬುತ್ತಿರಲಿಲ್ಲವಾದರಿಂದ ಅವರು ತಮ್ಮ ಕಥೆಯಲ್ಲಿ ತುಂಬ ಹಾಸ್ಯಾತ್ಮಕವಾಗಿ ಹೇಳಿದ್ದಾರೆ.

ಮಾಸ್ತಿಯವರು 'ಮಲೆನಾಡಿನ ಒಂದು ಪಿಶಾಚ' ಎಂಬ ಕಥೆಯಲ್ಲಿ ದೆವ್ವದ ಬಗ್ಗೆ ಹೇಳುತ್ತಾರೆ. ಮಲೆನಾಡಿನ ಒಬ್ಬ ವ್ಯಕ್ತಿ "ಸ್ವಾಮಿ ಊರಲ್ಲಿ ಒಂದು ಬಾಣಂತಿ ಪಿಶಾಚ ಇದೆ. ಯಾವ ಕಾಲದಲ್ಲಿ ಯಾವ ಕಾರಣದಿಂದ ಆ ಬಾಣಂತಿ ಜೀವ ಬಿಟ್ಟಳೋ ನನಗೆ ತಿಳಿಯದು. ನಮ್ಮೂರಲ್ಲಿ ಯಾವ ಹೆರಿಗೆಯಾಗಬೇಕಾದರೂ ಜನ ಸುಮ್ಮನೆ ಹೆದರುತ್ತಾರೆ. ಹೆರಿಗೆಯಾದ ಕ್ಷಣದಲ್ಲಿ ಹೊಲೆ ಕಳೆಯುವವರಿಗೆ ಒಂದು ಕ್ಷಣ ಮಾತ್ರ ಮನೆಯವರು ಅಜಾಗ್ರತೆಯಿಂದ ಇದ್ದರೆ ಆ ಪಿಶಾಚ ಹೊಲೆಯ ಮನೆಗೆ ನುಸುಳಿ ಬಿಡುತ್ತದೆ. ಮಗುವನ್ನು ಕೊಂದು ತಾಯನ್ನು ಮಾಯ ಮಾಡುತ್ತೆ. ತಾನು ಆ ಹೆಂಗಸಿನಂತೆ ಹೊಲೆ ಮನೆಯಲ್ಲಿ ಮಲಗುತ್ತದೆ. ಒಂದು ತಿಂಗಳೋ, ಎರಡು ತಿಂಗಳೋ ಆ ಗಂಡನೊಂದಿಗೆ ಸಂಸಾರ ಮಾಡುತ್ತಾ ಇದ್ದು ಎಂದೋ ಒಂದು ದಿನ ಹೊರಗೆ ಹೋದದ್ದು ಮರಳಿ ಬರುವುದಿಲ್ಲವೆಂದು"೪ ತನ್ನ ಊರಿನ ದೆವ್ವದ ಬಗ್ಗೆ ಹೇಳುತ್ತಾನೆ.

ಮಾಂತ್ರಿಕನಿಂದ ದೆವ್ವವು ಬರದಂತೆ ತಡೆಗಟ್ಟುವ ಪ್ರಯತ್ನವನ್ನು ಮಾಡಲಾಗಿದೆ. ನರಸಿಂಹನು ಪಿಶಾಚದ ಕಥೆಯನ್ನು ಕೇಳಿದ ಮೇಲೆ ಆ ಪಿಶಾಚಿಯಿಂದ ತನ್ನ ಹೆಂಡತಿಯನ್ನು ರಕ್ಷಿಸಿಕೊಳ್ಳಲು "ಪಿಶಾಚದ ಕಥೆಯನ್ನು ಹೇಳಿದ ಮುದುಕನ ಮೂಲಕ ಒಬ್ಬ ಮಾಂತ್ರಿಕನಿಂದ ಒಂದು ರಕ್ಷೆಯನ್ನು ತರಿಸಿ ಅದನ್ನು ಹೆಂಡತಿ ಮಲಗುವ ಕಡೆ ಹಾಸಿಗೆಯ ಅಡಿಯಲ್ಲಿ ಸುಪ್ಪತ್ತಿಗೆಯ ಒಳಗೆ ಸೇರಿಸಿ ಹೊಲಿದನು"೫.

ದೆವ್ವವನ್ನು ಎಲ್ಲ ಜನರು ನಂಬುತ್ತಾರೆ. ದೆವ್ವವನ್ನು ನಂಬದ ಜನರಿರುವುದು ಅಪರೂಪವಾದ್ದರಿಂದ ಕೆಲವು ಹಳ್ಳಿಗರು ದೆವ್ವದ ಹೆಸರಿನಿಂದ ತಮ್ಮ ಸ್ವಾರ್ಥಸಾಧನೆಗಳನ್ನು ಮಾಡಿಕೊಳ್ಳುತ್ತಾರೆ. ಭಯದ ವಾತಾವರಣಕ್ಕೆ ಮುಗ್ಧ ಜನರನ್ನು ತಳ್ಳಿ ತಮ್ಮ ಕೆಲಸ ಕಾರ್ಯಗಳನ್ನು ಸಾಧಿಸಿಕೊಳ್ಳುತ್ತಾರೆ. ಹಳ್ಳಿಯ ಎಷ್ಟೋ ಜನಕ್ಕೆ ದೆವ್ವ ಮೆಟ್ಟಿಕೊಳ್ಳುತ್ತದೆ. ಆದರೆ ಆ ದೆವ್ವಗಳು ನಗರ ಪ್ರದೇಶದ ಜನಗಳಲ್ಲಿ ಅಷ್ಟಾಗಿ ಕಂಡು ಬರುವುದಿಲ್ಲ. ಹಳ್ಳಿಯ ಜನಗಳು ತಮ್ಮ ಇಷ್ಟಾರ್ಥಗಳನ್ನು ನೆರವೇರಿಸಿ ಕೊಳ್ಳುವ ಸಲುವಾಗಿಯು ದೆವ್ವ ಬಂದ ರೀತಿ ವರ್ತಿಸುತ್ತಾರೆ.

ಹಳ್ಳಿಗಳಲ್ಲಿ ದೆವ್ವ ಮೆಟ್ಟಿಕೊಂಡಿರುವುದನ್ನು ಆ ಊರಿನ ಪೂಜಾರಿ ಇಲ್ಲವೇ ದೆವ್ವದ ನಿಯಂತ್ರಕನೆಂದು ಹೆಸರು ಪಡೆದಿರುವ ವ್ಯಕ್ತಿ ಚಿತ್ರ ಹಿಂಸೆಯನ್ನು ಕೊಡುವುದರ ಮೂಲಕ ದೆವ್ವವನ್ನು ಓಡಿಸುವ ಪ್ರಯತ್ನ ಮಾಡುತ್ತಾರೆ. ಮತ್ತೆ ದೆವ್ವವನ್ನು ಬಿಡಿಸುವ ಕೆಲಸದಲ್ಲಿ

ಮಂತ್ರವಾದಿಗಳ ಪಾಲು ಹೆಚ್ಚಾಗಿಕಂಡುಬರುತ್ತದೆ. ಒಟ್ಟಿನಲ್ಲಿ ಈ ಮಂತ್ರವಾದಿಗಳು, ಪಂಡಿತರು ತಮ್ಮ ಹೊಟ್ಟೆಯನ್ನು ಹೊರೆದು ಕೊಳ್ಳಲು ಈ ಕೆಲಸವನ್ನು ನಿರ್ವಹಿಸುತ್ತಾರೆ.

ಒಟ್ಟಿನಲ್ಲಿ ಮಾಸ್ತಿ ಅವರು ಕಥೆಯಲ್ಲಿ ಗ್ರಾಮೀಣ ಬದುಕಿನಲ್ಲಿ ಹಾಸು ಹೊಕ್ಕಾಗಿ ಬೆಸೆದು ಕೊಂಡಿರುವ ಅಂಶಗಳನ್ನು ಯಾವ ಉದ್ವೇಗವೂ ಇಲ್ಲದೇ ತುಂಬ ಹಾಸ್ಯಾತ್ಮಕವಾಗಿ ಗ್ರಾಮೀಣರ ಬದುಕುವಿಕೆಯ ಕ್ರಮವನ್ನು ಅಭಿವ್ಯಕ್ತಿಸುತ್ತಾರೆ.

೩. ವೃತ್ತಿಗಳು

ಯಾವುದೇ ಒಬ್ಬ ಮನುಷ್ಯ ತನ್ನ ಜೀವನವನ್ನು ರೂಪಿಸಿಕೊಳ್ಳುವುದಕ್ಕೇ ಮತ್ತು ಸಮಾಜದಲ್ಲಿ ಭದ್ರವಾಗಿ ತಳವೂರ ಬೇಕಾದರೆ ಕೆಲಸ ತುಂಬ ಮುಖ್ಯ. ಕಷ್ಟ ಪಟ್ಟು ಕೆಲಸ ಮಾಡಿ ಅದರಿಂದ ಸ್ವಲ್ಪ ಹಣ ಬಂದರೂ ಕೂಡ ಆ ವ್ಯಕ್ತಿ ತುಂಬ ಸ್ವಾಭಿಮಾನದಿಂದ ಬದುಕನ್ನು ನಡೆಸಬಹುದು. ಯಾವುದೇ ವ್ಯಕ್ತಿ ಯಾವ ಕೆಲಸವನ್ನು ಮಾಡದೆ ಸುಮ್ಮನೆ ಕುಳಿತು ಕೊಂಡರೆ ಅದು ಅವನಿಗೆ ಗೌರವವನ್ನು ತಂದು ಕೊಡುವುದಿಲ್ಲ.

ಹಳ್ಳಿಗಳಲ್ಲಿ ಗಂಡಸರು, ಹೆಂಗಸರು ಅನ್ನದೆ ಎಲ್ಲರೂ ದುಡಿಯುತ್ತಾರೆ. ಪಟ್ಟಣಗಳಲ್ಲಿ ಇತ್ತೀಚಿನ ದಿನಗಳಲ್ಲಿ ಹೆಣ್ಣು ಮಕ್ಕಳು ವಿದ್ಯಾವಂತರಾಗಿ ತಮಗೆ ಬೇಕಾದ ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಂಡು ಕೆಲಸಗಳನ್ನು ಮಾಡುವುದರ ಮೂಲಕ ತಮ್ಮನ್ನು ಈ ಸಮಾಜದಲ್ಲಿ ಗುರುತಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿದ್ದಾರೆ.

ಹಿಂದೆ ಮಹಿಳೆಯರು ಅವಿದ್ಯಾವಂತರಾಗಿದ್ದರು ಅದಕ್ಕೇ ಅವರು ತಮ್ಮ ಊರಿನಲ್ಲಿಯೇ ಯಾವುದಾದರೂ ಕೂಲಿ ಕೆಲಸಗಳನ್ನು ಮಾಡಿ ಹಣ ಸಂಪಾದಿಸುತ್ತಿದ್ದರು. ತಮ್ಮ ಮನೆಯಲ್ಲಿಯೇ ಹಸುಗಳನ್ನು ಸಾಕುವುದು, ಬುಟ್ಟಿಯನ್ನು ತಯಾರಿಸುವುದು ಇತರೆ ವೃತ್ತಿಗಳನ್ನು ಮಾಡುತ್ತಿದ್ದರು. ಅದೇ ರೀತಿ ಪುರುಷರು ವ್ಯವಸಾಯವನ್ನು ಮಾಡುತ್ತಿದ್ದರು. ಕೆಲವೊಬ್ಬರುಗಳು ಮಾತ್ರ ವಂಶಪಾರಂಪರ್ಯವಾಗಿ ಬಂದಿರುವ ಕಸುಬುಗಳನ್ನೇ ಮುಂದುವರಿಸಿಕೊಂಡು ಹೋಗುವುದರ ಮೂಲಕ ತಮ್ಮ ಜೀವನವನ್ನು ನಡೆಸುತ್ತಿದ್ದರು.

ಮೊಸರು ಮಾರುವುದು ಕೂಡ ಒಂದು ಭಾರತೀಯ ಸಂಸ್ಕೃತಿ. ಮಂಗಮ್ಮ ಮೊಸರನ್ನು ಮಾರುವುದರಿಂದ ಮೊಸರಿನ ಮಂಗಮ್ಮ ಎಂದೇ ಚಿರಪರಿಚಿತಳಾದಳು. ಮಂಗಮ್ಮ ದಿನ ಮನೆ ಮನೆಗೆ ಹೋಗಿ ಮೊಸರು ತಕ್ಕೋತೀರಾ ಅವ್ವಾ ಒಳ್ಳೆ ಮೊಸರು ತಂದಿದೀನಿ ಅಂತ ಕೇಳುವಳು. ಅವರಿಗೆ ಬೇಕಿದ್ದರೆ ತೆಗೆದು ಕೊಂಡು ಆ ಹೊತ್ತಿನ ವ್ಯಾಪಾರ ಹೇಗಿದೆಯೋ ಹಾಗೆ ಆಗಲೇ ದುಡ್ಡು ಕೊಟ್ಟು ಬಿಡುವುದು ಅಥವಾ ಮಾರನೆಯ ದಿವಸ ಕೊಡುವುದಾಗಿ ಹೇಳುತ್ತಿದ್ದರು. ಮಂಗಮ್ಮಳು ತಾನು ಮೊಸರು ಮಾರಿ ಬಂದ ಹಣದಲ್ಲಿ ಸಂಸಾರವನ್ನು ನಡೆಸುತ್ತಿದ್ದಳು ಜೊತೆಗೆ ಸೊಸೆಗೆ ಏನಾದರೂ ತೆಗೆದು ಕೊಡುತ್ತಿದ್ದಳು.

ಮೊಸರು ಮಾರುವ ಪದ್ಧತಿ ಇತ್ತೀಚಿನ ದಿನಗಳಲ್ಲಿ ಕಂಡು ಬರುತ್ತಿಲ್ಲ. ಹಿಂದೆ ಹಳ್ಳಿಯ ಜನಗಳು ತಮ್ಮ ಜೀವನ ನಿರ್ವಹಿಸಲು ಯಾವುದಾದರೂಂದು ಕೆಲಸ ಮಾಡುತ್ತಿದ್ದರು. ಅದರಲ್ಲಿ ಮೊಸರು ಮಾರುವುದು ಕೂಡ ಒಂದು. ಮೊಸರನ್ನು ಪಟ್ಟಣಕ್ಕೇ ತೆಗೆದು ಕೊಂಡು ಹೋಗಿ ಅಲ್ಲಿ ಮಾರಾಟ ಮಾಡಿಬರುತ್ತಿದ್ದರು. ಇದರಿಂದ ಅವರಿಗೆ ಶ್ರಮಕ್ಕೆ ತಕ್ಕ ಪ್ರತಿಫಲ ದೊರಕುತ್ತಿತ್ತು. ಪುರುಷರು ಸ್ತ್ರೀಯರನ್ನು ಅಥವಾ ಕುಟುಂಬವನ್ನು ಚೆನ್ನಾಗಿ ನೋಡಿಕೊಳ್ಳದೇ ಇದ್ದ ಸಂದರ್ಭದಲ್ಲಿ ಸ್ತ್ರೀಯರಿಗೆ ಈ ಕಸುಬುಗಳಿಂದ ತುಂಬ ಉಪಯೋಗವಾಗುತ್ತಿತ್ತು.

ಬೇರೆಯವರ ಮನೆಯ ಕೆಲಸ ಮಾಡುವುದಕ್ಕಿಂತ ಮಹಿಳೆಯರಿಗೆ ಕುಲಕಸುಬುಗಳು ಒಂದು ರೀತಿಯಲ್ಲಿ ಉತ್ತಮ ಕೆಲಸವಾಗಿತ್ತು. ಮಾಸ್ತಿಯವರು ತಮ್ಮ ಕಥೆಯಲ್ಲಿ ಪೂರ್ವ ಕಾಲದಲ್ಲಿ ಇದ್ದ ಕಸುಬುಗಳನ್ನು ಕುರಿತು ಹೇಳುತ್ತ ಅದರಿಂದಾಗುತ್ತಿದ್ದ ಪ್ರಯೋಜನಗಳನ್ನು ಹೇಳುತ್ತ, ಅವುಗಳನ್ನು ಇತ್ತೀಚಿನ ದಿನಗಳಲ್ಲಿ ಕಾಣಲು ಸಾಧ್ಯವಾಗುತ್ತಿಲ್ಲ ಎಂದಿದ್ದಾರೆ.

ಪದಗಳನ್ನು ಹೇಳಿ ಕೊಂಡು ಭಿಕ್ಷೆಯನ್ನು ಬೇಡುವುದು ಕೂಡ ಒಂದು ಪದ್ಧತಿ. ಅಂಜಪ್ಪ ಒಬ್ಬ ಜೋಗಿ. "ಜೋಗಿಯರ ಕಸುಬು ಅಂದರೆ ಸೊಗಸಾಗಿ ವೇಷ ಹಾಕಿಕೊಂಡು ಎಡ ಹೆಗಲಿಗೆ ಜೋಳಿಗೆ, ಬಲ ಹೆಗಲಿಗೆ ಕಿಂದರಿ ತೂಗು ಹಾಕಿಕೊಂಡು ತಾತನ ಕಾಲದಿಂದ ಬಳುವಳಿಯಾಗಿ ಬಂದ ಪದಗಳನ್ನು ಹಾಡುತ್ತ ಊರೆಲ್ಲಾ ಭಿಕ್ಷೆ ಎತ್ತುವುದು ಹೊರತು ನೆಲ ಉತ್ತದ್ದಿಲ್ಲ"[೭] ಆದರೆ ಇತ್ತೀಚಿನ ದಿನಗಳಲ್ಲಿ ಜೋಗಿಗಳು ಕೂಡ ವ್ಯವಸಾಯವನ್ನು ಮಾಡುತ್ತಿದ್ದಾರೆ.

ಅಂಜಪ್ಪ ಜೋಳಿಗೆಯನ್ನು ತೆಗೆದುಕೊಂಡು ಪದವನ್ನು ಹೇಳುತ್ತ ಊರುಗಳಿಗೆ ಹೋದರೆ ಅಲ್ಲಿಯ ಜನ ಇವನು ಪದ ಹೇಳುವುದನ್ನು ಅತ್ಯಂತ ಸಂತೋಷದಿಂದ ಕುಳಿತು ಕೇಳುತ್ತಿದ್ದರು. ಕೇಳಿಯಾದ ಮೇಲೆ ಜೋಳಿಗೆ ಭಿಕ್ಷೆಯನ್ನು ಕೊಟ್ಟು ಕಳುಹಿಸುತ್ತಿದ್ದರು, ಅಂಜಪ್ಪ ಪದವನ್ನು ಹೇಳುತ್ತಿದ್ದದ್ದು ತನ್ನ ಹೊಟ್ಟೆ ಪಾಡಿಗಾದರೂ ಕೂಡ ಜನ ಅದನ್ನು ಕೇಳಿ ಸಂತೋಷ ಪಡುತ್ತಿದ್ದರು. ಈ ಪದ್ಧತಿ ಇತ್ತೀಚಿನ ದಿನಗಳಲ್ಲಿ ತುಂಬ ವಿರಳ. ಜೋಗಿಗಳು ಪದವನ್ನು ಹೇಳಿಕೊಂಡು ಬಂದರು ಅದನ್ನು ಕುಳಿತು ಕೇಳುವ ವ್ಯವಧಾನ ಈಗೀನ ಜನಕ್ಕೇ ಇಲ್ಲ. ಮಾಸ್ತಿ ಅವರು ಸಮಾಜದ ಹೋಗುಗಳನ್ನು ಕಟ್ಟಿ ಕೊಟ್ಟಿದ್ದಾರೆ.

ದೊಂಬರ ಜನಾಂಗದವರು ಊರು ಊರುಗಳಿಗೆ ಹೋಗಿ ಅಲ್ಲಿ ದೊಂಬರ ಆಟವನ್ನು ತೋರಿಸಿ ಹಣವನ್ನು ಸಂಪಾದಿಸುತ್ತಿದ್ದರು. ಈ ಆಟಗಳನ್ನು ಒಬ್ಬರು ಆಡುವುದಕ್ಕೇ ಸಾಧ್ಯವಿಲ್ಲ. ಕುಟುಂಬದ ಸದಸ್ಯರೆಲ್ಲ ಒಟ್ಟಾಗಿ ಸೇರಿಕೊಂಡು ತಾವು ಕಲಿತ ವಿದ್ಯೆಗಳನ್ನು ಅಲ್ಲಿ ಪ್ರದರ್ಶನ ಮಾಡುವುದರ ಮೂಲಕ ತಮ್ಮ ಹೊಟ್ಟೆಯನ್ನು ಹೊರೆಯುವ ಕೆಲಸ ಮಾಡುತ್ತಿದ್ದರು. ಹಿಂದೆ ಹಳ್ಳಿಗಳಲ್ಲಿ ಗೌಡರು ದೊಂಬರವರನ್ನು ಕರೆಸಿ ಊರಿನಲ್ಲಿ ಪ್ರದರ್ಶನವನ್ನು ಕೊಡಿಸುತ್ತಿದ್ದರು.

ಹಳ್ಳಿಗಳಲ್ಲಿ ಜನರು ಬೆಳಗ್ಗೆಯಿಂದ ಸಂಜೆಯವರೆಗೆ ದುಡಿಯುತ್ತಿದ್ದರು. ಇವರಿಗೆ ಯಾವುದೇ ಮನರಂಜನೆಗಳು ಇರಲಿಲ್ಲ. ಅಂದರೆ ಟಿ.ವಿ, ರೇಡಿಯೋ, ಚಲನಚಿತ್ರಗಳು ಇನ್ನು ಗ್ರಾಮಗಳನ್ನು ಪ್ರವೇಶಿಸಿರಲಿಲ್ಲ. ಇವೆಲ್ಲ ಹೆಚ್ಚಾಗಿ ಕಂಡು ಬರುತ್ತಿದ್ದದ್ದು ನಗರಗಳಲ್ಲಿ ಮಾತ್ರ. ಆದ್ದರಿಂದ ಗ್ರಾಮದ ಜನತೆಗೆ ಮನರಂಜನೆಯನ್ನು ಕೊಡುವುದರ ಸಲುವಾಗಿ ಆ ಊರಿನ ಗೌಡರು ಬಯಲಾಟಗಳನ್ನು, ನಾಟಕಗಳನ್ನು ಆಡಿಸುತ್ತಿದ್ದರು ಕೆಲವೊಂದು ಸಂದರ್ಭಗಳಲ್ಲಿ ಬೇರೆ ಊರುಗಳಿಂದ ಜನರನ್ನು ಕರೆಸಿ ಆಟವಾಡಿಸುತ್ತಿದ್ದರು. ಅದೇ ರೀತಿ ಗೌಡರು ದೊಂಬರ ಜನಾಂಗದವರನ್ನು ಕರೆಸಿ ದೊಂಬರ ಆಟವನ್ನು ಆಡಿಸುತ್ತಿದ್ದರು.

ದೊಂಬರ ಆಟದವರು ಹಳ್ಳಿಗೆ ಬಂದಾಗ ಅಲ್ಲಿನ ಜನಕ್ಕೇ ಹಬ್ಬದ ಸಂಭ್ರಮ. ಡೆಪುಟಿ ಕಮೀಷನರು ಬಂದರೆ ಆಗುವ ಮಾರ್ಯಾದೆ ದೊಂಬರ ಆಟದವರಿಗೆ ದೊರಕುತ್ತಿತ್ತು. ಇವರ ಆಟವನ್ನು ನೋಡಲು ಊರಿಗೆ ಊರೇ ಬಂದಿರುತ್ತಿತ್ತು. ಮಾಸ್ತಿ ಅವರು ಕಥೆಯಲ್ಲಿ ದೊಂಬರ ಆಟವನ್ನು ಚಿತ್ರಿಸುತ್ತ ಈ ರೀತಿ ಹೇಳುತ್ತಾರೆಹೆಣ್ಣು ಆ ದಿನ ಗಡೆಯನ್ನೇರಿದಾಗ ನನಗಂತೂ ಎಲ್ಲೋ ಆಕಾಶವನ್ನೇ ಮುಟ್ಟಿ ಬಿಟ್ಟಳಂತೆ ಕಂಡಿತು. ಮೈಗೆ ಒತ್ತಿಕೊಂಡಿರುವಂತೆ ಸೀರೆಯನ್ನು ಬಿಗಿಯಾಗಿ ಉಟ್ಟು, ಬಿಗಿಯಾದ ಕುಪ್ಪಸವನ್ನು ತೊಟ್ಟು ನಡುವಿನ ಬಲವಾದ ಪಟ್ಟಿಯೊಂದನ್ನು ಕಟ್ಟಿ ಹುಡುಗಿ ಗಡೆಯನ್ನು ಸುತ್ತಿ ಏರಬೇಕಾದರೆ ತೆಂಗಿನ ಮರವನ್ನೇರುವ ಅಳಿಲಂತೆ ಕಂಡಳು. ಸರ್‍ರನೆ ಏರಿ ಇರಿಸಿ, ಬೆನ್ನ ಮೇಲೆ ಕೆಲವು ಸಾಮು ಹೊಟ್ಟೆಯ ಮೇಲೆ ಕೆಲವು ಸಾಮು ಮಾಡಿ ತೋರಿಸಿ ಕೊನೆಗೆ ಚಕ್ರವನ್ನು ಸುತ್ತಿದಳು.

ಗಡೆಯ ಮೇಲೆ ಕೈಯನ್ನೆತ್ತಿ ಸುತ್ತುವುದಕ್ಕೇ ಮೊದಲು ಮಾಡಿ ವೇಗ ಹೆಚ್ಚಿದ ಮೇಲೆ ಕೈ ಕಾಲುಗಳನ್ನು ಚಾಚಿ ಅದು ಯಾವುದೋ ರೀತಿಯಾಗಿ ಕಾಣುತ್ತಿತ್ತು. ಓಟದ ವೇಗ ಹೆಚ್ಚಿದ ಹಾಗೆ ಅವಳು ಗಾಡಿಯ ಚಕ್ರ ಓಡುವಂತೆ ಕಂಡಳು. ನೋಡುವ ಜನ ಮೊದಮೊದಲು ತಮ್ಮ ತಮ್ಮಲ್ಲಿ

ಮೆಲ್ಲನೆ 'ಆಹಾ ಎಷ್ಟು ಚೆನ್ನಾಗಿ ಸುತ್ತುದ್ದಾಳೆ. ಎಲಾ ಅವಳ ಕೈ ಯಾಡುವುದು ನೋಡೋ, ಏನಯ್ಯಾ ಕೈ ಬಿಟ್ಟಳು' ಎಂದು ಮೊದಲಾಗಿ ಮಾತನಾಡುತ್ತಿದ್ದವರು ಈ ವೇಗ ಹೆಚ್ಚಾದಾಗ ಮಾತು ನಿಲ್ಲಿಸಿದರು; ಏನಾಗುವುದೋ ಎಂದು ಭೀತಿಯಿಂದ ಉಸಿರು ಬಿಗಿಹಿಡಿದು ಕೊಂಡು; ಒಳಗೊಳಗೆ ಸದ್ಯ ಇವಳು ಇಳಿದು ಬಂದರೆ ಸಾಕು ಎಂದು ಕೊಂಡರು. ಅವಳ ತಮ್ಮ ಒಂದು ಕಡೆ ನಿಂತು ಸಣ್ಣ ಡೋಲು ಬಡಿಯುತ್ತಿದ್ದನು. ಅವಳ ತಂದೆ ಒಂದು ಕಡೆ ಕುಳಿತು ದೊಡ್ಡ ಒಂದು ಡೋಲನ್ನು ಬಡಿಯುತ್ತಿದ್ದನು"೭.

ದೊಂಬರವರು ತಮ್ಮ ಜೀವದ ಮೇಲೆ ಆಸೆ ತೊರೆದು ಈ ಆಟವನ್ನು ಆಡುತ್ತಿದ್ದರು. ಇವರುಗಳಿಗೆ ಈ ಆಟಗಳು ವಂಶಪಾರಂಪರ್ಯವಾಗಿ ಬಂದಿರುವಂತಹವು ಆದ್ದರಿಂದ ಅವರು ತಮ್ಮ ಕಲೆಯನ್ನು ಉಳಿಸಿಕೊಂಡು ಹೋಗುವ ಪ್ರಯತ್ನವನ್ನು ಮಾಡುವುದರ ಜೊತೆಗೆ ತಮ್ಮ ಜೀವನವನ್ನು ನಡೆಸಿಕೊಂಡು ಹೋಗುವುದಕ್ಕೇ ಈ ಆಟ ತುಂಬ ಅನಿವಾರ್ಯವಾಗಿತ್ತು.

ಮಾಸ್ತಿಯವರು 'ವೆಂಕಟ ಶಾಮಿಯ ಪ್ರಣಯ' ಕತೆಯಲ್ಲಿ ವೆಂಕಟಿಗನಿಗೆ ವಿದ್ಯೆಯನ್ನು ಕಲಿಸಿ ಅವನನ್ನು ಉನ್ನತ ವ್ಯಕ್ತಿಯನ್ನಾಗಿ ಮಾಡಬೇಕು ಅಂತ ಅವನ ತಂದೆ ಆಸೆ ಪಡುತ್ತಾನೆ. ಆದರೆ ವೆಂಕಟಿಗನಿಗೆ ವಿದ್ಯೆಯನ್ನು ಕಲಿಯಲು ಆಸಕ್ತಿ ಇಲ್ಲ. ಬದಲಿಗೆ ಅವನು ತನ್ನ ತಂದೆ ಮಾಡುತ್ತಿದ್ದ ಕ್ಷೌರಿಕ ವೃತ್ತಿಯನ್ನೇ ಮುಂದುವರಿಸುವುದಾಗಿ ಹೇಳುತ್ತಾನೆ.

ವೆಂಕಟಶಾಮಿಯ ತಂದೆ ಕೆಳಮಟ್ಟದ ಸಮುದಾಯದವರು. ಅವರಿಗೆ ಯಾರೂ ಗೌರವವನ್ನು ಕೊಡುತ್ತಿರಲಿಲ್ಲ. ಅವರು ಮಗನಿಗೆ ವಿದ್ಯೆಯನ್ನು ಕಲಿಸಿದರೆ ಅವನು ಉನ್ನತ ಸ್ಥಾನಕ್ಕೇ ಏರುತ್ತಾನೆ ಆಗ ನಮಗೆ ಎಲ್ಲ ಜನ ಮರ್ಯಾದೆಯನ್ನು ಕೊಡುತ್ತಾರೆ ಎಂದು ಅಭಿಪ್ರಾಯ ಪಡುತ್ತಾನೆ ಆದರೆ ಅದರಲ್ಲಿ ಯಶಸ್ಸನ್ನು ಕಾಣುವುದಿಲ್ಲ. ಮಾಸ್ತಿ ಕಥೆಯಲ್ಲಿ ಪರಂಪರಾಗತವಾಗಿ ಬಂದಿರುವ ಕಸುಬನ್ನು ಬೆಂಬಲಿಸುತ್ತಾರೆ.

ಹೀಗೆ ಕಥೆಗಾರರು ತಮ್ಮ ಕಾಲದಲ್ಲಿ ಇದ್ದ ಕಸುಬುಗಳನ್ನು, ವೃತ್ತಿಗಳನ್ನು ನೋಡಿ ತುಂಬ ಆಸಕ್ತಿಯನ್ನು ಹೊಂದಿದ್ದರು. ಜೊತೆಗೆ ಈ ಸಮಾಜದ ನಡುವೆ ಬದುಕಿದ್ದರಿಂದ ಅವರ ಬದುಕು ಎಂತಹದ್ದು ಎಂದು ಇವರು ತಿಳಿದಿದ್ದರೂ ಆದ್ದರಿಂದ ಇವರು ತಮ್ಮ ಕಥೆಗಳಲ್ಲಿ ಇವರ ಬಗ್ಗೆ ಚಿತ್ರಿಸಿದ್ದಾರೆ.

ಕಥೆಗಾರರು ಹಿಂದಿನ ತಲೆ ಮಾರುಗಳಿಂದ ಬಳುವಳಿಯಾಗಿ ಬಂದಿರುವ ವೃತ್ತಿಗಳನ್ನು ಕುರಿತು ಹೇಳುತ್ತ, ಹಿಂದೆ ಅವಕ್ಕೇ ಸರಿಯಾದ ಮನ್ನಣೆ ದೊರಕುತ್ತಿದ್ದವು, ಆದರೇ ಈ ಎಲ್ಲ ಕಸುಬುಗಳ ವಂಶದವರು ಈ ಸಮಾಜದಲ್ಲಿ ತಮ್ಮನ್ನು ಗುರುತಿಸಿ ಕೊಳ್ಳಲಾಗದೇ ತುಂಬ ಕಷ್ಟದ ಜೀವನವನ್ನು ನಡೆಸುತ್ತಿದ್ದಾರೆ. ಇವರಿಗೆ ಸರ್ಕಾರದಿಂದ ಯಾವ ಸಹಾಯವು ಆಗುವುಲ್ಲ ಜೊತೆಗೆ ಇವರೆಲ್ಲ ಸ್ವಲ್ಪ ಮಟ್ಟಿಗೆ ಇನ್ನೂ ಅವಿದ್ಯಾವಂತರೇ. ಆದ್ದರಿಂದ ಇವರಿಗೆ ತಮ್ಮನ್ನು ಬೇರೆ ಕ್ಷೇತ್ರಗಳಲ್ಲಿ ಗುರುತಿಸಿಕೊಳ್ಳಲು ಆಗುತ್ತಿಲ್ಲ. ಸಮಾಜದಲ್ಲಿ ಇವರು ಇದ್ದರೂ ಇಲ್ಲದಂತೆ ಅಜ್ಞಾತವಾಗಿ ಜೀವಿಸುತ್ತಾ ಇದ್ದಾರೆ. ಈ ಎಲ್ಲ ಕಸುಬುಗಳು ಇಂದು ಎಲ್ಲಿಯೂ ಅಷ್ಟಾಗಿ ಕಂಡು ಬರುತ್ತಿಲ್ಲ, ಎಂದು ಹೇಳುತ್ತ ಈ ಕಸುಬುಗಳ ಬಗ್ಗೆ ತಮ್ಮ ಕತೆಗಳ ಮೂಲಕ ಜನರಿಗೆ ತಿಳಿಸುವ ಪ್ರಯತ್ನವನ್ನು ಮಾಡಿದ್ದಾರೆ.

ಅಧ್ಯಾಯ-೬
ಲೇಖಕರ ಕಥೆಗಳ ಶೈಲಿ ಮತ್ತು ಧೋರಣೆ

ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ ವೈಶಿಷ್ಟ್ಯವೆಂದರೆ ಅತ್ಯಂತ ಸರಳವಾದ ಭಾಷೆ, ಅಲಂಕಾರಿಕವಾದ ಭಾಷೆಯಲ್ಲ. ಎಲ್ಲಾ ಸ್ತರದ ಓದುಗರಿಗೂ ಸುಲಭವಾಗಿ ಅರ್ಥವಾಗುವ ಭಾಷೆ. ಮಾಸ್ತಿಯವರ ಬರವಣಿಗೆ ಶೈಲಿಯಲ್ಲಿ ಬರುವ ಚಾಮರಾಜನಗರ, ಮೈಸೂರು, ಶಂಕರಪುರ ಎಂಬ ಇತ್ಯಾದಿ ಊರುಗಳ ಹೆಸರುಗಳನ್ನು ನೋಡಿದಾಗ ದಕ್ಷಿಣ ಕನ್ನಡ ಭಾಷಾ ಶೈಲಿಯಲ್ಲಿ ರಚನೆಗೊಂಡಿದೆ.

ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರು ಸಾಹಿತ್ಯದಲ್ಲಿ ಬಳಸುವ ಭಾಷೆ ಯಾವತ್ತೂ ಸಂದಿಗ್ಧತೆಯತ್ತ, ಅಸ್ಪಷ್ಟತೆಯತ್ತ ವಾಲುವುದಿಲ್ಲ. ಅದು ಯಾವಾಗಲೂ ನಿರುದ್ವಿಗ್ನವಾದ ಶಾಂತ ರೀತಿಯ, ಅವಸರ, ಅಬ್ಬರ ವಿಸ್ಮಯಗಳಲ್ಲದೆ ಅತ್ಯಂತ ಸಮರ್ಥವಾಗಿ, ಸೊಗಸಾಗಿ ಮೂಡಿಬಂದಿರುತ್ತದೆ.

ಕಥೆಗಳ ಶೀರ್ಷಿಕೆಗಳು ಸಹ ಸರಳವಾಗಿವೆ. ಆ ಕಥೆಯ ಶೀರ್ಷಿಕೆಯನ್ನು ನೋಡಿದಾಗಲೇ ಸೂಕ್ಷ್ಮವಾಗಿ ಆ ಕಥೆಯ ವಿಚಾರ ತಿಳಿಯಲು ಸಾಧ್ಯವಾಗುತ್ತದೆ. ಉದಾರಣೆಗೆ – ಕಾಮನಹಬ್ಬದ ಕತೆ, ಮೊಸರಿನ ಮಂಗಮ್ಮ, ಕಲ್ಮಾಡಿಯ ಕೋಣ, ಜೋಗ್ಯೋರ ಅಂಜಪ್ಪನ ಕೋಳಿಕತೆ, ಗೌತಮಿ ಹೇಳಿದ ಕತೆ ಮುಂತಾದ ಕಥೆಗಳ ಶೀರ್ಷಿಕೆಯನ್ನು ನೋಡಿದಾಗ ಆ ಕಥೆ ಶೀರ್ಷಿಕೆಗೆ ಪೂರಕವಾಗಿ ಚಿತ್ರಿತವಾಗಿರುವುದನ್ನು ನೋಡಬಹುದು.

ಕಥೆಗಾರರು 'ಕಲ್ಮಾಡಿಯ ಕೋಣ' ಕಥೆಯಲ್ಲಿ ಕೋಣದ ದುರಂತವನ್ನು ತುಂಬ ಕಲಾತ್ಮಕವಾಗಿ ಚಿತ್ರಿಸಿರುವುದನ್ನು ನೋಡಬಹುದು. ಜೊತೆಗೆ ಯಾವುದೇ ವಿಶಿಷ್ಟ ತಂತ್ರವನ್ನು ಬಳಸದೆ ಸಹಜವಾಗಿ ಚಿತ್ರಿಸುತ್ತಾರೆ. ಹಾಗೂ ಅವರು ಜಾತಿ ಸಂಬಂಧಗಳ ವಿಶ್ಲೇಷಣೆಯಲ್ಲಿ 'ವೆಂಕಟಶಾಮಿಯ ಪ್ರಣಯ' ಕಥೆಯಲ್ಲಿ ತೋರುವ ಒಳ ನೋಟಗಳೂ ಗಂಭೀರ ಪರಿಶೀಲನೆಗೆ ಯೋಗ್ಯವಾಗಿರುವುದನ್ನು ಕಾಣಬಹುದು.

ಸ್ವಾರಸ್ಯ ಪೂರ್ಣವಾಗಿ ಕಥೆ ಹೇಳುವ ಸಾಮರ್ಥ್ಯ, ಭಾಷೆಯನ್ನು ಹೇಗೆ ಬಳಸಿ ಕೊಳ್ಳಬೇಕು ಎಂದು ತಿಳಿದಿದ್ದು, ಅಚ್ಚುಕಟ್ಟಾಗಿ ಬರೆಯುತ್ತಾರೆ.

ಕಥೆಗಾರರು ಯಾವುದಾದರೊಂದು ವಸ್ತು ಅಥವಾ ಘಟನೆಯನ್ನು ನೋಡಿ ಅದನ್ನು ಹೊಸದೇನೋ ಎನ್ನುವ ರೀತಿ ಅದನ್ನು ತಮ್ಮ ಸಾಹಿತ್ಯದಲ್ಲಿ ಓದುಗರಿಗೆ ಅರ್ಥವಾಗುವ ರೀತಿ ಕಟ್ಟಿಕೊಡುತ್ತಿದ್ದರು. ಇವರು ಭಾಷೆಯನ್ನು ಬಳಸುವ ರೀತಿಯಲ್ಲಿಯೇ ಧ್ವನಿರಮ್ಯತೆಯನ್ನು ಪಡೆದುಕೊಳ್ಳುತ್ತದೆ. ಉದಾ: ಕಲ್ಮಾಡಿಯ ಕೋಣದಲ್ಲಿ ಮುನಿಯನಿಗೆ ತನ್ನ ಪ್ರೀತಿಯ ಕರುವನ್ನು ಮಾರಿಗೆ ಬಲಿ ಕೊಡಲು ಸಾಧ್ಯವಿಲ್ಲವೆಂದು ಗೌಡರಿಗೆ ಹೇಳುವ ಧೈರ್ಯವಿಲ್ಲ. ಅದಕ್ಕೆ ಕಾರಣ "ಮಾರಿಯ ಕೋಪವನ್ನು ಹೇಗಾದರು ತಡೆದುಕೊಳ್ಳಬಹುದು. ಏಕೆಂದರೆ ಮಾರಿಯ ಕಣ್ಣು ಎಷ್ಟಾದರೂ ಕಲ್ಲಿನಿಂದ ಮಾಡಿದ್ದು. ಅದರೇ ಗೌಡರ ಕಣ್ಣು ಜೀವಂತ ದೇಹದಲ್ಲಿರುವಂತಹದ್ದು. ಅದು ಅರಳಿದರೆ ಮಾರಿಯ ಅಪ್ಪನ ಕಣ್ಣಿನಂತಿರುತ್ತದೆ."[೩]

ಮಾಸ್ತಿ ಅವರು ಕಥೆಗಳನ್ನು ಸಣ್ಣ ವಾಕ್ಯಗಳ ಮೂಲಕ ಮೊದಲಿನಿಂದ ಕೊನೆಯವರೆಗೆ ನೇರವಾಗಿ, ಮಧುರವಾಗಿ, ಅರ್ಥವಾಗುವಂತೆ ನಯವಾದ ಮಾತುಗಳ ಮೂಲಕ ಹೇಳಿದ್ದಾರೆ.

ಮಾಸ್ತಿ ಯಾರಿಗೋ ಹೇಳುತ್ತಿರುವಂತೆ ಕತೆಯನ್ನು ಬರೆಯುತ್ತಾರೆ. ಇವರು ನಿರೂಪಕರಾಗಿ ಯಾವುದೋ ಊರಿಗೆ ಹೋದಾಗ ಅಲ್ಲಿ ಇರುವ ಸ್ನೇಹಿತ ಆ ಊರಿನ ಘಟನೆಯನ್ನು ಕುರಿತು ಹೇಳುವಂತೆ, ಮಾಸ್ತಿಯವರು ತಮ್ಮ ಕತೆಯನ್ನು ಬರೆಯುತ್ತಾರೆ ಉದಾ:- ನಿರೂಪಕನ ಸ್ನೇಹಿತ ರಾಮಸ್ವಾಮಿ ತನ್ನ ಊರಿನ ಬಗ್ಗೆ ಪರಿಚಯ ಮಾಡುತ್ತ "ಇಲ್ಲಿ ನಮ್ಮೂರ ನಾಯಿಂದನ ಮಗ ವೆಂಕಟಶಾಮಿಯ ಗೋರಿಯಿದೆ. ಮಧ್ಯದ ಆ ಬೇವಿನ ಮರ ಅವನ ಗೋರಿಯ ತಲೆಯಲ್ಲಿ ನೆಟ್ಟಿರತಕ್ಕದ್ದು. ಅವನು ತೀರಿ ಹೋಗುವಾಗ್ಯೆ ತನ್ನನ್ನು ಇಲ್ಲಿ ಹೂಳಬೇಕೆಂದು ಕೇಳಿದ. ಆ ಹೊಲ ಅವರ ತಂದೆಯದು ಮಗನ ಇಷ್ಟ ನಡೆಸೋಣ ಎಂತಹ ತಂದೆ ಅವನ ಶವವನ್ನು ಇಲ್ಲಿ ಹೂಳಿಸಿ ಈ ಮರಗಳನ್ನು ಇಲ್ಲಿ ನೆಡಿಸಿದ. ಅದು ಒಂದು ಪ್ರೇಮದ ಕಥೆ"[೪] ಎಂದನು.

ನಿರೂಪಕರು 'ಪ್ರೇಮದ ಕಥೆಯೇ? ನನಗೆ ಹೇಳಬಾರದೆ' ಎಂದರೂ, ಅದಕ್ಕೇ ರಾಮಸ್ವಾಮಿ ಕಥೆಯನ್ನು ಹೇಳಲು ಪ್ರಾರಂಭಿಸಿದ್ದರು. ಈ ರೀತಿ ಮಾಸ್ತಿ ಕತೆಯನ್ನು ಬರೆಯುತ್ತ ಹೋಗುತ್ತಾರೆ.

ವಸ್ತು ಸುಂದರವಾಗಿದ್ದರೂ ಅದನ್ನು ರಚಿಸುವ ಶೈಲಿಯು ಅತಿಮುಖ್ಯವಾಗುತ್ತದೆ. ಕಾರಣವೆಂದರೆ ಕೆಲವೊಮ್ಮೆ ಕೆಲವು ಲೇಖಕರ ಸಾಹಿತ್ಯದಲ್ಲಿ ಬರುವ ಎಲ್ಲಾ ಘಟನೆಗಳು ಮುಖ್ಯವಾಗಿಲ್ಲದಿದ್ದರೂ ಸಹ ಅತ್ಯಂತ ಪರಿಣಾಮಕಾರಿಯಾಗಿ ರಚನೆಗೊಂಡಿದ್ದಾಗ ಮಾತ್ರ ಅವು ಮುಖ್ಯವಾದವುಗಳೇ ಎನಿಸಿಬಿಡುತ್ತವೆ. ಅದೇ ಸಂದರ್ಭದಲ್ಲಿ ವಸ್ತು ಎಷ್ಟೇ ಮುಖ್ಯವಾಗಿದ್ದರೂ ಪರಿಣಾಮಕಾರಿಯಾಗಿ ರಚನೆಯಾಗದಿದ್ದರೆ ಅದಕ್ಕೆ ದೊರೆಯ ಬೇಕಾದ ಮಹತ್ವ ದೊರೆಯದೆ ಹೋಗಬಹುದು. ಆದ್ದರಿಂದ ಅದರ ರಚನಾ ವಿನ್ಯಾಸವೂ ಸಹ ಅತಿ ಮುಖ್ಯವಾದುದು.

ಮಾಸ್ತಿಯವರ ಕಥೆಗಳಲ್ಲಿ ಬರುವ ಊರುಗಳನ್ನು ತುಂಬ ಚೆನ್ನಾಗಿ ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತಾರೆ. ಉದಾ:-ವೆಂಕಟಶಾಮಿಯ ಪ್ರಣಯ ಕಥೆಯಲ್ಲಿ ನಿರೂಪಕರು ರಾಮಸ್ವಾಮಿಯ ಊರಿಗೆ ಹೋದಾಗ ಇಬ್ಬರು ತುಂಬ ಸೊಗಸಾದ ತೋಟದಲ್ಲಿ ಕುಳಿತಿದ್ದರು "ದೂರದಲ್ಲಿ ಒಂದು ಕೆರೆಯ ಕಟ್ಟೆ ಕಾಣುತ್ತಿತ್ತು. ಅದರ ಕೆಳಗೆ ಒಂದು ವಿಸ್ತಾರವಾದ ಗದ್ದೆಯ ಬೈಲು. ಅದರ ಬಲಗಡೆಗೆ ಒಂದು ಮಾವಿನ ತೋಪು. ಎಡಗಡೆಗೆ ಊರ ಹೊಲಗಳು. ಕೆರೆಯ ನೀರು ಗದ್ದೆಯ ಮೇಲೆ ಹಾಯ್ದು ಇವರು ಕುಳಿತಿದ್ದ ಸ್ಥಳದ ಪಕ್ಕದಲ್ಲಿ ಒಂದು ಸಣ್ಣ ಕಾಲುವೆಯಾಗಿ ಹರಿಯುತ್ತಿತ್ತು."[೫] ಎಂದು ವರ್ಣಿಸುತ್ತಾರೆ.

ಸಾಹಿತ್ಯ ರಚನೆಯಾಗುವ ಭಾಷೆ ಸರಳವಾಗಿದ್ದಾಗ ಮಾತ್ರ ಓದುಗರಿಗೆ ಸುಲಭವಾಗಿ ಅರ್ಥವಾಗಲು ಸಾಧ್ಯವಾಗುತ್ತದೆ. ಹೊಸಗನ್ನಡ ಶೈಲಿಯನ್ನು ರೂಪಿಸಿದ ಶಿಲ್ಪಿಗಳಲ್ಲಿ ಮಾಸ್ತಿಯವರಿಗೂ ಗಣ್ಯಸ್ಥಾನವಿದೆ. ಇವರ ಕಥೆಗಳಲ್ಲಿ ಅತ್ಯಂತ ಸರಳ ಸುಂದರವಾದ ರೀತಿಯಲ್ಲಿ ಬರವಣಿಗೆಯಿರುವುದನ್ನು ನೋಡಬಹುದು. ಇವರು ಎಂದೊ ಎಲ್ಲಿಯೋ ನಡೆದ ಪ್ರಸಂಗವನ್ನು ಯಾರಿಗೋ ಹೇಳುತ್ತಿರುವಂತೆ ಇಲ್ಲವೇ ಯಾರೋ ಹೇಳುತ್ತಿರುವಂತೆ ಕತೆಯನ್ನು ರಚಿಸಿದ್ದಾರೆ.

ಕಥೆಗಾರರು ಔಚಿತ್ಯವರಿತ ಹಾಸ್ಯಮಿಶ್ರಿತ ಗದ್ಯ ಶೈಲಿಯಿಂದಾಗಿ ಭಾಷೆಯಲ್ಲಿ ಹೊಸತನ ತಂದಿದ್ದಾರೆ. ಈ ಮಾತುಗಳಿಗೆ ಅವರ ಕಥಾ ಸಂಕಲನಗಳೇ ಸಾಕ್ಷಿಯಾಗಿವೆ. ಕಥೆಗಳನ್ನು ನಿರೂಪಿಸುವ ಸಂದರ್ಭದಲ್ಲಿ ಅವುಗಳನ್ನು ಅತ್ಯಂತ ಆಪ್ತವಾಗಿ ಚಿತ್ರಿಸುವುದನ್ನು ಕಾಣಬಹುದು. ಹಾಗೆಂದ ಮಾತ್ರಕ್ಕೆ ಎಲ್ಲವೂ ಲೇಖಕನ ಸ್ವಂತ ಅನುಭವಗಳೆಂದು ತಿಳಿದುಕೊಳ್ಳುವುದು ಸಹ ಅಷ್ಟೇ ಅಸಮಂಜಸವೆನಿಸುತ್ತದೆ. ಏಕೆಂದರೆ ಒಂದು ವಸ್ತುವನ್ನು ಕಲಾಕೃತಿಯಾಗಿ ಚಿತ್ರಿಸುವಾಗ ಅದರಲ್ಲಿ

ಬರುವಾತ ಸಂಪೂರ್ಣನಾಗಿ ತಲ್ಲೀನನಾಗಿ ಚಿತ್ರಿಸುವುದು ಒಬ್ಬ ಸೃಜನಶೀಲ ಬರಹಗಾರನ ಲಕ್ಷಣವೆಂದು ಹೇಳಬಹುದು. ಆ ರೀತಿಯಾಗಿ ಬಂದಾಗ ಅದು ಯಶಸ್ವಿಯೂ ಆಗುತ್ತದೆ.

ಧೋರಣೆ :–

ಸಾಮಾನ್ಯ ಮನುಷ್ಯನ ಜೀವನ ಕ್ರಮದ ಹಿಂದಿರುವ ಶಕ್ತಿಗಳ ವಸ್ತು ನಿಷ್ಠ ಗ್ರಹಿಕೆಯೆ ಮಾಸ್ತಿಯವರ ಕಥೆಗಳ ಹಿಂದಿರುವ ಪ್ರಮುಖ ಆಶಯವಾಗಿದೆ. ಜೊತೆಗೆ ಇವರ ಕಥೆಗಳ ಪ್ರಮುಖ ವಸ್ತುಗಳೆಂದರೆ ಅಸಹಾಯಕತೆ, ಹಿಂಸೆ, ಕೌಟುಂಬಿಕ ವ್ಯವಸ್ಥೆ, ಆಚರಣೆ, ಜಾತಿ, ಮನುಷ್ಯನ ಸಣ್ಣತನ.

ಶ್ರೀನಿವಾಸರು ಒಬ್ಬ ಮಹಾನ್ ವಾಸ್ತವವಾದೀ. ಇವರ ಕಥಾ ಲೋಕದಲ್ಲಿ ಅವರ ಅಭೀಪ್ಸೆಗಳು, ಕನಸುಗಳು, ಸದಾಶಯಗಳು, ಎಲ್ಲವೂ ಕೂಡ ವಾಸ್ತವ ಲೋಕದ ಮೇಲೆಯೇ ಚಿತ್ರಿತವಾಗಿವೆ. 'ಮೊಸರಿನ ಮಂಗಮ್ಮ', 'ವೆಂಕಟಶಾಮಿಯ ಪ್ರಣಯ', 'ನಳನಿಯ ತಂದೆ ಕತೆ'ಯನ್ನು ಓದಿದರೆ ಅವರಂಥ ಕಟ್ಟಾ ವಾಸ್ತವವಾದಿ ಎಂಬುದು ತಿಳಯುತ್ತದೆ. ಮೊಸರಿನ ಮಂಗಮ್ಮನ ಕತೆಯಲ್ಲಿ ಅತ್ತೆ ಸೊಸೆಯರ ಜಗಳವನ್ನು ನೋಡಬಹುದು. ಮಗ ತಾಯಿಯನ್ನು ಬಿಟ್ಟು ಹೆಂಡತಿ ಕಡೆ ಮಾತನಾಡುತ್ತ "ಇನ್ನೇನು ಮಾಡೋಕಾಗ್ತದವ್ವ, ಹೆಂಡ್ತಿ ಇದ್ರೆ ನಾನಿರೋದಿಲ್ಲ ನಾನಿದ್ರೆ, ಹೆಂಡ್ತಿ ಇರೋದು ಬೇಡ ಅಂದ್ರೆ, ದಿಕ್ಕಿಲ್ಲದ ಹೆಂಗ್ಸು ಅವಳ್ನ ಏನು ಮಾಡೋದು?' ನಿನ್ನನ್ನು ನಾನು ಸಾಕ ಬೇಕಾಗಿಲ್ಲ ಅಂತ ಹೇಳಿದನು."[೧] ಇವು ದಿನ ನಿತ್ಯ ಕುಟುಂಬಗಳಲ್ಲಿ ನಡೆಯುತ್ತ ಇವೆ.

"ವಾಸ್ತವ ಬದುಕಿನ ಸಂಕೀರ್ಣತೆ, ಸಂದಿಗ್ಧತೆಗಳನ್ನು ಬಲ್ಲವರಾದರೂ ಅದು ಇರಬೇಕಾದ ಅಂದರೆ ಒಂದು ಆದರ್ಶ ರೀತಿಯೆಂಬಂತೆ ಚಿತ್ರಿಸುವ ಹಂಬಲವೇ ಹೆಚ್ಚು"[೨] ಎಂದು ಜಿ.ಎಚ್ ನಾಯಕ್ ಹೇಳಿದ್ದಾರೆ.

ಮಾಸ್ತಿ ಅವರು "ಮಾನವತಾವಾದದ ಉದಾರವಾದೀ ಪರಂಪರೆಗೆ ಸೇರಿದವರು, ಇವರ ಕಥೆಗಳಲ್ಲಿ ಎಲ್ಲ ವರ್ಗ, ವರ್ಣಗಳ ಜನರು ಬರುತ್ತಾರೆ. ಆದರೆ ಎಲ್ಲದರಲ್ಲೂ, ಎಲ್ಲ ಕಡೆಯೂ ಮನುಷ್ಯನ ಘನತೆಯನ್ನು ಉದಾತ್ತತೆಯನ್ನು ಎತ್ತಿಹಿಡಿಯುವುದೇ ಮಾಸ್ತಿಯವರ ಉದ್ದೇಶ"[೩].

ಅದ್ದರಿಂದಲೇ ಇವರ ಕಥೆಗಳಲ್ಲಿ ಬರುವ ಸಾಮಾನ್ಯರಲ್ಲಿ ಸಾಮಾನ್ಯರಾದ ನೊಂದ ಯಾವ ಜೀವಿಗಳು ಕೂಡ ಸೋಲುವುದಿಲ್ಲ.

ಮಾಸ್ತಿ ಅವರು ಕಥೆಯನ್ನು ಹೇಳುವ ಸಂದರ್ಭದಲ್ಲಿ ಎಲ್ಲಿಯೂ ಉದ್ವಿಗ್ನರಾಗುವುದಿಲ್ಲ. ಒಂದೇ ವೇಗದಲ್ಲಿ ನಿಧಾನವಾಗಿ ಹರಿಯುವ ನೀರಿನಂತೆ ಕತೆ ತೀರಾ ಸಾಮಾನ್ಯವಾದ ವ್ಯಾವಹಾರಿಕವಾದ ವಿವರಗಳೊಂದಿಗೆ ಪ್ರಾರಂಭವಾಗುವುದು. ಹೀಗೆ ಪ್ರಾರಂಭವಾದ ಕತೆ ಬೆಳೆಯುತ್ತಾ ಓದುಗನನ್ನು ಚಕಿತಗೊಳಸುತ್ತ ಅವನಿಗೇ ಅರಿವೇ ಆಗದಂತೆ ಕೊನೆಯಲ್ಲಿ ಒಂದು ಉದಾತ್ತವಾದ ತತ್ವಕ್ಕೆ ಜೀವ ದರ್ಶನಕ್ಕೆ ಬಂದು ನಿಲ್ಲುತ್ತದೆ.

ಶ್ರೀನಿವಾಸರು ತಮ್ಮ ಜೀವನಾನುಭವ ಮತ್ತು ಕಲೆಗಾರಿಕೆಗಳೆರಡೂ ಒಂದರೊಳಗೊಂದು ಬೆರೆತಂತೆ ಬರೆಯುವ ಶೈಲಿಯು ಸಹ ಪ್ರಮುಖವಾದದ್ದು, ಅದೇ ಯಶಸ್ಸಿಗೆ ಕಾರಣವಾಗುತ್ತವೆಂಬುದನ್ನು ಇವರ ಕಥೆಗಳ ಸಂದರ್ಭಕ್ಕೆ ಹೇಳಬಹುದು.

ಒಟ್ಟಾರೆಯಾಗಿ ಕಥೆಗಾರರು ತಾವು ಹೇಳಬೇಕಾದ ವಿಚಾರಗಳನ್ನು ತಮ್ಮ ಬರಹದ ಮೂಲಕ ಆಬಾಲ ವೃದ್ಧರಾದಿಯಾಗಿ, ಅರ್ಥ ಮಾಡಿಕೊಳ್ಳಲು ಅನುಕೂಲವಾಗುವಂತೆ ತಮ್ಮ ಕಥೆಗಳಲ್ಲಿ ಹೇಳುತ್ತಾರೆ. ಅವರ ಭಾಷೆ ಸರಳ, ನೇರ. ಗದ್ಯದಲ್ಲಿ ಮೂರ್ತಿವೆತ್ತಂತೆ ಅವರ ವ್ಯಕ್ತಿತ್ವ ಮೂಡಿಬಂದಿದೆ.

ಅಡಿಟಿಪ್ಪಣಿ

೧. ಮಾಸ್ತಿ - ಸಣ್ಣ ಕತೆಗಳು ಸಂಪುಟ ೨. ಪುಟ-೧೩

೨. ಜಿ.ಎಚ್.ನಾಯಕ್, ಮಾಸ್ತಿಯವರ ಕಥೆಗಳಲ್ಲಿ ಸಂಘರ್ಷದ ಸ್ವರೂಪ

– ಮಾಸ್ತಿ ಅವರ ಸಾಹಿತ್ಯ ಒಂದು ಅಧ್ಯಯನ. ಪುಟ-೫೨

೩. ಮಾಸ್ತಿ - ಸಣ್ಣ ಕತೆಗಳು ಸಂಪುಟ ೨ . ಪುಟ-೧೯೪

೪. ಅದೇ ಪುಟ-೭೪

೫. ಅದೇ ಪುಟ-೮೦

೬. ರಾ. ಲಕ್ಷ್ಮೀನಾರಾಯಣ, ಮಾಸ್ತಿ, ಪುಟ-೧೨

ಅಧ್ಯಾಯ – ೭
ಉಪಸಂಹಾರ

ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರು ಹೊಸಗನ್ನಡ ಸಾಹಿತ್ಯದ ನಿರ್ಮಾಪಕರಲ್ಲೊಬ್ಬರು. ಎಪ್ಪತ್ತೈದು ವರ್ಷಗಳಷ್ಟು ಸುದೀರ್ಘ ಕಾಲ ಸಾಹಿತ್ಯ ಸೇವೆ ಸಲ್ಲಿಸಿದ್ದಾರೆ. ಇವರು ಸಾಹಿತಿಯಾಗಿ ಎಷ್ಟು ಮಹತ್ವದ ಸಿದ್ಧಿಯನ್ನು ಪಡೆದಿದ್ದರೋ ಅಷ್ಟೆ ಮಹತ್ವದ ಬಾಳನ್ನು ಬದುಕಿದವರು. ದೊಡ್ಡ ಮನೆಯ ಹುಡುಗನಾಗಿ ಹುಟ್ಟಿ ಕಡು ಬಡತನದಲ್ಲಿ ಜೀವನವನ್ನು ಸಾಗಿಸ ಬೇಕಾಯಿತ್ತು.

ಕನ್ನಡ ಸಾಹಿತ್ಯದ ಒಬ್ಬ ಶ್ರೇಷ್ಠ ಬರಹಗಾರರಾಗಿ ಇವರು ಕತೆ, ಕಾದಂಬರಿ, ಕವನ, ನಾಟಕ, ಜೀವನ ಚರಿತ್ರೆ, ಅನುವಾದಿತ ಕೃತಿಗಳನ್ನು ರಚಿಸಿದ್ದಾರೆ. ಆದರೆ ಅವರು ಹೆಚ್ಚು ಬರೆದದ್ದು ಮಾತ್ರ ಕಥೆಗಳನ್ನು ನೂರು ಕತೆಗಳನ್ನು ಬರೆಯುವುದರ ಮೂಲಕ 'ಸಣ್ಣ ಕಥೆಗಳ ಜನಕ' ಎನಿಸಿಕೊಂಡಿದ್ದಾರೆ.

ನವೋದಯ ಕಾಲಘಟ್ಟದಲ್ಲಿ ನಮ್ಮ ದೇಶ ಕಂಡಿರುವ ಅಪೂರ್ವ ಸಮರ್ಥ ಕ್ರಿಯಾಶೀಲ ಸಂಯೋಜಕ ಕಲಾವಿದರು.

ಮಾಸ್ತಿ ಅವರು ಕಥೆಗಳು ನನ್ನಲ್ಲಿ ಒಂದು ಬಗೆಯ ವಿಸ್ಮಯವನ್ನು ಮೂಡಿಸಿವೆ. ಇವರು ಹುಟ್ಟಿ ಬೆಳೆದದ್ದು ವೈದಿಕ ಸಂಪ್ರದಾಯದ ವಾತಾವರಣದಲ್ಲಿ. ಆ ಕಾಲದಲ್ಲಿ ಸಿಗುತ್ತಿದ್ದ ಉನ್ನತ ಶಿಕ್ಷಣವನ್ನು ಪಡೆದು ಇವರು ಕಮಿಷನರ್ ಆಗಿ ಸೇವೆ ಸಲ್ಲಿಸಿದರು. ಜೊತೆಗೆ ವಿಶ್ವೇಶ್ವರಯ್ಯ ನಂತರವರಿಗೆ ಆಪ್ತಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದರು. ಹೀಗೆ ಆ ಕಾಲದ ಸಮಾಜದಲ್ಲಿ ಅತ್ಯಂತ ಮೇಲ್ದರ್ಜೆಯ ಜೀವನವನ್ನು ಮಾಡುತ್ತ ವೈದಿಕ ಸಂಪ್ರದಾಯವನ್ನು ಕ್ರಮ ಬದ್ಧವಾಗಿ ಅನುಸರಿಸುತ್ತ, ಇವರು ತಮ್ಮ ಕಥೆಗಳಲ್ಲಿ ತಮ್ಮ ಬದುಕಿಗೆ ತೀರ ವಿರುದ್ಧವೆನ್ನಿಸುವ ಹಳ್ಳಿಗಾಡಿನ ಕೆಳವರ್ಗದ, ಜನ ಸಾಮಾನ್ಯರ ಬದುಕನ್ನು ತಮ್ಮ ಕತೆಗಳಿಗೆ ವಸ್ತುವನ್ನಾಗಿ ಮಾಡಿಕೊಂಡು ಅದೇ ಸಮುದಾಯದ ವ್ಯಕ್ತಿ ಕಥೆಯನ್ನು ಹೇಳುತ್ತಿರುವಂತೆ ಮಾಸ್ತಿ ತುಂಬ ಚೆನ್ನಾಗಿ ಆ ಕಥೆಗಳನ್ನು ಬರೆದಿದ್ದಾರೆ.

ಶ್ರೀನಿವಾಸರು ತಮ್ಮ ವೃತ್ತಿ ಜೀವನದ ಜೊತೆಗೆ ಸಾಹಿತ್ಯ ರಚನೆಯಲ್ಲಿ ತಮ್ಮನ್ನು ತೊಡಗಿಸಿ ಕೊಂಡರು. ನಾನು 'ಮಾಸ್ತಿ ಕಥೆಗಳು; ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ವಿಷಯವನ್ನು ನಿಬಂಧ ರಚನೆಗಾಗಿ ತೆಗೆದುಕೊಂಡಿದ್ದೇನೆ. ಈ ನಿಬಂಧ ರಚನೆಯ ಮುಖ್ಯ ಅಂಶಗಳೆಂದರೆ

ಮಾಸ್ತಿಯವರ ಒಂದು ಸಣ್ಣ ಪರಿಚಯ ಮಾಡಿಕೊಡುವುದರ ಜೊತೆಗೆ ಅವರ ಕಥೆಗಳಲ್ಲಿ ಬರುವ ಸಾಮಾಜಿಕ, ಸಾಂಸ್ಕೃತಿಕ ಅಂದರೆ ಜಾತಿ, ನ್ಯಾಯ ತೀರ್ಮಾನ, ಆಚರಣೆಗಳು, ಜನ ಜೀವನ, ಹಬ್ಬ – ಸಂಪ್ರದಾಯ, ದೆವ್ವ, ವೃತ್ತಿಗಳು ಮುಂತಾದ ಅಂಶಗಳನ್ನು ಕುರಿತು ಹೇಳದ್ದೇನೆ.

ಈ ನಿಬಂಧದಲ್ಲಿ ಮಾಸ್ತಿಯವರ 'ಕಲ್ಮಾಡಿಯ ಕೋಣ', 'ಜೋಗ್ಯೋರ ಅಂಜಪ್ಪನ ಕೋಳಿ ಕತೆ', 'ಕಾಮನ ಹಬ್ಬದ ಒಂದು ಕತೆ', 'ಇನ್ನೊಂದು ಹಳೆಯ ಕತೆ', 'ಮೊಸರಿನ ಮಂಗಮ್ಮ', 'ವೆಂಕಟಶಾಮಿಯ ಪ್ರಣಯ', ಮಲೆನಾಡಿನ ಒಂದು ಪಿಶಾಚ ಇತ್ಯಾದಿ ಕೆಲವು ಕತೆಗಳನ್ನು ತೆಗೆದು ಕೊಂಡು ಆ ಕತೆಗಳಲ್ಲಿ ಬರುವ ಸಾಂಸ್ಕೃತಿಕ ಅಂಶಗಳನ್ನು ಗುರುತಿಸುವ ಪ್ರಯತ್ನವಾಗಿದೆ ಒಟ್ಟಾರೆಯಾಗಿ ಯಾವುದೇ ಒಬ್ಬ ಕಥೆಗಾರರ ಕಥಾ ಸಾಹಿತ್ಯದ ಪೂರ್ಣ ಅಧ್ಯಯನ ಸಾಧ್ಯವಾಗದಿದ್ದರೂ ಸಹ ಕೆಲವು ಕಥೆಗಳ ಹಿನ್ನೆಲೆಯಲ್ಲಿ ಅಧ್ಯಯನವನ್ನು ಮಾಡಿದ್ದೇನೆ.

ಮಾಸ್ತಿ ಅವರು ಕಥೆಗಳಲ್ಲಿ ಹೆಚ್ಚಾಗಿ ನ್ಯಾಯ ತೀರ್ಮಾನಕ್ಕೇ ಸಂಬಂಧ ಪಟ್ಟ ಕಥೆಗಳನ್ನು ಕಾಣಬಹುದು. ನ್ಯಾಯಧೀಶನಾದವನು ಸಾಕ್ಷಿಗಿಂತ ಮುಖ್ಯವಾಗಿ, ಮಾನವೀಯತೆಯಿಂದ ತೀರ್ಪನ್ನು ಕೊಡಬೇಕು ಎಂದು ಅಭಿಪ್ರಾಯ ಪಡುತ್ತಾರೆ. ಕೌಟುಂಬಿಕ ವ್ಯವಸ್ಥೆಯನ್ನು ಕುರಿತು ಹೇಳುತ್ತ ಕುಟುಂಬಗಳಲ್ಲಿ, ಇತ್ತೀಚೆಗೆ ಬಾಂಧವ್ಯಗಳು ಕಡಿಮೆಯಾಗುತ್ತ ಬರುತ್ತಿವೆ. ಅದ್ದರಿಂದ ಪ್ರತಿಯೊಬ್ಬ ಮನುಷ್ಯನು ಉತ್ತಮವಾದ ಬಾಂಧವ್ಯವನ್ನು ರೂಪಿಸಿಕೊಳ್ಳಬೇಕು ಎನ್ನುತ್ತಾರೆ. ಗಂಡ–ಹೆಂಡತಿ ಸಂಬಂಧದ ಬಗ್ಗೆ ಹೇಳುತ್ತಾರೆ. ಇವರ ಸಂಬಂಧ ಪವಿತ್ರವಾದದ್ದು. ಆದರೆ ಇಂದು ಗಂಡ ಸರಿ ಇದ್ದರೆ ಹೆಂಡತಿ ತಪ್ಪು ದಾರಿ ಹಿಡಿದಿರುತ್ತಾಳೆ ಅದೇ ರೀತಿ ಹೆಂಡತಿಯಾದವಳು ಸರಿಯಾಗಿದ್ದರೆ ಗಂಡ ಕೆಟ್ಟವನಾಗಿರುತ್ತಾನೆ. ಇಬ್ಬರು ಪ್ರೀತಿಯಿಂದ ಇರುವವರು ತುಂಬ ವಿರಳ.

ಹಬ್ಬಗಳ ಬಗ್ಗೆ ಪ್ರಾಸ್ತಪಿಸುತ್ತ ಹಿಂದೆ ಯಾವ ರೀತಿಯಲ್ಲಿ ಆಚರಣೆಗಳನ್ನು ಮಾಡಲಾಗುತ್ತಿತ್ತು ಎಂಬ ವಿಚಾರವನ್ನು ಹೇಳುತ್ತಾರೆ. ಜೊತೆಗೆ ದೆವ್ವಗಳ ಬಗ್ಗೆ ಹೇಳುತ್ತಾರೆ. ಮಾಸ್ತಿ ದೆವ್ವವನ್ನು ನಂಬದೆ ತುಂಬ ಹಾಸ್ಯಾತ್ಮಕವಾಗಿ ರಚಿಸಿದ್ದಾರೆ. ಬೇರೆ ಬೇರೆ ಪ್ರದೇಶಗಳಲ್ಲಿ ಕಂಡು ಬರುವ ಆಚರಣೆಗಳ ಬಗ್ಗೆ ತಮ್ಮ ಕಥೆಗಳಲ್ಲಿ ಹೇಳಲಾಗಿದೆ.

ಕಥೆಗಾರರು ಸಾಮಾನ್ಯ ವ್ಯಕ್ತಿಗಳನ್ನೇ ತಮ್ಮ ಕಥಾ ವ್ಯಕ್ತಿಗಳನ್ನಾಗಿ ಮಾಡಿಕೊಂಡು, ಅವರ ಬದುಕಿನಲ್ಲಿರಬಹುದಾದ ಅಸಾಮಾನ್ಯತೆ ಗುರುತಿಸಿ ಹೇಳುವ ಪ್ರಯತ್ನವನ್ನು ಮಾಡಿದ್ದಾರೆ. ಕುರ್ತುಕೋಟಿಯವರು ಹೇಳದಂತೆ "ನಾವು ದಿನ ನಿತ್ಯ ಓಡಾಡುವ ನೆಲದ ಕೆಳಗೇ

ಭೂಗರ್ಭಶಾಸ್ತ್ರಜ್ಞರು ಬಂಗಾರದ ನೆಲೆಯನ್ನು ಗುರುತಿಸುವಂತೆ ಶ್ರೀನಿವಾಸರು, ಈ ವ್ಯಕ್ತಿಗಳ ಹಿಂದಿನ ಉನ್ನತಿಯನ್ನು ತಟ್ಟನೆ ಗುರುತಿಸುತ್ತಾರೆ."೧ ಮನುಷ್ಯನ ಘನತೆ ಉನ್ನತಿಗಳು ಮಾಸ್ತಿಯವರ ಕಥಾ ಸಾಹಿತ್ಯದಲ್ಲಿ ಅಭಿವ್ಯಕ್ತಿಯನ್ನು ಪಡೆದುಕೊಂಡಿದೆ.

ಮಾಸ್ತಿ ಅವರು ಕಥೆಗಳನ್ನು ಅಧ್ಯಯನ ಮಾಡುವ ಸಂಧರ್ಭದಲ್ಲಿ ಕಥೆಗಳ ವಸ್ತು, ಶೈಲಿ ಮೊದಲಾದವುಗಳನ್ನು ಕಾಣಬಹುದು. ಇವರು ರಚಿಸಿರುವ ಕಥೆಗಳನ್ನು ಸಣ್ಣ ಕಥೆಗಳ ಶೈಲಿ, ಬರವಣಿಗೆ ಹಿನ್ನೆಲೆಯಲ್ಲಿ ನವೋದಯ ಕಥೆಗಳ ಲಕ್ಷಣಗಳ ಹಿನ್ನೆಲೆಯಲ್ಲಿ, ಉಳಿದ ಸಣ್ಣ ಕಥೆಗಳಲ್ಲಿ ಮತ್ತು ಮಾಸ್ತಿಯವರ ಕಥೆಗಳಲ್ಲಿ ಇರುವ ಸಾಮಾಜಿಕ, ಸಾಂಸ್ಕೃತಿಕ ಅಂಶಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದರೆ ಅದು ಒಂದು ಪೂರ್ಣ ಪ್ರಮಾಣವೆನ್ನುವಷ್ಟರ ಮಟ್ಟಿಗೆ ಅಧ್ಯಯನ ಮಾಡಿದಂತಾಗುತ್ತಿತ್ತು. ಆದರೆ ಆ ಕಾರ್ಯವನ್ನು ಕೆಲವು ಅಂಶಗಳ ಹಿನ್ನೆಲೆಯಲ್ಲಿ ಮಾಡುವ ಕಾರ್ಯವನ್ನು ಸ್ವಲ್ಪ ಮಟ್ಟಿಗೆ ಮಾಡಿದ್ದೇನೆ.

ಜೀವನದ ನಿಜಗಳೇನು? ನೋವುಗಳೇನು? ತಾಳುವುದೆಂದರೇನು? ಗೆಲ್ಲುವುದೆಂದರೇನು? ಎಂಬ ಕಷ್ಟಗಳನ್ನು ಭಾವಾತಿರೇಕವಿಲ್ಲದೆ ಎದುರಿಸಲು ಮಾಸ್ತಿ ಕಲಿಸುತ್ತಾರೆ. ನಮ್ಮ ಭಾವನಾ ಪ್ರಪಂಚವನ್ನು ಪಕ್ವವಾಗಿಸಬಲ್ಲ ಶಿಕ್ಷಣ ಅವರ ಕಥೆಗಳಿಂದ ಖಂಡಿತ ಸಿಗುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ ಮಾಸ್ತಿಯವರು ಕಥೆಗಳನ್ನು ರಚಿಸುವುದರ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸುವುದರ ಜೊತೆಗೆ ತಮ್ಮ ಹೆಸರನ್ನು ಸಾಹಿತ್ಯ ಕ್ಷೇತ್ರದಲ್ಲಿ ಚಿರಸ್ಥಾಯಿಯಾಗಿ ಉಳಿಸಿ ಕೊಂಡಿದ್ದಾರೆ. ಇಂತಹ ಮಹಾನ್ ಸಾಹಿತಿಯ ಬಗ್ಗೆ ಪರಿಚಯವನ್ನು ಮಾಡುವಲ್ಲಿ ನಾನು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದೇನೆ.

ಅಡಿಟಿಪ್ಪಣಿ

೧.ಲಕ್ಷ್ಮೀನಾರಾಯಣ, ರಾ, ಮಾಸ್ತಿ, ಪುಟ-೧೩

ಗ್ರಂಥ ಋಣ

ಆಕರ ಗ್ರಂಥಗಳು

೧ ಮಾಸ್ತಿ ವೆಂಕಟೇಶ್‌ಅಯ್ಯಂಗಾರ್

ಮಾಸ್ತಿ ಕೆಲವು ಕಥೆಗಳು

ಪ್ರಕಾಶನ – ಪುರೋಗಾಮಿ ಸಾಹಿತ್ಯ ಸಂಘ, ಮಲ್ಲೇಶ್ವರಂ, ಬೆಂಗಳೂರು.

ಮುದ್ರಣ – ೧೯೯೧.

೨ ಶ್ರೀನಿವಾಸ

ಸಣ್ಣ ಕತೆಗಳು : ಸಂಪುಟ – ೨

ಸಂಪುಟ – ೩

ಪ್ರಕಾಶನ – ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜೀವನ

ಕಾರ್ಯಾಲಯ ಟ್ರಸ್ಟ್(ರಿ) ಮಾಸ್ತಿ ಮನೆ,

ಗವಿಪುರದ ವಿಸ್ತರಣ, ಬೆಂಗಳೂರು.

ಮುದ್ರಣ – ೨೦೦೭.

ಪರಾಮರ್ಶನ ಗ್ರಂಥ.

೧. ಅನಂತ್ ಮೂರ್ತಿ, ಯು.ಆರ್.
ಸಮಕ್ಷಮ [ವಿಮರ್ಶಾತ್ಮಕ ಲೇಖನಗಳು]
ಪ್ರಕಾಶನ – ಚೇತನ ಪ್ರಕಾಶನ ಗುಲಬರ್ಗಾ.
ಮುದ್ರಣ – ೧೯೮೦.

೨. ಅಮೂರ, ಜಿ.ಎಸ್.
ಕನ್ನಡ ಕಥನ ಸಾಹಿತ್ಯ : ಸಣ್ಣ ಕತೆ
ಪ್ರಕಾಶನ – ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.
ಮುದ್ರಣ – ೨೦೦೩.

೩. ಕೊದಂಡರಾಮ, ಎನ್.ಕೆ.
ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ
ಪ್ರಕಾಶನ – ದಾರಿದೀಪ ಎಜ್ಯುಕೇಶನ್ ಟ್ರಸ್ಟ್, ಮೈಸೂರು.
ಮುದ್ರಣ – ೧೯೯೭.

೪. ಬೆಳ್ಳೂರು ಮೈಲಾರ ಶ್ರೀಕಂಠಯ್ಯನವರಿಗೆ ಅವರ ಶಿಷ್ಯರೂ ಮಿತ್ರರೂ ಒಪ್ಪಿಸಿದ ಪ್ರಬಂಧಗಳ ಸಂಪುಟ.
ಸಂಭಾವನೆ
ಪ್ರಕಾಶಣ – ಕನ್ನಡ ಸಾಹಿತ್ಯ ಪರಿಷತ್ ಚಾಮರಾಜ ಪೇಟೆ, ಬೆಂಗಳೂರು.
ಮುದ್ರಣ – ೨೦೦೩.